ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 6 ಬುಧವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 111 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಒಳಮೀಸಲಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ 9.60 ಲಕ್ಷ ಮಂದಿ ತಮ್ಮ ತಮ್ಮ ಜಾತಿಯನ್ನೇ ನಮೂದಿಸಿಲ್ಲ!

- ಗಾಂಧಿನಗರ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಆತಂಕ
- ಈ ಮನೋಭಾವನೆಯಿಂದ ಸಮುದಾಯ ಇನ್ನೂ ಹಿಂದುಳಿಯುವ ಚಿಂತೆ



ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಮಂಗಳವಾರ 'ಸಮಾಜದ ಏಳಿಗೆಗಾಗಿ ಚಿಂತನ-ಮಂಥನ' ಸಭೆ ನಡೆಯಿತು.

ಮೈಸೂರು, ಆ.5(ಎಂಕೆ)- ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆಯಲ್ಲಿ ಪರಿಶಿಷ್ಟ ಜಾತಿಯ ಸುಮಾರು 9.60 ಲಕ್ಷ ಮಂದಿ ತಮ್ಮ ಜಾತಿಯನ್ನು ನಮೂದಿಸಿಲ್ಲ ಎಂದರೆ, ಯಾವ ಕಡೆಗೆ ಪರಿಶಿಷ್ಟ ಸಮುದಾಯ ಸಾಗುತ್ತಿದೆ ಎಂಬುದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ. ನಮ್ಮವರೇ ನಮ್ಮ ಸಮಾಜವನ್ನು ಸಮಾಧಿ ಮಾಡಲು ಹೊರಟಿದ್ದಾರೆಯೇ ಎಂದು ಗಾಂಧಿನಗರ ಉರಿಲಿಂಗಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಅಶೋಕ ಸರ್ಕಲ್ ಸಮೀಪದ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಆಯೋಜಿಸಿದ್ದ 'ಸಮಾಜದ ಏಳಿಗೆಗಾಗಿ ಚಿಂತನ-ಮಂಥನ' ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರದಲ್ಲೇ 7 ಲಕ್ಷ ಹಾಗೂ ಗ್ರಾಮೀಣ ಭಾಗದಲ್ಲಿ 2 ಲಕ್ಷ ಜನ ಜಾತಿ ನಮೂದಿಸಿಲ್ಲ. ಇದರಿಂದಾಗಿ ಸಮುದಾಯದ ಆಸ್ತಿ ಅನ್ಯ ಸಮುದಾಯದ ಪಾಲಾಗುವಲ್ಲಿ ಯಾವುದೇ ಸಂಶಯವಿಲ್ಲ ಎಂದು ವಿಷಾದಿಸಿದರು.

ಯಾವ ಸಮುದಾಯ ಸದಾ ಜಾಗೃತವಾಗಿರುತ್ತೋ ಆ ಸಮುದಾಯ ಜೀವಂತವಾಗಿರಲಿದೆ. ನಮ್ಮದು ಎಚ್ಚೆತ್ತ ಸಮುದಾಯ ಆಗದಿದ್ದರೆ, ನಮ್ಮ ಏಳಿಗೆ ಸಾಧ್ಯವಿಲ್ಲ. ಸಮಾನತೆಗಾಗಿ ಸಕ್ರಿಯವಾಗಿ ಹೋರಾಟ ಮಾಡುವಂತೆ ಅಂಬೇಡ್ಕರ್ ಅವರು ಹೇಳಿದ್ದರು. ಆದರೆ, ನಾವು ಅವರು ಹೇಳಿದಂತೆ ನಡೆದುಕೊಳ್ಳುತ್ತಿದ್ದೇವೆಯೇ. ಎಲ್ಲಾ ಜಾತಿ-ಸಮುದಾಯಗಳು ಒಗ್ಗಟ್ಟಿನ ಮಂತ್ರ ಜಪಿಸುವಾಗ ನಾವುಗಳು ಯಾವ ಕಡೆಗೆ ಚಲಿಸುತ್ತಿದ್ದೇವೆ ಎಂಬುದರ ಬಗ್ಗೆ ಚಿಂತಿಸಬೇಕಿದೆ ಎಂದರು.

ಸಮಾಜ ಸೇವೆಗಾಗಿ ತೊಡಗಿಸಿಕೊಳ್ಳುವವರ ಸಂಖ್ಯೆ ಜಾಸ್ತಿಯಾಗಬೇಕು. ನಮ್ಮದು ದೊಡ್ಡ ಸಮುದಾಯವಾಗಿದ್ದು, ಜಾತಿ ಸಮೀಕ್ಷೆಯಲ್ಲಿ ಜಾತಿ ನಮೂದಿಸದೆ ಇರುವುದರ ಫಲಿತಾಂಶ ಏನಾಗಲಿದೆ. ಸಮುದಾಯಕ್ಕೆ ಆಗುವ ಹಿನ್ನಡೆ ಏನೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಸಮುದಾಯಕ್ಕೆ ಏನಾದರೂ ಕೊಡುಗೆ ನೀಡದೇ ಸತ್ತರೆ ಅವರ ಸಾವಿಗೂ ಕ್ಷಮೆ ಇಲ್ಲ ಎಂದು ಎಚ್ಚರಿಸಿದರು.

ಪ್ರೊಜ್ಞಾನ ಸ್ವರೂಪಾನಂದ ಸ್ವಾಮೀಜಿ ಮಾತನಾಡಿ, ಪರಿಶಿಷ್ಟ ಸಮುದಾಯಲ್ಲಿನ ಬಡತನ ನಿವಾರಣೆಯಾಗಬೇಕಾದರೆ, ಈ ಸಮುದಾಯದವರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ತೊಡಗಿಕೊಳ್ಳಬೇಕು. ಸಮಾಜದ ಅಭ್ಯುದಯಕ್ಕೆ ಸೇವೆ ಸಲ್ಲಿಸಬೇಕು ಎಂದು ತಿಳಿಸಿದರಲ್ಲದೆ ಪ್ರಾಚೀನ ಯುಗ, ಮಧ್ಯ ಯುಗ, ಆಧುನಿಕ ಯುಗ, ಸಮಾಜದ ಮುಂದಿನ ಅಸ್ತಿತ್ವ, ನಿರುದ್ಯೋಗ ಸಮಸ್ಯೆ, ಬಡತನ ಮತ್ತು ಮುಂದಿನ ರಾಜಕೀಯ ಸವಾಲು ಹಾಗೂ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ವಿಷಯಗಳ ಕುರಿತು ಚರ್ಚಿಸಿದರು. ಮಾಜಿ ಮೇಯರ್ ಪುರುಷೋತ್ತಮ್, ಆದಿ ಕರ್ನಾಟಕ ಛಲವಾದಿ ಮಹಾಸಂಸ್ಥಾನ ಗುರುಪೀಠ ಅಧ್ಯಕ್ಷ ಮಹದೇವ ಮತ್ತಿತರರು ಉಪಸ್ಥಿತರಿದ್ದರು.

ಕೆಆರ್‌ಎಸ್ ಅಣೆಕಟ್ಟೆಗೆ ಟಿಪ್ಪು ಅಡಿಗಲ್ಲು; ಸಚಿವ ಮಹದೇವಪ್ಪ ಹೇಳಿಕೆ ಸತ್ಯ, ವಿವಾದ ಸೃಷ್ಟಿಸುವುದು ಬೇಡ

ಮಾಜಿ ಮೇಯರ್ ಪುರುಷೋತ್ತಮ್ ಸ್ಪಷ್ಟನೆ

ಮೈಸೂರು,ಆ.5(ಜಿಎ)-ಟಿಪ್ಪು ಸುಲ್ತಾನ್ ಕೆಆರ್‌ಎಸ್ ಅಣೆಕಟ್ಟೆಗೆ ಅಡಿಗಲ್ಲು ಹಾಕಿದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೀಡಿರುವ ಹೇಳಿಕೆ ಸತ್ಯ. ಆದರೆ, ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಂಡು ವಿವಾದ ಸೃಷ್ಟಿಸುತ್ತಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಆರ್‌ಎಸ್ ಅಣೆಕಟ್ಟೆಗೆ ಮೊದಲು ಅಡಿಗಲ್ಲು ಹಾಕಿದ್ದು ಟಿಪ್ಪು. ಆದರೇ ಯುದ್ಧಗಳಲ್ಲಿ ಸೋತ ಹಿನ್ನೆಲೆಯಲ್ಲಿ ಕಾಮಗಾರಿ ಆರಂಭಗೊಳ್ಳಲಿಲ್ಲ. ಅದನ್ನು ಮಹದೇವಪ್ಪ ಅಡಿಗಲ್ಲು ಹಾಕಿದ್ದಾರೆ ಎಂದು ಅವರ ಸಾಧನೆ ಹೇಳಿದ್ದಾರೆ. ಇತಿಹಾಸದ ಸತ್ಯವನ್ನು ಒಪ್ಪಿಕೊಳ್ಳಬೇಕು. ಇದಕ್ಕೆ ಕೆಆರ್‌ಎಸ್ ಬಳಿಯೇ ಸಾಕ್ಷಿಯೂ ಇದೆ ಎಂದರು.

1911ರ ಸಂದರ್ಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡುವ ವೇಳೆ ಟಿಪ್ಪು ಸುಲ್ತಾನರ ಅಡಿಗಲ್ಲು ಸಿಕ್ಕಿದೆ. ಅದನ್ನು ಕೂಡ ಅಣೆಕಟ್ಟೆ ಬಳಿ ಸ್ಥಾಪನೆ ಮಾಡಿದ್ದಾರೆ. ಕೆಆರ್‌ಎಸ್ ನಿರ್ಮಾತೃ ನಾಲ್ವಡಿಯವರೇ ಎಂಬುದರಲ್ಲಿ ಎರಡು ಮಾತಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಅತೀ ಹೆಚ್ಚು ಗೌರವ ಕೊಡುವುದು ದಲಿತ ಸಮುದಾಯ. ಮಹದೇವಪ್ಪ ಅವರು ನಾಲ್ವಡಿ ಮತ್ತು ರಾಜಮನೆತನದವರ ವಿರುದ್ಧ ಮಾತನಾಡಿಲ್ಲ. ಹೀಗಾಗಿ ಮುಸ್ಲಿಂ ಸಮುದಾಯದ ಓಲೈಕೆಗಾಗಿ ಮಾತನಾಡಿದ್ದಾರೆ ಎಂಬುದು ಸುಳ್ಳು. ಕೂಡಲೇ ಇಂತಹ ವಿವಾದ ಸೃಷ್ಟಿಸುವ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.



ಪುರುಷೋತ್ತಮ್

ರಾಜವಂಶಸ್ಥರಾದ ಯದುವೀರ್ ಅವರ ಮೇಲೆ ನಮಗೆ ಅಪಾರ ಗೌರವವಿದೆ. ಆದರೆ ಅವರು ರಾಜಕಾರಣಕ್ಕಾಗಿ ಒಂದು ಸಮುದಾಯದ ಓಲೈಕೆಗಾಗಿ ಈ ರೀತಿ ಮಾತನಾಡುತ್ತಿದ್ದಾರೆ ಎಂದು ಹೇಳಿಕೆ ನೀಡಬಾರದು. ಬದಲಾಗಿ ಕೆಆರ್‌ಎಸ್ ಅಣೆಕಟ್ಟೆ ಬಳಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಮಾನವಾಗಿ ವಿಶ್ವೇಶ್ವರಯ್ಯ ಅವರ ಪ್ರತಿಮೆ ಸ್ಥಾಪಿಸಲಾಗಿದೆ. ಮೊದಲು ಆ ಪ್ರತಿಮೆಯನ್ನು ತೆಗೆಯಬೇಕು. ವಿಶ್ವೇಶ್ವರಯ್ಯ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸರಿ ಸಮಾನರೇ? ವಿಶ್ವೇಶ್ವರಯ್ಯ ಅವರು ಒಬ್ಬ ಇಂಜಿನಿಯರ್ ಅಷ್ಟೇ. ಅದರ ಬಗ್ಗೆ ಯದುವೀರ್ ಚಿಂತಿಸಲಿ ಎಂದರು.

ಪ್ರಗತಿಪರ ಚಿಂತಕ ಪ್ರೊ.ಕೆ.ಎಸ್. ಭಗವಾನ್ ಮಾತನಾಡಿ, ಸಚಿವ ಹೆಚ್.ಸಿ. ಮಹದೇವಪ್ಪ ಟಿಪ್ಪು ಸುಲ್ತಾನ್ ಕೆಆರ್‌ಎಸ್ ಅಣೆಕಟ್ಟೆ ಕಟ್ಟಲು ಶಂಕುಸ್ಥಾಪನೆ ಮಾಡಿದ್ದಾರೆ ಎಂದು ಹೇಳಿದ್ದಾರೆ ಅಷ್ಟೇ. ಕನ್ನಂಬಾಡಿ ಕಟ್ಟೆಗೆ ಹೋಗಿ ನೋಡಿ ಗೇಟಿನ ಒಳ ಭಾಗದಲ್ಲಿ 3 ಕಲ್ಲುಗಳಿವೆ. ಒಂದು ಅರೇಬಿಕ್, ಒಂದು ಇಂಗ್ಲಿಷ್, ಒಂದು ಕನ್ನಡದಲ್ಲಿ ಇದೆ. ಅದರಲ್ಲಿ ಭಗವಂತನ ಕರುಣೆಯಿಂದ ಅಣೆಕಟ್ಟೆ ಕಟ್ಟಿಸಲು ಹೊರಟಿದ್ದೇನೆ, ಶಂಕುಸ್ಥಾಪನೆ ಮಾಡಿದ್ದೇನೆ ಎಂದು ಬರೆದಿದೆ ಎಂದು ಹೇಳಿದರು.

ಇತಿಹಾಸವನ್ನು ಅರಿಯದೆ ಪ್ರಚೋದನಾಕಾರಿ ಹೇಳಿಕೆ ನೀಡುತ್ತಿರುವುದು ಅಪಾಯಕಾರಿ ಬೆಳವಣಿಗೆ. ಟಿಪ್ಪು ತನ್ನ ಆಡಳಿತದಲ್ಲಿ ಎಲ್ಲಾ ಸಮುದಾಯದ ಪರವಾಗಿದ್ದರು. ಒಂದು ವೇಳೆ ಮತಾಂಧನಾಗಿದ್ದರೆ ಶ್ರೀರಂಗಪಟ್ಟಣದಲ್ಲಿ ಎಲ್ಲರೂ ಮುಸ್ಲಿಮರಾಗಿ ಪರಿವರ್ತನೆ ಆಗಿರಬೇಕಿತ್ತಲ್ಲವೇ? ಎಂದು ಪ್ರಶ್ನಿಸಿದರು.

ಡಾ.ರಾಜಕುಮಾರ್ ಅವರ ಚಿತ್ರಗೀತೆಯೊಂದರಲ್ಲಿ 'ಕಾವೇರಿಯನ್ನು ಹರಿಯಲು ಬಿಟ್ಟು ವಿಶ್ವೇಶ್ವರಯ್ಯ ಶ್ರಮ ಪಡದಿದ್ದರೆ' ಎಂದು ಹಾಡಿಸಿದ್ದಾರೆ. ಇದು ಸಮಾಜಕ್ಕೆ ತಪ್ಪು ಸಂದೇಶ ನೀಡುವ ಸಾಲುಗಳು. ಇದರಿಂದ ಕನ್ನಂಬಾಡಿ ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಅವಮಾನ ಮಾಡಿದಂತೆ. ಏಕೆಂದರೆ ಅಣೆಕಟ್ಟೆ ಕಟ್ಟುವಾಗ ವಿಶ್ವೇಶ್ವರಯ್ಯ ಒಂದು ವರ್ಷ ಮಾತ್ರ ಇದ್ದರು. ಕನ್ನಂಬಾಡಿ ಕಟ್ಟೆ ಕಟ್ಟಲು 21 ವರ್ಷಗಳು ಬೇಕಾಯಿತು ಎಂದು ವಿವರಿಸಿದರು. ಗೋಷ್ಠಿಯಲ್ಲಿ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು, ಭುಗತಗಳ್ಳಿ ಮಣಿಯಯ್ಯ, ಪುಟ್ಟರಾಜು ಉಪಸ್ಥಿತರಿದ್ದರು.

> "ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಸಲ್ಲಿಸಿರುವ ಒಳ ಮೀಸಲಾತಿ ವರದಿ ಅಪೂರ್ಣವಾಗಿದ್ದು, ಅದನ್ನು ತಿರಸ್ಕರಿಸಿ ಪುನರ್ ಪರಿಶೀಲನೆ ನಡೆಸಬೇಕು. ಸಮೀಕ್ಷೆಯಲ್ಲಿ ಬಲಗೈ ಸಮುದಾಯ ಪೂರ್ಣವಾಗಿ ನೋಂದಣಿ ಮಾಡಿಸಿಲ್ಲ. ಹೀಗಾಗಿ ವರದಿಯನ್ನು ತಡೆಹಿಡಿಯಬೇಕು. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ವಿಂಗಡಣೆ ಆಗಬೇಕು. ಇಲ್ಲವಾದರೆ ಬಹಿರಂಗವಾಗಿ ಜನರ ಬಳಿಗೆ ಹೋಗಬೇಕಾಗುತ್ತದೆ.
> -ಪುರುಷೋತ್ತಮ್, ಮಾಜಿ ಮೇಯರ್

ರಾಜಗುರುಗಳ ದರ್ಶನ ಪಡೆದ ಶಾಸಕ ಟಿ.ಎಸ್.ಶ್ರೀವತ್ಸ



ಪರಕಾಲ ಮಠದಲ್ಲಿ ಚಾತುರ್ಮಾಸ್ಯ ಅಂಗವಾಗಿ ಶ್ರೀ ಮಠದ ವತಿಯಿಂದ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಭೇಟಿ ನೀಡಿ, ಪಾಲ್ಗೊಂಡು, ಸಂಗೀತಗಾರರಿಗೆ ಗೌರವಿಸಿ, ಶ್ರೀ ಲಕ್ಷ್ಮಿ ಹಯಗ್ರೀವರ ದರ್ಶನ ಪಡೆದು, ಯದುವಂಶ ಸಂಸ್ಥಾನದ ರಾಜಗುರುಗಳು ಪರಕಾಲ ಮಠದ ಶ್ರೀಮದ್ ಅಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳ ಆಶೀರ್ವಾದ ಪಡೆದರು. ಈ ವೇಳೆ ಶ್ರೀ ಮಠದ ಶ್ರೀನಿವಾಸ್ ರಾಘವನ್, ಭರತ್, ಆಕಾಶ್, ಟಿ.ಎಸ್.ಅರುಣ್ ಉಪಸ್ಥಿತರಿದ್ದರು.

ಆ.10, ಮೈಸೂರಲ್ಲಿ 'ರನ್ ಫಾರ್ ಲೈಫ್' ಅಥ್ಲೆಟಿಕ್ ಕ್ರೀಡಾಕೂಟ

ಮೈಸೂರು, ಆ.5(ಜಿಎ)-ಮೈಸೂರಿನ ಚಾಮುಂಡಿ ವಿಹಾರ್ ಸ್ಟೇಡಿಯಂನಲ್ಲಿ ಯೂನಿಕ್ ಅಥ್ಲೆಟಿಕ್ ಕ್ಲಬ್ ವತಿಯಿಂದ ಆ.10ರಂದು ಬೆಳಗ್ಗೆ 8 ಗಂಟೆಗೆ 'ರನ್ ಫಾರ್ ಲೈಫ್' ಅಥ್ಲೆಟಿಕ್ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ಲಬ್‌ನ ಸದಸ್ಯ ಬಿ.ಎನ್.ಮಹೇಶ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8ಕ್ಕೆ ಅಥ್ಲೆಟಿಕ್ ಕ್ರೀಡಾಪಟು ಚಿರಂತ್ ಕ್ರೀಡಾಕೂಟಕ್ಕೆ ಚಾಲನೆ ನೀಡುವರು. 4-6, 6-8, 8-10,10-12, 12-14, 14-16, 16-18 ವರ್ಷದವರೆಗಿನ ವಯೋಮಾನದವರಿಗೆ ಕ್ರಮವಾಗಿ 40 ಮೀಟರ್‌ರಿಂದ 300 ಮೀಟರ್ ರನ್ನಿಂಗ್, ಲಾಂಗ್ ಜಂಪ್ ಸ್ಪರ್ಧೆ ಇರಲಿದೆ. ಅಲ್ಲದೇ 4x100 ರಿಲೇ 12-14, 14-16,16-18 ವರ್ಷದೊಳಗಿನ ಸ್ಪರ್ಧಾಳುಗಳು ಭಾಗವಹಿಸಬಹುದಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ಅಥ್ಲೆಟಿಕ್‌ಗೆ 200 ರೂ., ರಿಲೇ ಗ್ರೂಪ್‌ಗೆ 400 ರೂ., ಶುಲ್ಕ ಪಾವತಿಸಬೇಕು. 3 ಮಂದಿ ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು. ಭಾಗವಹಿಸಿದ ಎಲ್ಲಾ ಕ್ರೀಡಾಪಟುಗಳಿಗೆ ಪ್ರಮಾಣ ಪತ್ರ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.6364320613 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಸದಸ್ಯರಾದ ಲಾವಣ್ಯ, ಹರ್ಷಿತ, ಹೇಮಾ ಶಾ ರಜಪೂತ್ ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಶಾಸಕರ ಸಮ್ಮೇಳನ



ಅಮೆರಿಕದ ಬೋಸ್ಟನ್ ನಗರದಲ್ಲಿ ನಡೆದ ಅಂತರ ರಾಷ್ಟ್ರೀಯ ಶಾಸಕರ ಸಮ್ಮೇಳನದಲ್ಲಿ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಉಪಸಭಾಪತಿ ಪ್ರಾಣೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಹಾಗೂ ಶಾಸಕ ದಿನೇಶ್ ಗೂಳಿಗೌಡ ಅವರು ಪಾಲ್ಗೊಂಡಿದ್ದರು.

ದಸರಾ ಮಹೋತ್ಸವ ಉದ್ಘಾಟನೆಗೆ ಕಟ್ಟಡ ಕಾರ್ಮಿಕರನ್ನು ಆಯ್ಕೆ ಮಾಡಿ

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಡ, ಇತರೆ ನಿರ್ಮಾಣ ಕಾರ್ಮಿಕರ ಸಂಘ ಆಗ್ರಹ

ಮೈಸೂರು,ಆ.5(ಜಿಎ)-ಈ ಬಾರಿಯ ದಸರಾ ಮಹೋತ್ಸವ ಉದ್ಘಾಟನೆಗೆ ಕಟ್ಟಡ ಕಾರ್ಮಿಕರನ್ನು ಆಯ್ಕೆ ಮಾಡಿ ಎಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ರಾಚಪ್ಪ ಮಾತನಾಡಿ, ರಾಜ್ಯ ಸರ್ಕಾರ ದಸರಾ ಉದ್ಘಾಟನೆಗೆ ಪ್ರತಿ ವರ್ಷವೂ ವಿವಿಧ ಕ್ಷೇತ್ರದ ಸಾಧಕರನ್ನು ಆಯ್ಕೆ ಮಾಡುತ್ತದೆ. ಅದರಂತೆ ಈ ಬಾರಿಯ ದಸರಾ ಉದ್ಘಾಟನೆಗೆ ಕಟ್ಟಡ ಕಾರ್ಮಿಕರನ್ನು ಆಯ್ಕೆ ಮಾಡಬೇಕು. ಅರಮನೆಯಿಂದ ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳ ನಿರ್ಮಾಣಕ್ಕೆ ಸಾಕಷ್ಟು ಶ್ರಮಿಸಿದ್ದಾರೆ. ಕೆಆರ್‌ಎಸ್ ಸೇರಿದಂತೆ ರಾಜ್ಯ ಬಹುತೇಕ ಕಟ್ಟಡಗಳಿಗೂ ಕಾರ್ಮಿಕರ ಬೆವರಿನ ಹನಿ ಇದ್ದು, ಈ ಹಿನ್ನೆಲೆಯಲ್ಲಿ ದಸರಾ ಉದ್ಘಾಟನೆಗೆ ಕಟ್ಟಡ ಕಾರ್ಮಿಕರನ್ನು ಆಯ್ಕೆ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿಗಳು, ಉಸ್ತುವಾರಿ ಸಚಿವರು, ಡಿಸಿ ಅವರಿಗೂ ಪತ್ರ ಬರೆಯಲಾಗಿದ್ದು, ನಾಳೆ ಮೈಸೂರಿಗೆ ಕಾರ್ಮಿಕ ಸಚಿವ ಸಂತೋಷ್ ಲಾಡ್ ಆಗಮಿಸಲಿದ್ದಾರೆ ಅವರಿಗೂ ಮನವಿ ಸಲ್ಲಿಸಲಾಗುತ್ತದೆ ಎಂದರು. ಗೋಷ್ಠಿಯಲ್ಲಿ ಬೆಳ್ಳಿಯಪ್ಪ, ಗೋಪಿ ಉಪಸ್ಥಿತರಿದ್ದರು.

ಶಿರಮಳ್ಳಿಯಲ್ಲಿ ಯಾರನ್ನೂ ಬಹಿಷ್ಕರಿಸಿಲ್ಲ

ಸುದ್ದಿಗೋಷ್ಠಿಯಲ್ಲಿ ಮಹಿಳೆ ಮಾಡಿರುವ ಆರೋಪ ಸುಳ್ಳು

ಮೈಸೂರು, ಆ.5(ಜಿಎ)-ಮೈಸೂರಿನ ನಂಜನಗೂಡು ತಾಲೂಕು ಹುಲ್ಲಹಳ್ಳಿ ಹೋಬಳಿ ಶಿರಮಳ್ಳಿ ಗ್ರಾಮದಲ್ಲಿ ಯಾರನ್ನು ಬಹಿಷ್ಕರಿಸಿಲ್ಲ. ಗ್ರಾಮದ ರತ್ನಮ್ಮ ಸುದ್ದಿಗೋಷ್ಠಿಯಲ್ಲಿ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾದುದು ಎಂದು ಗ್ರಾಮಸ್ಥರು ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದ ಗ್ರಾಮಸ್ಥರಲ್ಲಿ ಒಬ್ಬರಾದ ಎನ್.ಮಹದೇವ್ ಮಾತನಾಡಿ, ಶಿರಮಳ್ಳಿ ಗ್ರಾಮದಲ್ಲಿ ಇದುವರೆಗೂ ಯಾರನ್ನು ಬಹಿಷ್ಕರಿಸಿಲ್ಲ. ಆದರೆ ರತ್ನಮ್ಮ ಗ್ರಾಮಸ್ಥರ ಮೇಲೆ ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಪೊಲೀಸ್ ಠಾಣೆಯಲ್ಲಿಯೂ ಸುಳ್ಳು ದೂರು ನೀಡಿದ್ದು, ರತ್ನಮ್ಮ ಬಳಿ ಯಾರೇ ಮಾತನಾಡಲು ತೆರಳಿದರು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹಾಗೇ ಅವರ ಮನೆ ಮುಂದಿನ ರಸ್ತೆಯಲ್ಲಿ ಗ್ರಾಮಸ್ಥರು ಹಾದು ಹೋಗಬೇಕು. ಹೀಗೆ ಹೋಗಬೇಕಾದರೆ ಮನಬಂದಂತೆ ಬೈಯುವುದು ಸಾಮಾನ್ಯವಾಗಿದೆ ಎಂದು ದೂರಿದರು.

ಇತ್ತೀಚೆಗೆ ಪೊಲೀಸರಿಗೆ ದೂರು ನೀಡಿದ ಸಂಬಂಧ ಮಾಹಿತಿ ಸಂಗ್ರಹಿಸಲು ರತ್ನಮ್ಮ ಮನೆ ಬಳಿ ಪೊಲೀಸ್ ಸಿಬ್ಬಂದಿ ತೆರಳಿದ್ದಾಗ ರತ್ನಮ್ಮ ಅರೆ ಬೆತ್ತಲೆಗೊಂಡು ಪೊಲೀಸರ ವಿರುದ್ಧವೇ ಕೂಗಾಡಿದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಹೀಗೆ ರತ್ನಮ್ಮನಿಂದ ಎಲ್ಲರಿಗೂ ಸಮಸ್ಯೆ ಆಗುತ್ತಿದೆ ಹೊರತು ಅವರಿಗೆ ಯಾರಿಂದಲೂ ಸಮಸ್ಯೆ ಆಗಿಲ್ಲ ಎಂದು ಗ್ರಾಮದ ಮಹದೇವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮಸ್ಥರಾದ ಹುಚ್ಚಯ್ಯ, ಸಿ.ಮಹದೇವಪ್ಪ, ಶಾಂತಮ್ಮ, ಶಿವರಾಜ್ ಮತ್ತಿತರರು ಉಪಸ್ಥಿತರಿದ್ದರು.

ದಸರಾ ದೀಪಾಲಂಕಾರಕ್ಕೆ ಮುನ್ನುಡಿ...



ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸೆಸ್ಕ್ ವತಿಯಿಂದ ದಸರಾ ದೀಪಾಲಂಕಾರಕ್ಕೆ ತಯಾರಿ ನಡೆಸಿದ್ದು, ಮೈಸೂರಿನ ಎಂಡಿಎ ಜಂಕ್ಷನ್‌ನ ಜೆಎಲ್‌ಬಿ ರಸ್ತೆಯಲ್ಲಿ ಮಂಗಳವಾರ ರಾತ್ರಿ ಪ್ರಾಯೋಗಿಕವಾಗಿ ದೀಪಾಲಂಕಾರ ಅಳವಡಿಸಿ, ಪರಿಶೀಲಿಸಲಾಯಿತು.

ದಾರಿ ಯಾವುದಯ್ಯಾ...




ಇದು ಮೈಸೂರಿನ ಕೇರ್ಗಳ್ಳಿ ರಸ್ತೆಯ ದುಸ್ಥಿತಿ. ದಟ್ಟಗಳ್ಳಿ, ಸೋಮನಾಥನಗರದಿಂದ ಕೇರ್ಗಳ್ಳಿಗೆ ಹೋಗುವ ರಸ್ತೆ ಗುಂಡಿಬಿದ್ದು ವರ್ಷಗಳೇ ಕಳೆದಿವೆ. ಇತ್ತೀಚೆಗೆ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಇಲ್ಲಿ ರಸ್ತೆ ಯಾವುದು ಗುಂಡಿ ಯಾವುದು ಎಂದು ತಿಳಿಯುದಾಗದೆ ವಾಹನ ಸವಾರರು ಬಿದ್ದು ಗಾಯಗೊಳ್ಳುತ್ತಿದ್ದಾರೆ. ಇದರ ಜೊತೆಗೆ ಕೇರ್ಗಳ್ಳಿಯ ಇದರ ಮುಂದುವರೆದ ರಸ್ತೆಯನ್ನೂ ಅಗೆದು ಗುಂಡಿಮಯ ಮಾಡಲಾಗಿದೆ. ಅಲ್ಲಲ್ಲಿ ಮಳೆ ನೀರು ನಿಂತು ಕೊಳೆತು ನಾರುವ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಕಣ್ಮುಚ್ಚಿ ಕುಳಿತ್ತಿದ್ದಾರೆ. ಕೇರ್ಗಳ್ಳಿ ಯಾರಿಗೂ ಬೇಡವಾದ ಗ್ರಾಮವೆ? ಇಲ್ಲಿನ ಜನರು ಓಡಾಡಲು ದಾರಿ ಹುಡುಕುತ್ತಿದ್ದಾರೆ.

ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಆ.5(ಎಂಕೆ)-ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ನಾಳೆ(ಆ.6) ಸಂಜೆ 4 ಗಂಟೆಗೆ ಕನ್ನಡ ಗೆಳೆಯರ ಬಳಗ, ನೃಪತುಂಗ ಕನ್ನಡ ಶಾಲೆ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ನಿವೃತ್ತ ಜಿಲ್ಲಾ ನ್ಯಾಯಾಧೀಶ ಸ.ರ.ಮಾಣಿಕ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಗೆಳೆಯರ ಬಳಗದ ರಾ.ನಂ.ಚಂದ್ರಶೇಖರ ಆಶಯ ನುಡಿಗಳನ್ನಾಡಲಿದ್ದು, ನೃಪತುಂಗ ಕನ್ನಡ ಶಾಲೆ ಉಪಾಧ್ಯಕ್ಷ ಸ.ರ.ಸುದರ್ಶನ ಉಪಸ್ಥಿತರಿರಲಿದ್ದಾರೆ.

ನಿಧನ

ಹೆಚ್.ಎ.ಗೋವಿಂದರಾಜು



ಮೈಸೂರು,ಆ.5-ಮೂಲತಃ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಮೈಸೂರು ಅರವಿಂದನಗರ ನಿವಾಸಿ ಹೆಚ್.ಎ.ಗೋವಿಂದರಾಜು (78) ಭಾನುವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

06.08.2025 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮೂಲಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಶ್ರೀ ಸೂತ್ರ ಆಯುರ್ಧಾಮ :** ವೆರಿಕೋಸ್ ಸಮಸ್ಯೆಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10ರಿಂದ.
- **ಡಾ. ಜಿ. ಪರಮೇಶ್ವರ ಅಭಿಮಾನಿಗಳ ಬಳಗ :** ಗೃಹ ಮಂತ್ರಿ ಡಾ.ಜಿ.ಪರಮೇಶ್ವರ್ ಹುಟ್ಟುಹಬ್ಬದ ಪ್ರಯುಕ್ತ ಮೈಸೂರು ಅರಮನೆ ಆವರಣದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸಿಹಿ ವಿತರಣೆ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10.30ಕ್ಕೆ.
- **ಮೈಸೂರು ನಗರ ಮತ್ತು ಗ್ರಾಮಾಂತರ ಸಮಿತಿ:** ಕಾಂಗ್ರೆಸ್ ಭವನದ ಭೂಮಿಪೂಜೆ ಪೂರ್ವ ಸಿದ್ಧತಾ ಸಭೆ, ಉಪಸ್ಥಿತರು: ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 12ಕ್ಕೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ವಾಚನ: ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಸಂಚಲನ ಮೈಸೂರು, ರಂಗರಥ ಬೆಂಗಳೂರು:** ನಟನಾಭ್ಯಾಸ ಶಿಬಿರ, ಶಿಬಿರದ ನಿರ್ದೇಶಕರು : ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್, ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ ಆವರಣ, ಬೆಳಗ್ಗೆ 6.30 ರಿಂದ.
- **ಕನ್ನಡ ಗೆಳೆಯರ ಬಳಗ, ನೃಪತುಂಗ ಕನ್ನಡ ಶಾಲೆ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ, ಮುಖ್ಯ ಅತಿಥಿಗಳು: ಎಂಎಲ್‌ಸಿ ಎಚ್. ವಿಶ್ವನಾಥ್, ಅಧ್ಯಕ್ಷತೆ: ನಿವೃತ್ತ ಜಿಲ್ಲಾ ನ್ಯಾಯಾಧೀಶ ಸ.ರ.ಮಾಣಿಕ್ಯ, ಆಶಯ ನುಡಿ: ಕನ್ನಡ ಗೆಳೆಯರ ಬಳಗದ ರಾ.ನಂ.ಚಂದ್ರಶೇಖರ, ಉಪಸ್ಥಿತರು: ನೃಪತುಂಗ ಕನ್ನಡ ಶಾಲೆ ಉಪಾಧ್ಯಕ್ಷ ಸ.ರ. ಸುದರ್ಶನ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸುಯೋಗ್ ಆಸ್ಪತ್ರೆ ಹತ್ತಿರ, ಸಂಜೆ 4 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು-ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ-ಸಿ.ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ - ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಹಂಸಿನಿ ಎಸ್. ಕುಮಾರ್, ವ್ಯಾಖ್ಯಾನ-ಡಾ.ಎನ್. ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ನಂದನ, ಪ್ರಾಯೋಜಕರು-ಪ್ರೇರಣಾ ಆಸ್ಪತ್ರೆ ಮತ್ತು ಫರ್ಟಿಲಿಟಿ, ಮೈಸೂರು, ವಿಷಯ-ಗರ್ಭ ಕಂಠದ ಕ್ಯಾನ್ಸರ್ ಅಂದರೆ ಸರ್ವಿಕಲ್ ಕ್ಯಾನ್ಸರ್ ರೋಗ ವಿಧಾನ, ಲಕ್ಷಣಗಳು ಮತ್ತು ಚಿಕಿತ್ಸೆ, ಭಾಗವಹಿಸುತ್ತಾರೆ-ಡಾ. ಮಾಧುರಿ ಎನ್. ಗೈನಾಕಾಲಜಿಸ್ಟ್ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್, ಇವರೊಂದಿಗೆ ಭಾಗವಹಿಸುತ್ತಾರೆ-ತೇಜಸ್ವಿನಿ ಗಿರೀಶ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ-ಪಂಡಿತ್ ವಿ.ದೇಶಪಾಂಡೆ-ಬಾನ್ಸುರಿ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿಪಥ - ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ- ನಿಲಯದ ಕಲಾವಿದರಿಂದ ವಾದ್ಯವೃಂದ, 4.00 ಮಹಿಳಾ ರಂಗ-ಸಾಧನ ಶಿಖರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕರ್ನಾಟಕದ ಏಕೈಕ ಮರಳು ಶಿಲ್ಪಿ ಕಲಾವಿದೆ ಮೈಸುರಿನ ಗೌರಿ ಎಂ.ಎನ್. ಅವರೊಂದಿಗೆ ಮಾತುಕತೆ, ಪ್ರಸ್ತುತಿ-ದಿಗ್ವಿಜಯ್ .ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ-ಶಾಂತಾ ಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ, ಹಲೋ ಕೃಷಿರಂಗ-ಪ್ರಾಯೋಜಿತ ನೇರ ಫೋನ್-ಇನ್ ಕಾರ್ಯಕ್ರಮ, ಪ್ರಾಯೋಜಕರು- ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ-ದೇಶಿ ಬಿತ್ತನೆ ಬೀಜ ಹಾಗೂ ತಳಿಗಳ ಸಂರಕ್ಷಣೆ, ಭಾಗವಹಿಸುತ್ತಾರೆ-ಉಪಕೃಷಿ ನಿರ್ದೇಶಕರಾದ ಎ.ಸಿ. ಮಂಜು, 7.20 ಬಾನುಲಿ ಬೇಸಾಯ, ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ-ಆರ್. ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90-ನೆನಪುಗಳ ಹೊತ್ತು ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ. ಎಂ.ಪುಷ್ಪಾವತಿ ಅವರೊಂದಿಗೆ ಸಂದರ್ಶನ, ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 9.30 ಕ್ರೀಡಾಲೋಕ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ, 10.15 ನಾಟಕ-ಸತ್ತವರ ಸಾವು, ರಚನೆ-ಎಸ್. ಜಿ. ಶಿವಶಂಕರ್, ನಿರ್ಮಾಣ-ಪ್ರಭುಸ್ವಾಮಿ ಮಳಿಮಠ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 6 ಬುಧವಾರ 2025

₹4

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 111 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನಿಮ್ಮ ಮೊಬೈಲ್ ಕದ್ಕೊಂಡು ಓಡಿ ಹೋಗ್ತಾ ಇದ್ದಾನೆ ಹಿಡೀರಿ...
ಗಂಡ : ಎಲ್ಲೋಗ್ತಾನೆ. ಬ್ಯಾಟರಿ ಖಾಲಿಯಾದ ಮೇಲೆ ನಮ್ಮ ಮನೆಗೆ ಬರಬೇಕು.
ಹೆಂಡತಿ : ಯಾಕೆ?
ಗಂಡ : ಚಾರ್ಜರ್ ನಮ್ಮ ಮನೇಲೆ ಅಲ್ವಾ ಇರೋದು!!

ಮೈಸೂರು ಮಿತ್ರ
ಬುಧವಾರ, 6 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರತಿಯೊಬ್ಬರು ಒಂಟಿಯಾಗಿ ಇದ್ದಾಗ ಯೋಚಿಸೋದು ಒಂದೇ... ನಮ್ಮನ್ನು ಅರ್ಥ ಮಾಡಿಕೊಳ್ಳುವ ಮನಸ್ಸಿರುವ ಒಬ್ಬ ವ್ಯಕ್ತಿ ನಮ್ಮ ಜೊತೆ ಇದ್ರೆ ಚೆನ್ನಾಗಿರೋದು ಅಂತಾ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡಂತೆ

ನಿಮ್ಮ ಪತ್ರಗಳು

ನಂಬಿಕಸ್ಥ ಗೆಳೆಯನಿಗೊಂದು ಪ್ರೀತಿಯ ವಿದಾಯ !

ಮಾನ್ಯರೆ,

ಅಂಚೆ ಇಲಾಖೆಯ ವಿಶ್ವಾಸಾರ್ಹ ಸೇವೆಗಳಲ್ಲಿ ಒಂದಾಗಿದ್ದ ನೋಂದಣಿ ಅಂಚೆ (Registered Post) ಸೇವೆಯನ್ನು ಈ ತಿಂಗಳ ಒಂದನೇ ತಾರೀಖಿನಿಂದ ಹಿಂದಕ್ಕೆ ಪಡೆಯಲಾಗಿದ್ದು, ಇದರ ಬದಲು ಸ್ಪೀಡ್ ಪೋಸ್ಟ್ ಸೇವೆಯನ್ನು ಗ್ರಾಹಕರು ಉಪಯೋಗಿಸಿಕೊಳ್ಳಬಹುದಾಗಿದೆ.

ದೇಶದಲ್ಲಿ ಅಂಚೆ ಕಚೇರಿಗಳು ಪ್ರಾರಂಭಗೊಂಡ ದಿನದಿಂದಲೂ ತನ್ನ ವಿಶ್ವಾಸಾರ್ಹ ಸೇವೆಯಿಂದ ನೋಂದಣಿ ಅಂಚೆ ಜನಪ್ರಿಯವಾಗಿತ್ತು. ಸಾಮಾನ್ಯವಾಗಿ ವಕೀಲರು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಎದುರು ಪಾರ್ಟಿದಾರರಿಗೆ ನೋಟಿಸ್, ಇತ್ಯಾದಿಗಳನ್ನು ಕಳುಹಿಸುತ್ತಿದ್ದರು. ಕಂಪನಿಗಳು, ಸಾರ್ವಜನಿಕ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕ ವಲಯದ ಇತರರು ಸಹ, ತಮ್ಮ ಮುಖ್ಯ ಕಾಗದ ಪತ್ರಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸುತ್ತಿದ್ದರು. ಅಂಚೆ ಇಲಾಖೆಯ ನೆಚ್ಚಿನ ಭಂಟನಾಗಿ ಕಾರ್ಯವಹಿಸುತ್ತಿದ್ದ ಈ ಗೆಳೆಯನಿಗೆ ವಿದಾಯ ಹೇಳಲು ತುಂಬಾ ಬೇಜಾರಾಗುತ್ತಿದೆ.

ಅಂಚೆ ಇಲಾಖೆಯ ಅನೇಕ ಸೇವೆಗಳನ್ನು ಹಿಂದಕ್ಕೆ ಪಡೆಯಲಾಗಿದೆ. ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಟೆಲಿಗ್ರಾಂ ಅಥವಾ ತಂತಿ ಸೇವೆಯನ್ನು ಬಹಳಷ್ಟು ವರ್ಷಗಳ ಹಿಂದೆಯೇ ನಿಲ್ಲಿಸಲಾಯಿತು. ಆ ನಂತರ ಸರ್ಟಿಫಿಕೇಟ್ ಆಫ್ ಪೋಸ್ಟಿಂಗ್, ರೆಕಾರ್ಡೆಡ್ ಡೆಲಿವರಿ ಮುಂತಾದ ಸೇವೆಗಳನ್ನು ನಿಲ್ಲಿಸಲಾಯಿತು. ಇದೀಗ ನೋಂದಾಯಿತ ಅಂಚೆಯನ್ನೂ ಹಿಂದಕ್ಕೆ ಪಡೆಯುವುದರೊಂದಿಗೆ ಅಂಚೆ ಇಲಾಖೆಯ ಪ್ರಮುಖ ಸೇವೆಗೂ ಕೂಡ ಮೊಳೆ ಹೊಡೆದಂತಾಗಿದೆ. ಸದ್ಯ ಅಂಚೆ ಕಚೇರಿಗಳಾದರೂ ಉಳಿದುಕೊಂಡಿದೆಯಲ್ಲಾ, ಅದೇ ನಮ್ಮ ಪುಣ್ಯ. ಅಲ್ಲವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಎಐ ತರಗತಿಗೆ ಹೆಚ್ಚುವರಿ ಶುಲ್ಕ ಪ್ರತಿವರ್ಷ 3 ಸಾ.ರೂ. ವಸೂಲಿ

ಮಾನ್ಯರೆ,

ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಖಾಸಗಿ ಶಾಲೆಯೊಂದರಲ್ಲಿ ಎಐ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ತರಗತಿಗಳನ್ನು ನಡೆಸುವುದಾಗಿ ಪಾಲಕರಿಗೆ ತಿಳಿಸಿದ್ದು, ಹೆಚ್ಚುವರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಪ್ರತಿ ವರ್ಷ 3000 ರೂ. ಶುಲ್ಕ ನಿಗದಿ ಮಾಡಿ 4 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಈ ಹೆಚ್ಚುವರಿ ಶುಲ್ಕ ನಿಗದಿ ಮಾಡಲಾಗಿದೆ. ಆದರೆ ಈ ಹೆಚ್ಚುವರಿ ಶುಲ್ಕವು ಪಾಲಕರಿಗೆ ಹೊರೆಯಾಗುತ್ತಿದ್ದು, ಕಟ್ಟಲಾಗುತ್ತಿಲ್ಲ. ಇದರಿಂದ ಸಂಸ್ಥೆಯ ಆಡಳಿತ ಮಂಡಳಿ ಮತ್ತು ಪ್ರಾಂಶುಪಾಲರು ಮಕ್ಕಳಿಗೆ ಮುಖ್ಯ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡುವುದಿಲ್ಲ ಎಂದು ಬೆದರಿಕೆ ಹಾಕುತ್ತಿರುವುದು ಕಂಡು ಬಂದಿದೆ. ತರಗತಿ ನಡೆಯುವ ಸಮಯದಲ್ಲಿ ಮಕ್ಕಳಿಗೆ ಈ ಕುರಿತು ಪದೇ ಪದೆ ಹಣ ತರುವಂತೆ ತೊಂದರೆ ಕೊಡುತ್ತಿದ್ದು, ಮಕ್ಕಳನ್ನು ತರಗತಿಯಿಂದ ಹೊರಗಡೆ ಕಳುಹಿಸಿರುತ್ತಾರೆ. ಇದರಿಂದಾಗಿ ಮಕ್ಕಳು ಮಾನಸಿಕವಾಗಿ ಕುಗ್ಗುವಂತಾಗಿದೆ. ಈ ಎಐ ವಿಷಯದ ಬೋಧನೆಯ ಹೆಸರಿನಲ್ಲಿ ಹೆಚ್ಚುವರಿ ಶುಲ್ಕ ವಸೂಲಿ ಮಾಡುತ್ತಿರುವುದು ಎಷ್ಟು ಸರಿ? ಇರುವ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಸಾಧ್ಯವಾಗದಿರುವಾಗ ಈ ವಿಷಯವನ್ನು ಯಾವಾಗ ಬೋಧಿಸಲಾಗುತ್ತದೆ. ಇದುವರೆಗೂ ಇಂತಹ ಎಐ ತರಗತಿಯನ್ನು ನಡೆಸದೇ ಶುಲ್ಕ ವಸೂಲಿ ಮಾಡಲಾಗಿದೆ. ಆದ್ದರಿಂದ ಪಾಲಕರನ್ನು ಶೋಷಿಸುವ ಈ ಹೆಚ್ಚುವರಿ ಶುಲ್ಕವನ್ನು ಕೈಬಿಡಲು ಕ್ರಮ ವಹಿಸಲು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

– ನೊಂದ ಪೋಷಕರು, ಮೈಸೂರು.

ಮನೆ ಮನೆಗೆ ಪೊಲೀಸ್ ಕಾರ್ಯ ಶ್ಲಾಘನೀಯ

ಮಾನ್ಯರೆ,

ಗೃಹ ಮಂತ್ರಿ ಡಾ. ಜಿ ಪರಮೇಶ್ವರ್ ಹಾಗೂ ಪೊಲೀಸ್ ಮಹಾನಿರ್ದೇಶಕ ಡಾ. ಸಲೀಂ ಅವರ ಸೂಚನೆ ಮೇರೆಗೆ ಎಲ್ಲಾ ಜಿಲ್ಲೆಗಳಲ್ಲೂ ಕಾನೂನಿನ ಅರಿವು ಹಾಗೂ ಅಭಯ ನಿರ್ಮಿತ ಸಮಾಜದ ಕಾನೂನು ಸುವ್ಯವಸ್ಥೆಯ ಪಾಲನೆಗೆ 'ಮನೆ ಮನೆಗೆ ಪೊಲೀಸ್' ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿರುವುದು ಶ್ಲಾಘನೀಯ. ಪೊಲೀಸ್ ಠಾಣೆ ಹಾಗೂ ಪೊಲೀಸ್ ಎಂದರೆ ಭಯಪಡುವ ಸಾರ್ವಜನಿಕರಿಗೆ ಪೊಲೀಸರೆಂದರೆ ಸದಾಕಾಲವೂ ಜನರ ಹಿತರಕ್ಷಣೆಗೆ ಹಾಗೂ ಕಾನೂನು ವ್ಯವಸ್ಥೆಯನ್ನು ಕಾಪಾಡಲು ನಿಂತಿರುವ ಏಕೈಕ ರಕ್ಷಣಾ ಪಡೆ ಎಂಬ ಆತ್ಮಸ್ಥೈರ್ಯವನ್ನು ತುಂಬಲು ಪೊಲೀಸ್ ಇಲಾಖೆಯು ಮನೆ ಮನೆಗೆ ತೆರಳಿ ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ಒದಗಿಸುವ ವಿಶೇಷ ಅಭಿಯಾನಕ್ಕೆ ಮುಂದಾಗಿದೆ. ಜನಸಾಮಾನ್ಯರು ಮತ್ತು ಪೊಲೀಸರ ನಡುವಿನ ಬಾಂಧವ್ಯ ಉತ್ತಮವಾಗಿದ್ದರೆ ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಬಹುದು. ಹೀಗಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸಿ ಪೊಲೀಸರ ಜೊತೆ ಕೈಜೋಡಿಸುವುರ ಮುಖಾಂತರ ಉತ್ತಮ ಸಮಾಜದ ನಿರ್ಮಾಣಕ್ಕೆ ಈ ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ ಅರ್ಥಪೂರ್ಣವಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

ಮೈಸೂರಲ್ಲಿ ಡ್ರಗ್ಸ್, ಆತಂಕಕಾರಿ ಬೆಳವಣಿಗೆ

ಮಾನ್ಯರೆ,

ಸಾಂಸ್ಕೃತಿಕ, ಸುಸಂಸ್ಕೃತ ಹಾಗೂ ಹಿರಿಯ ನಾಗರಿಕರ ಸ್ವರ್ಗವೆಂದೇ ಕರೆಯಬಹುದಾದ ಮೈಸೂರು ನಗರದಲ್ಲಿ, ಇತ್ತೀಚೆಗೆ ಡ್ರಗ್ಸ್ ತಯಾರಿಕೆ ಮತ್ತು ಮಾರಾಟ ಮಾಡುವ ಫ್ಯಾಕ್ಟರಿ ಪತ್ತೆಯಾಗಿರುವುದು ಆತಂಕಕಾರಿ ಬೆಳವಣಿಗೆ. ಈಗ ವಶಪಡಿಸಿಕೊಂಡಿರುವ ಡ್ರಗ್ಸ್‌ನ ಬೆಲೆ ಸುಮಾರು 390 ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿದೆ. ಈ ಮಾಫಿಯಾ ಮೈಸೂರಿನಲ್ಲಿ ಕಳೆದ ಹಲವಾರು ವರ್ಷಗಳಿಂದ ನಡೆದಿದೆ ಎನ್ನಲಾಗಿದೆ. ಆದರೆ ಇದುವರೆಗೂ ಈ ಮಾಫಿಯಾದ ಬಗ್ಗೆ ಪೊಲೀಸ್ ಅಧಿಕಾರಿಗಳ ಗಮನಕ್ಕೆ ಬಾರದೆ ಇರುವುದು ಪೊಲೀಸರ ವೈಫಲ್ಯವನ್ನು ತೋರಿಸುತ್ತದೆ. ಇದಕ್ಕಿಂತಲೂ ಆಶ್ಚರ್ಯ ವಿಚಾರ ಎಂದರೆ ಈ ಡ್ರಗ್ಸ್ ದಂಧೆ ಮಾಧ್ಯಮಗಳಲ್ಲಿ ವರದಿಯಾಗಿ ನಾಲ್ಕೈದು ದಿನಗಳಾದರೂ ಈ ಬಗ್ಗೆ ನನಗೆ ಯಾವುದೇ ರೀತಿಯ ಮಾಹಿತಿ ಇಲ್ಲ ಎಂದು ಮಾಧ್ಯಮಗಳ ಮುಂದೆ ಗೃಹ ಸಚಿವರು ಹೇಳಿರುವುದು ಸಾರ್ವಜನಿಕರಲ್ಲಿ ಒಂದು ರೀತಿಯ ಅನುಮಾನಕ್ಕೆ ಕಾರಣವಾಗಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಬದುಕಿಗುತ್ತರವಿದೆಯೇ? ಎಂಬ ಕಠಿಣ ಪ್ರಶ್ನೆ

ನಮ್ಮ ಬದುಕಿನ ಕೆಲವು ದಿನಗಳು ಅಥವಾ ವರ್ಷಗಳು ನಮಗೆ ಗೊತ್ತು. ನಾನೆಲ್ಲಿ ಹುಟ್ಟಿದೆ, ನಾನೆಲ್ಲಿ ಬೆಳೆದೆ, ಹೀಗೆ ಮಾಡಿದೆ, ಹಾಗೆ ಆಡಿದೆ, ಚೆನ್ನಾಗಿ ಹಾಡಿದೆ, ಅವರನ್ನು ಬೇಡಿದೆ, ಇವರನ್ನು ಕಾಡಿದೆ, ಜಗವನ್ನು ನೋಡಿದೆ ಎಂದೆಲ್ಲ ಹೇಳಿಕೊಳ್ಳುತ್ತೇವೆ. ಆದರೆ ಒಮ್ಮೆ ಕಣ್ಣು ಮುಚ್ಚಿದರೆ, ಎಲ್ಲ ಮಾಯೆ, ಎಲ್ಲ ಕಾರ್ಗತ್ತಲು. ಎಲ್ಲಿ ಹೋಗುತ್ತೇವೆ, ಎಲ್ಲಿರುತ್ತೇವೆ, ಏನಾಗಿರುತ್ತೇವೆ ಎಂಬುದು ನಮಗೂ ತಿಳಿಯದು, ಬೇರೆಯವರಿಗೂ ತಿಳಿಯದು. ಮುದ್ದುರಾಮ ಈ ಬಗೆಗೆ ಏನು ಹೇಳುತ್ತಾನೆಂದು ನೋಡೋಣ–

ಉಸಿರು ತುಂಬಿದ ಚೀಲ ಏಕೆ ಬರಿದಾಗುವುದೊ
ಬರಿದಾದ ಒಡನೆ ಅದ ಏಕೆ ನೂಕುವರೋ
ಇತ್ತಂದು ಆಗಾಳಿ; ಇಂದು ಅದೆ ನಿರ್ಜೀವ
ಜೀವವೆಂದರೆ ಏನು ಮುದ್ದುರಾಮ.

ಮನುಷ್ಯನಾಗಲಿ, ಆನೆಯಾಗಲಿ, ಮೊಸಳೆಯಾಗಲಿ, ಇನ್ನೊಂದಾಗಲಿ, ಬದುಕಿರುವವರೆಲ್ಲರೂ ಗಾಳಿ ತುಂಬಿದ ಚೀಲಗಳು ಮಾತ್ರ. ಹಾಗಿರುವ ಚೀಲದಿಂದ, ಗಾಳಿ ಹೊರಗೆ ಹೋಗುವುದು ಖಚಿತ. ಅದು ಯಾರೂ ತಪ್ಪಿಸಲಾಗದ ಪ್ರಕೃತಿ ನಿಯಮ. ಏಕೆ ಗಾಳಿ ಹೋಗಿ ಚೀಲ ಬರಿದಾಗುವುದೋ ಯಾರೂ ಅರಿಯರು. ಐವತ್ತು ವರ್ಷ, ಅರುವತ್ತು ವರ್ಷ ಅದನ್ನು ಪ್ರೀತಿಯಿಂದ, ಗೌರವದಿಂದ, ಅಭಿಮಾನದಿಂದ ನೋಡಿಕೊಂಡಿದ್ದವರು ಆ ಕ್ಷಣವೇ ಅದನ್ನು ಭೂಮಿಯೊಳಕ್ಕೆ ಅಥವಾ ಬೆಂಕಿಯ ಜ್ವಾಲೆಯೊಳಕ್ಕೆ ನೂಕಲು ಏಕೆ ತೊಡಗುವರೋ! ಅದು ಒಳಗೆ ಗಾಳಿಯಿದ್ದಾಗ, ಅವರಿಗೆ ರಾಜ, ಇವರಿಗೆ ಗುರು, ಅವನಿಗೆ ಅಣ್ಣ, ಇವನಿಗೆ ತಮ್ಮ, ಇದೆಲ್ಲ. ಗಾಳಿ ಹೋದ ಮೇಲೆ ಅದು ನಿರ್ಜೀವ ದೇಹ, ಶವ, ಹೆಣ. ಹಾಗಾದರೆ ಜೀವವೆಂದರೆ ಏನು? ಎಂಬುದು ಮುದ್ದುರಾಮನ ಪ್ರಶ್ನೆ. ಪ್ರಶ್ನೆ ಕೇಳುವುದು ಸುಲಭ. ಉತ್ತರ ಕೊಡುವುದು. ಇದರಂತೆ ನಮಗೆ ಉತ್ತರ ಹೊಳೆಯದ ಅನೇಕ ಪ್ರಶ್ನೆಗಳಿವೆ.

ಯಾವುದಿಂದಿಗೆ ಆದಿ? ಅಂದೇನು ಇದರ ಕಥೆ?
ಏನಿತ್ತು ಏನಿಲ್ಲ ಕಗ್ಗತ್ತಲಲ್ಲಿ?
ಯಾರಿರದ ನೆಲೆಯಲ್ಲಿ ಹುಟ್ಟಿಂದರೇನರ್ಥ
ಒಗಟು ಈ ಜಗಲೀಲೆ! ಮುದ್ದುರಾಮ॥

ಇಂದಿರುವ ಈ ವಿಷಮ ಜಗತ್ತಿಗೆ, ಇಂದಿನ ಪ್ರಪಂಚಕ್ಕೆ ಆದಿ ಯಾವುದು? ಹಾಗೆ ಜಗತ್ಸೃಷ್ಟಿಯಾಗುವುದಕ್ಕೆ ಮುಂಚೆ ಇದರ ಕಥೆ ಏನು? ಆಗ ಏನೂ ಇರಲಿಲ್ಲ ಆ ಕಗ್ಗತ್ತಿನಲ್ಲಿ, ಎಂದರೆ ಸೃಷ್ಟಿ ಪೂರ್ವದಲ್ಲಿ, ಏನಿತ್ತು? ಏನಿರಲಿಲ್ಲ? ಆಗ ಎಲ್ಲ ಕತ್ತಲೆ. ಸೂರ್ಯ, ಚಂದ್ರ, ನಕ್ಷತ್ರ–ಇತ್ಯಾದಿ ಬೆಳಕಿನ ಮೂಲಗಳೇ ಇರಲಿಲ್ಲ. ಕಗ್ಗತ್ತಲು ಮಾತ್ರ. ಯಾರೂ ಇಲ್ಲದಾಗ ನಕ್ಷತ್ರಗಳು ಹುಟ್ಟಿದುವು – ಎಂದರೆ ಏನರ್ಥ? ಈ ಜಗತ್ತಿನ ಆದಿ ಬಿಡಿಸಲಾರದ ಒಗಟಲ್ಲವೆ? ಪ್ರಾಯಶಃ ಕವಿ ಶಿವಪ್ಪನವರು ಋಗ್ವೇದದ ನಾಸದೀಯ ಸೂಕ್ತದಿಂದ ಪ್ರಭಾವಿತರಾಗಿ ಈ ಪದ್ಯವನ್ನು ಬರೆದಿರಬಹುದು.

ನಾಸದಾಸೀತ್ ನೋ ಸದಾಸೀತ್ ತದಾನೀಂ

ಎಂದು ಆ ಸೂಕ್ತ ಆರಂಭಗೊಳ್ಳುತ್ತದೆ. ಇದೆ, ಇಲ್ಲ ಎಂಬ ಕಲ್ಪನೆಯೂ ಇಲ್ಲದ ಸ್ಥಿತಿ ಅದು. ಎಲ್ಲೆಲ್ಲೂ ಕತ್ತಲೆ. ಆಗ ಸೃಷ್ಟಿ ಪ್ರಕ್ರಿಯೆ ಆರಂಭಗೊಂಡಿದ್ದು ಹೇಗೆ? ಎಂಬ ಪ್ರಶ್ನೆಯನ್ನು ಆ ಸೂಕ್ತವೂ ಎತ್ತುತ್ತದೆ. ಈ ಎಲ್ಲ ಜಗತ್ತನ್ನು 'ಅಧ್ಯಕ್ಷ'ನಾಗಿ ನೋಡುತ್ತಿರುವ ಭಗವಂತನು ಪ್ರಶ್ನೆಗೆ ಉತ್ತರವನ್ನು ತಿಳಿದಿರಬಹುದು ಅಥವಾ ಅವನಿಗೂ ತಿಳಿಯದೋ ಏನೋ! ಸೋ ಅಂಗ ವೇದ ಯದಿವಾ ನವೇದ ಎಂದು ಆ ಸೂಕ್ತ ಮುಗಿಯುತ್ತದೆ. ಈ ಚಿಂತನೆಯನ್ನು ಮುಂದುವರಿಸುತ್ತಾ ಮುದ್ದುರಾಮ ಹೀಗೆ ನುಡಿಯುತ್ತಾನೆ–

ಶೂನ್ಯದಲಿ ಬೆಳಕಸೆಳೆ ಎಂತು ಆಯಿತು ಬೆಡಗು?
ಮತ ಸುಳಿದ ಪರಿ ಎಂತು ನರಜಾತಿಯಲ್ಲಿ?
ಈ ಸೊಗದ ಮೂಲದಲಿ ತರ್ಕವೊಂದಿದೆಯೇನು?
ಇದ್ದರೇನಾ ಸಾಕ್ಷಿ? ಮುದ್ದುರಾಮ॥



ಈಗ ಈ ಲೋಕದಲ್ಲಿ ಇಷ್ಟು ಬೆಳಕಿದೆ. ಲಕ್ಷ ಲಕ್ಷ ನಕ್ಷತ್ರಗಳು, ನೀಹಾರಿಕೆಗಳು, ಗ್ರಹಗಳು, ಕೃತಕವಾಗಿ ಸೃಷ್ಟಿಗೊಂಡಿರುವ ಬೆಳಕು ಶೂನ್ಯವಾಗಿದ್ದ ಪ್ರಪಂಚದಲ್ಲಿ ಬೆಳಕು ಹೇಗೆ ಹುಟ್ಟಿತು? ದೇವರು ಬೆಳಕನ್ನು ಸೃಷ್ಟಿಸಿರಬೇಕು ಎನ್ನುವುದಾದರೆ, ಅಷ್ಟು ಶಕ್ತಿವಂತನಾದ ದೇವರು ಎಲ್ಲಿಂದ ಬಂದ? ಬೇರೆ ದಾರಿಯಿಲ್ಲದೆ, ಸರ್ವಶಕ್ತನಾದ, ಸರ್ವಜ್ಞನಾದ ದೇವರು ಇದ್ದಾನೆ ಎಂದು ಎಷ್ಟೂ ಜನರು ಒಪ್ಪಿಕೊಂಡಿದ್ದಾರೆ.

ಸೃಷ್ಟಿಯಾಯಿತು ಭೂಮಿಯಲ್ಲಿ ದೇವರ ಅಥವಾ ಪ್ರಕೃತಿಯ ಆಟದಿಂದ ನಾನಾ ವಿಧವಾದ ಪ್ರಾಣಿಗಳು, ಪಕ್ಷಿಗಳು, ಮಾನವರು ಹುಟ್ಟಿದರು ಎಂದಿಟ್ಟುಕೊಳ್ಳೋಣ. ಆದರೆ, ಬೇರೆ ಯಾವ ಪ್ರಾಣಿಗಳಲ್ಲಿ ಇಲ್ಲದ ತೀಕ್ಷ್ಣ ಬುದ್ಧಿಶಕ್ತಿ ಮಾನವರಿಗೆ ಏಕೆ ಬಂತು? ಹೇಗೆ ಬಂತು? ಎಲ್ಲಿಂದ ಬಂತು? ಪ್ರಪಂಚವನ್ನೆಲ್ಲ ಅರ್ಥ ಮಾಡಿಕೊಳ್ಳುವ, ವಿಶ್ವವನ್ನೇ ವೀಕ್ಷಿಸುವ, ಜಗತ್ತನ್ನೇ ಪರಿವರ್ತಿಸುವ ಬುದ್ಧಿಯನ್ನು ಮಾನವ ಕುಲ ಹೇಗೆ ಪಡೆಯಿತು?

ಇದು ಅಚೇತನವಾದ ಪ್ರಕೃತಿಯ ಆಕಸ್ಮಿಕ ಕೊಡುಗೆಯೋ ಅಥವಾ ಉದ್ದೇಶಪೂರ್ವಕವಾಗಿ ಸರ್ವಜ್ಞ ಪರಮಾತ್ಮನು ತರ್ಕ ಮಾಡಿ ಮಾನವರಿಗೆ ಬುದ್ಧಿಶಕ್ತಿಯನ್ನು ಕೊಟ್ಟನೋ ಎಂಬ ಮೂಲಭೂತ ಪ್ರಶ್ನೆಯನ್ನೂ ಮುದ್ದುರಾಮನು ಮಾಡಿದ್ದಾನೆ.

ಒಂದು ವೇಳೆ ಭಗವಂತನೇ ಉದ್ದೇಶಪೂರ್ವಕವಾಗಿ ಮನುಷ್ಯರಿಗೆ ಬುದ್ಧಿಯನ್ನು ಕೊಟ್ಟನೆಂದರೆ ಅದಕ್ಕೆ ಸಾಕ್ಷಿ ಏನಿದೆ? ಎಂಬುದು ಇಲ್ಲಿರುವ ಉಪಪ್ರಶ್ನೆ. ಬುದ್ಧಿಯನ್ನೇನೋ ಭಗವಂತನು ಕೊಟ್ಟನೆಂದು ಇಟ್ಟುಕೊಳ್ಳೋಣ. ಅವನು ಒಳ್ಳೆಯ ಬುದ್ಧಿಯನ್ನೇ ಏಕೆ ಕೊಡಲಿಲ್ಲ? ಸರ್ವಶಕ್ತನು ಎಲ್ಲರನ್ನೂ ಸತ್ಯವಂತರನ್ನಾಗಿ ಧರ್ಮನಿಷ್ಠರನ್ನಾಗಿ ಏಕೆ ಮಾಡಲಿಲ್ಲ?

ಒಳಿತು ಕೊಟ್ಟವನೇಕೆ ಕೆಡಕೊಂದ ರಚಿಸಿದನೊ
ಸುಧೆಯನಿತ್ತವನೇಕೆ ವಿಷವ ಸೃಜಿಸಿದನೊ?
ಮತಿಯ ಮನುಜನಿಗಿತ್ತು ಅದನೇಕೆ ತಿರುಚಿದನೊ
ಏನಿದೀ ಒಳಗಂಟು ಮುದ್ದುರಾಮ॥

ಒಳ್ಳೆಯದನ್ನು ಕೊಟ್ಟ ಸರ್ವಕರ್ತನು ಕೆಡುಕನ್ನೂ ಜೊತೆಗೆ ರಚಿಸಿದ್ದಾನೆ. ಚೆಲುವಾದ ಗುಲಾಬಿ ಹೂವನ್ನು ರಚಿಸಿದವನು ಜೊತೆಗೆ ಚೂಪಾದ ಮುಳ್ಳನ್ನೂ ಇಟ್ಟಿದ್ದಾನೆ. ಅಮೃತವನ್ನು, ಅಮೃತದಂತಹ ಸಿಹಿ ಹಣ್ಣುಗಳನ್ನು ಸೃಷ್ಟಿಸಿದವನು ವಿಷ ಫಲಗಳನ್ನು ಸೃಷ್ಟಿಸಬೇಕಾದ ಆವಶ್ಯಕತೆ ಏಕಿತ್ತು? ಮನುಷ್ಯನಿಗೆ ಸದ್ಬುದ್ಧಿ ಕೊಟ್ಟಂತೆ ದುರ್ಬುದ್ಧಿಯನ್ನೂ ದೇವರು ಕೊಟ್ಟಿದ್ದೇಕೆ? ಇದರ ಒಳಗುಟ್ಟು ಏನು? ಸೃಷ್ಟಿಯ ರಹಸ್ಯಗಳು ನಮಗೆ ಅಭೇದ್ಯ. ನೂರು ಪ್ರಶ್ನೆಗಳಿವೆ. ಉತ್ತರಗಳಿಲ್ಲ. ದೇವತೆಗಳನ್ನು ಸೃಷ್ಟಿಸಿದ್ದು ಸರಿ. ರಾಕ್ಷಸರನ್ನು ಸೃಷ್ಟಿಸಿ ಅವರಿಗೆ ಪೀಡೆಯನ್ನೇಕೆ ಕೊಡಬೇಕಾಗಿತ್ತು? ಕೊನೆಗೆ ತಾನು ಹೋಗಿ ರಾಕ್ಷಸರನ್ನು ಸದೆಬಡಿದು ದೇವತೆಗಳನ್ನು ರಕ್ಷಿಸಿದೆ ಎಂಬ ನಾಟಕವೇಕೆ? ಇದರ ಒಳಗಂಟು ಅಥವಾ ಒಳಗುಟ್ಟು ಯಾವುದೋ ನಮಗೆ ತಿಳಿಯದು.

ಆ ಭಗವಂತ ಯಾರಿಗೆ ಸಿಕ್ಕಿದ್ದಾನೆ? ದೊಡ್ಡ ಮಠಗಳನ್ನು ಕಟ್ಟಿಕೊಂಡು ಕುಳಿತಿರುವ ಸಂನ್ಯಾಸಿಗಳಿಗಾ? ಘಂಟಾನಾದವನ್ನು ಮಾಡಿ ಜಾಗಟೆಗಳನ್ನು ಬಡಿದು ಶಂಖ ಊದುವ ಭಕ್ತರಿಗಾ? ಪುಸ್ತಕಗಳನ್ನು ಓದು, ಉರು ಹೊಡೆದು, ವ್ಯಾಖ್ಯಾನವನ್ನು ಮಾಡುವ ವಿದ್ವಾಂಸರಿಗೋ, ಕವಿಗಳಿಗೋ ಭಗವಂತನನ್ನೇ ಧ್ಯಾನಿಸುವ ಯೋಗಿಗಳಿಗೋ? ಈ ಎಲ್ಲರಿಗೂ ಆಗಿದೆ ಆಗುತ್ತಿದೆ ಎನ್ನುವವರೂ ಇದ್ದಾರೆ. ಯಾರಿಗೂ ಆಗಿಲ್ಲ, ಕೆಲವರಿಗೆ ಆಗಿದೆ ಎಂಬ ಭ್ರಮೆ ಅಷ್ಟೆ ಎನ್ನುವವರೂ ಇದ್ದಾರೆ. ಮುದ್ದುರಾಮ ಏನೆನ್ನುತ್ತಾನೆ?

ನೀ ಮುಂದೆ ಹೋದಂತೆ ಇನ್ನಷ್ಟು ಅದು ದೂರ
ತಬ್ಬಿ ನಿಲುವುದರೊಳಗೆ ಅದೆ ಮಂಗಮಾಯ
ಬಾನಾಚೆ ಕಡಲಾಚೆ ಎಲ್ಲೊ ಅದರಾವಾಸ
ಬದುಕು ಬರಿ ಹುಡುಕಾಟ ಮುದ್ದುರಾಮ॥

ಭಗವಂತ, ಪರಮಾತ್ಮ, ಪರಬ್ರಹ್ಮ ಎಂದು ನಾವು ಹೆಸರಿಸಿದ ಶಕ್ತಿ ಎಷ್ಟು ದೂರದಲ್ಲಿದೆ ಎಂದುಕೊಂಡು ನಾವು ಹೋದರೆ ಅದು ಅಲ್ಲಿಂದ ಇನ್ನಷ್ಟು ದೂರದಲ್ಲಿದೆ ಎನಿಸುತ್ತದೆ. ಯಾರನ್ನು ಕೇಳಿದರೂ ನಾನು ಗುರಿಯನ್ನು ತಲುಪಿದ್ದೇನೆ ಎನ್ನುವವರಿಲ್ಲ. ಆ ಮಾರ್ಗದಲ್ಲಿ ನಾನು ಹೋಗುತ್ತಿದ್ದೇನೆ, ಆದರೆ ಇನ್ನೂ ಏನೂ ಸಿಕ್ಕಿಲ್ಲ ಎನ್ನುವವರೇ ಎಲ್ಲರೂ. ಇನ್ನೇನು ಸತ್ಯಸಾಕ್ಷಾತ್ಕಾರವಾಯಿತು. ಉಳಿದದ್ದು ದೈವಾನುಭವ ಮಾತ್ರ ಎಂದುಕೊಂಡಿದ್ದವರಿಗೆ ದೂರದಲ್ಲಿ ಕಾಣಿಸುತ್ತಿದುದೂ ತಟ್ಟನೆ ಮಾಯ. ಬಾನಾಚೆಗೆ ಅದರ ಆವಾಸ ಸ್ಥಾನವನ್ನು ಹುಡುಕಿಕೊಂಡು ಹೋದರೂ ಅಲ್ಲಿ ಕಾಣುವುದು ಶೂನ್ಯ ಮಾತ್ರ. ಬಾಹ್ಯಾಕಾಶಕ್ಕೆ ತೆರಳಿದ ಯಾರೂ ನಾವು ದೇವರನ್ನು ಕಂಡೆವು ಎಂದು ಹೇಳಿಲ್ಲ. ಕಡಲಾಚೆಯೂ ನಮ್ಮ ದೇಶದಂತೆ ಇನ್ನೊಂದು ದೇಶ ಇರುವುದಷ್ಟೆ. ಆ ಜನರಿಗೂ ಭಗವಂತನ ಬಗೆಗೆ ಜ್ಞಾನ–ಅಜ್ಞಾನ–ಭ್ರಾಂತಿ–ಇತ್ಯಾದಿಗಳು. ಮಾನವನ ಬದುಕು ಬರಿ ಹುಡುಕಾಟ. ಗುರಿಯನ್ನು ತಲುಪದಿದ್ದರೂ ದಾರಿಯೇ ಚೆನ್ನಾಗಿದೆ. ಅದರ ನೋಟ ಸಿಕ್ಕಿತಲ್ಲ, ಅದೇ ದೊಡ್ಡ ಲಾಭ.

ಒಂದಿರಲಿ ಎರಡಿರಲಿ ದರ್ಶನದ ಸೂತ್ರ ಅದು
ಚರಮಗುರಿ ಒಂದೆ ಈ ಕಾಣ್ಕೆ ಸೊಬಗಿನಲಿ
ಬಿಳಿಗಿರಿಯ ತಲುಪಲಿಕೆ ದಾರಿ ನೂರಿರಬಹುದು
ಗೋಪಿವಲ್ಲಭನೊಬ್ಬ ಮುದ್ದುರಾಮ॥

ಭಗವದ್ದರ್ಶನಕ್ಕೆ ಇರುವ ಸೂತ್ರ ಒಂದಿರಬಹುದು, ಎರಡಿರಬಹುದು, ನೂರಿರಬಹುದು. ಆದರೆ ಇರುವ ಸೂತ್ರ ಒಂದೇ. ಅದನ್ನು ಬೇರೆ ಬೇರೆ ಮತಗಳ, ದರ್ಶನಗಳ, ದೃಶ್ಯ ಅನುಭವಗಳ ಆಧಾರದ ಮೇಲೆ ವಿಂಗಡಿಸಬಹುದು. ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗ ಆ ಹೆಸರಿನ ಬೆಟ್ಟದಲ್ಲಿದ್ದಾನೆ. ಅಲ್ಲಿಗೆ ತಲುಪಲು ನಾನಾ ದಿಕ್ಕುಗಳಿಂದ ನಾನಾ ದಾರಿಗಳಿವೆ. ದಾರಿ ನೂರು, ಬೆಟ್ಟ ಒಂದು. ಕಾಣ್ಕೆಯ ಸೌಂದರ್ಯ ಬೇರೆ ಬೇರೆಯಾಗಿದ್ದರೂ ಅಂತಿಮ ಗುರಿ ಒಂದೇ. ಎಲ್ಲರೂ ಹೋಗುವುದು ಅಲ್ಲಿರುವ ಗೋಪೀವಲ್ಲಭ ರಂಗನಾಥಸ್ವಾಮಿಯನ್ನು ನೋಡುವುದಕ್ಕೆ ದಾರಿ ಬೇರೆ ಆದರೂ ಗುರಿ ಒಂದೇ. ಬಾವಿಯ ನೀರಿನಿಂದ ಸ್ನಾನ ಮಾಡಿದರೂ ನದಿಯ ನೀರಿನಲ್ಲಿ ಮುಳುಗಿ ಎದ್ದರೂ, ಬಚ್ಚಲ ಮನೆಯಲ್ಲಿ ಹಂಡೆಯ ನೀರಿನಿಂದ ಮಿಂದರೂ ಗುರಿ ಒಂದೇ. ಶರೀರ ಶುದ್ಧಿ. ಅದು ಯಾವುದರಿಂದ ಸಿದ್ಧಿಸಿದರೂ ಸರಿ.

ತರ್ಕಕ್ಕೆ, ವಾದಗಳಿಗೆ ಭಗವಂತ ನಿಲುಕುವನೋ ಇಲ್ಲವೋ ತಿಳಿಯದು. ಆದರೆ ಕವಿ ಶಿವಪ್ಪನವರಿಗೆ ಮುದ್ದುರಾಮನಲ್ಲಿ, ಗೋಪೀವಲ್ಲಭ ಕೃಷ್ಣನಲ್ಲಿ, ಲೋಕರಕ್ಷಕ ಶಿವನಲ್ಲಿ ನಂಬಿಕೆ ಇದೆ. ಅವರು ಯಾವುದನ್ನು ನಿರಾಕರಿಸಿಲ್ಲ. ಆದರೆ ಬೌದ್ಧಿಕ, ವೈಚಾರಿಕ ದೃಷ್ಟಿಯಿಂದ ಹುಟ್ಟುವ ಪ್ರಶ್ನೆಗಳನ್ನು ಎತ್ತಿ ತೋರಿಸಿದ್ದಾರೆ. ಅವುಗಳನ್ನು ನಾವು ಮೆಲುಕು ಹಾಕುತ್ತಾ ಚಿಂತನೆಯನ್ನು ಮಾಡಬೇಕು.

ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಮುಂಭಾಗ ಕುಸಿದು ಬಿದ್ದು

ಆರು ವರ್ಷವಾಯ್ತು; ಇನ್ನೂ ಕಾಯಕಲ್ಪ ಭಾಗ್ಯವಿಲ್ಲ

ಮುಖ್ಯಮಂತ್ರಿ ತವರಿನ ಪಾರಂಪರಿಕ ಕಟ್ಟಡದ ದುಸ್ಥಿತಿ ಪರಿಯಿದು!



● ಮೋಹನ್ ಕಾಯಕ

ಮೈಸೂರು, ಆ.5– ಮೈಸೂರಿನ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡದ ಮುಂಭಾಗ (ಪೋರ್ಟಿಕೊ) ಕುಸಿದು ಬಿದ್ದು ಬರೋಬ್ಬರಿ 6 ವರ್ಷಗಳಾದರೂ ಜನಪ್ರತಿನಿಧಿಗಳ ಜಟಾಪಟಿ, ನಿರ್ಲಕ್ಷ್ಯತೆಯಿಂದಾಗಿ ರಕ್ಷಕರಿಗೆ ಅಸುರಕ್ಷತೆ ಕಾಡುವ ಪರಿಸ್ಥಿತಿ ಮುಂದುವರೆದಿದೆ.

2019ರ ಆ.9ರಂದು ವರಮಹಾಲಕ್ಷ್ಮಿ ಹಬ್ಬದ ದಿನದಂದೇ ಮಧ್ಯಾಹ್ನ 3.15ಕ್ಕೆ ಕುಸಿದು ಬಿದ್ದ ಪಾರಂಪರಿಕ ಕಟ್ಟಡಕ್ಕೆ ಪುನಶ್ಚೇತನ ನೀಡಲು ಇನ್ನೂ ಸಾಧ್ಯವಾಗಿಲ್ಲ. ಅಂದಿನ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ನಂತರದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಂದಿನ ಸ್ಥಳೀಯ ಶಾಸಕರಾಗಿದ್ದ ಎಲ್.ನಾಗೇಂದ್ರ, ಅಂದಿನ ಲೋಕಸಭಾ ಸದಸ್ಯ ಪ್ರತಾಪ್ ಸಿಂಹ, ಹಾಲಿ ಲೋಕಸಭಾ ಸದಸ್ಯರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹಾಲಿ ಶಾಸಕ ಕೆ.ಹರೀಶ್‌ಗೌಡ ಸ್ಥಳ ಪರಿಶೀಲನೆ ನಡೆಸಿದ್ದಾರೆಯೇ ಹೊರತು ರಕ್ಷಕರ ರಕ್ಷಣೆಗೆ ಮುಂದಾಗಿಲ್ಲ ಎಂಬುದು ದುಃಖದ ಸಂಗತಿಯಾಗಿದೆ.

ಕಟ್ಟಡ ಕುಸಿದು ಬಿದ್ದಾಗ ಅದೃಷ್ಟವಶಾತ್ ಅದರಡಿ ಯಾರೂ ಇರಲಿಲ್ಲ. ಯಾವುದೇ ಸಾವು–ನೋವು ಸಂಭವಿಸದೆ, ಪೋಸ್ಟ್‌ಮ್ಯಾನ್ ಒಬ್ಬರ ದ್ವಿಚಕ್ರ ವಾಹನ ಜಖಂಗೊಂಡಿತ್ತು ಅಂದಿನಿಂದ ಇಲ್ಲಿವರೆಗೆ ಠಾಣೆ ಸಿಬ್ಬಂದಿ ಭಯದಲ್ಲಿಯೇ ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದು, ಯಾವಾಗ ಬೇಕಾದರೂ ತಮ್ಮ ಜೀವಕ್ಕೆ ಕುತ್ತು ಬರಲಿದೆ ಎಂಬ ಆತಂಕದಲ್ಲಿಯೇ ದಿನ ದೂಡುತ್ತಿದ್ದಾರೆ. ಪಾರಂಪರಿಕ ಕಟ್ಟಡವೆಂಬ ಕಾರಣಕ್ಕೆ ಕುಸಿದು ಬಿದ್ದಿದ್ದ ಕಟ್ಟಡದ ತ್ಯಾಜ್ಯವನ್ನು ತೆರವುಗೊಳಿಸಲು 19 ದಿನಗಳಾಯಿತು. ಕಟ್ಟಡದ ತ್ಯಾಜ್ಯವನ್ನು ಪಕ್ಕದಲ್ಲೇ ಇರುವ ಆಲದಮರದ ಕೆಳಕ್ಕೆ ಸುರಿಯಲಾಯಿತು. ಅಂದಿನಿಂದ ಅದೇ ಕಾರಣವನ್ನು ಮುಂದಿಟ್ಟುಕೊಂಡು ಈ ಪಾರಂಪರಿಕ ಕಟ್ಟಡಕ್ಕೆ ಭದ್ರತೆ ನೀಡಲು ಜಟಾಪಟಿಗಳು ನಡೆಯುತ್ತಲೇ ಇದೆ.

ಕಟ್ಟಡದ ಮುಂಭಾಗ ಕುಸಿದ ಬಳಿಕ ಅಲ್ಲಿಯೇ ಇದ್ದಂತಹ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳ ಕಚೇರಿ ಬನ್ನಿಮಂಟಪ ಠಾಣೆಗೆ, ಮುಖ್ಯ ಅಗ್ನಿಶಾಮಕ ಅಧಿಕಾರಿ ಕಚೇರಿ ಹೆಬ್ಬಾಳ ಠಾಣೆಗೆ ವರ್ಗಾಯಿಸಲಾಗಿದೆ. ಆದರೆ, ಜಿಲ್ಲಾ ಅಗ್ನಿಶಾಮಕ ಹಾಗೂ ಠಾಣಾಧಿಕಾರಿ ಕಚೇರಿ ಅಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದೆ. ಜೊತೆಗೆ ಕಂಟ್ರೋಲ್ ರೂಂ ಕೂಡ ಇಲ್ಲಿಯೇ ಇದ್ದು, ಯಾವಾಗ ಬೇಕಾದರೂ ಅನಾಹುತ ಸಂಭವಿಸುವ ಆತಂಕ ಆವರಿಸಿದೆ.

127 ವರ್ಷದ ಹಳೇ ಕಟ್ಟಡ: ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಕಟ್ಟಡವನ್ನು 1898ರಲ್ಲಿ ನಿರ್ಮಿಸಿದ್ದು, ಇಲ್ಲಿಗೆ ಬರೋಬ್ಬರಿ 127 ವರ್ಷಗಳಾಗಿದೆ. ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣವಾದ ಈ ಪಾರಂಪರಿಕ ಕಟ್ಟಡಕ್ಕೆ ಪುನಶ್ಚೇತನವಾಗದೆ ತನ್ನ ವೈಭವ ಕಳೆದುಕೊಂಡು ಅನಾಥವಾಗಿ ನಿಂತಿದೆ. ವಿಪರ್ಯಾಸವೆಂದರೆ ಕಟ್ಟಡ ಕುಸಿದಾಗಿನಿಂದ ಕಟ್ಟಡ ಭದ್ರವಾಗಿದೆಯೇ, ಕರ್ತವ್ಯ ನಿರ್ವಹಿಸುವವರ ಸ್ಥಿತಿ ಹೇಗಿದೆ ಎಂಬುದನ್ನು ಯಾರೊಬ್ಬರು ಕೇಳದಿರುವುದು ಆಡಳಿತಕ್ಕೆ, ಜನಪ್ರತಿನಿಧಿಗಳ ಕಾಳಜಿಗೆ ಹಿಡಿದ ಕೈಗನ್ನಡಿಯಾಗಿದೆ.

22 ಲಕ್ಷ ರೂ. ಅನುದಾನ: ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಪೋರ್ಟಿಕೊ ಪುನರ್ ನಿರ್ಮಾಣಕ್ಕೆ 22 ಲಕ್ಷ ರೂ. ಅನುದಾನ ನೀಡಲಾಗಿತ್ತು. ಅದರಂತೆ ಪಿಡಬ್ಲ್ಯೂಡಿ ಇಲಾಖೆಯವರು ಸಾಮಾನ್ಯ ಗಾರೆ ಬಳಸಿ ನಿರ್ಮಾಣಕ್ಕೆ ಪ್ಲಾನ್ ಮಾಡಿದಾಗ ಸಾಮಾನ್ಯ ಗಾರೆಯಲ್ಲಿ ಕಟ್ಟುವುದಲ್ಲ. ಮೊದಲು ಕಟ್ಟಿರುವಂತೆಯೇ ಹಳೇ ಸುಣ್ಣ, ಮೊಟ್ಟೆಮಿಶ್ರಿತ ಗಾರೆಯಲ್ಲಿ ಕಟ್ಟಬೇಕು ಎಂದಿದ್ದರಿಂದ ಬಿಡುಗಡೆ ಮಾಡಲಾಗಿದ್ದ 22 ಲಕ್ಷ ರೂ. ಅನುದಾನ ಸಾಕಾಗುವುದಿಲ್ಲ ಎನ್ನಲಾಯಿತು. ಹಾಗಾಗಿ ಬಿಡುಗಡೆಯಾಗಿದ್ದ ಅನುದಾನ ವಿನಿಯೋಗಿಸಿಕೊಳ್ಳುವ ದೃಷ್ಟಿಯಿಂದ ಬನ್ನಿಮಂಟಪ ಅಗ್ನಿಶಾಮಕ ಠಾಣೆಯ ಸಿಬ್ಬಂದಿ ಕ್ವಾಟ್ರಸ್ ಗೋಡೆ ರಿಪೇರಿ ಮತ್ತು ಸ್ಟೋರ್ ರೂಂ ನಿರ್ಮಾಣಕ್ಕೆ ಆ ಹಣವನ್ನು ಬಳಕೆ ಮಾಡಿಕೊಳ್ಳಲಾಗಿದೆ ಎಂದು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಜನಪ್ರತಿನಿಧಿಗಳ ಜಟಾಪಟಿಗೆ ಠಾಣೆ ಬಡವಾಯ್ತು...!

ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡದ ಮರು ನಿರ್ಮಾಣಕ್ಕೆ ಸಂಬಂಧಿಸಿದಂತೆ ಲೋಕಸಭಾ ಸದಸ್ಯ ಯದುವೀರ್ ಅವರು, ಪಾರಂಪರಿಕ ಕಟ್ಟಡವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮೊದಲಿನಂತೆಯೇ ವಿನ್ಯಾಸಗೊಳಿಸಿ ಸಂರಕ್ಷಣೆ ಮಾಡಬೇಕು ಎನ್ನುತ್ತಾರೆ. ಆದರೆ, ಸ್ಥಳೀಯ ಶಾಸಕರು ಇರುವಂತೆ ಉಳಿಸಿದರೆ, ಸಮಸ್ಯೆ ಬರಲಿದ್ದು, ಹೊಸದಾಗಿ ನಿರ್ಮಿಸುವುದೇ ಉತ್ತಮ ಎನ್ನುತ್ತಿದ್ದಾರೆ ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ತಿಳಿಸಿದ್ದು, ಈಗಾಗಿ ಜನಪ್ರತಿನಿಧಿಗಳ ಜಟಾಪಟಿಯಿಂದಾಗಿ ಅಗ್ನಿಶಾಮಕ ಠಾಣೆ ಬಡವಾಗಿದೆ. ಕುಸಿದು ಬಿದ್ದು 6 ವರ್ಷವಾದರೂ ಪುನಶ್ಚೇತನ ನೀಡಲಾಗಿಲ್ಲ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಆಕ್ಷೇಪಿಸಿದ್ದಾರೆ.

64 ಕ್ವಾಟ್ರರ್ಸ್‌ಗಳು ಶಿಥಿಲಗೊಂಡಿವೆ...

“ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಮಾತ್ರವಲ್ಲದೆ ಠಾಣೆ ಹಿಂಬದಿಯಲ್ಲಿರುವ 64 ಕ್ವಾಟ್ರರ್ಸ್‌ಗಳು ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಯಾರೊಬ್ಬ ಸಿಬ್ಬಂದಿಯೂ ವಾಸವಾಗಿಲ್ಲ. ಕುಸಿದು ಬೀಳುವ ಆತಂಕದಲ್ಲಿ ಸಾವಿರಾರು ರೂ. ಕೊಟ್ಟು ಬಾಡಿಗೆ ಮನೆಯಲ್ಲಿ ವಾಸ ಮಾಡುವಂತಾಗಿದೆ. ಬರುವ ಸಂಬಳದಲ್ಲೇ ಬಾಡಿಗೆ, ಮನೆ ಖರ್ಚು, ಮಕ್ಕಳ ವಿದ್ಯಾಭ್ಯಾಸ ಮಾಡಿಸಬೇಕು. ಕ್ವಾಟ್ರಸ್ ಇದ್ದಿದ್ದರೆ ಬಾಡಿಗೆ ಹಣ ಉಳಿಯುತ್ತಿತ್ತು ಎಂದು ಕೆಲ ಅಗ್ನಿಶಾಮಕ ಸಿಬ್ಬಂದಿ ಅಳಲು ತೋಡಿಕೊಂಡರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 6 ಬುಧವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 111 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಹೈಕೋರ್ಟ್ ಎಚ್ಚರಿಕೆ ಕೊಟ್ಟ ಕೆಲವೇ ಗಂಟೆಯಲ್ಲಿ ಸಾರಿಗೆ ನೌಕರರ ಮುಷ್ಕರ ಮುಂದೂಡಿಕೆ

ಬಸ್ ಸಂಚಾರ ಆರಂಭ

■ ಬೆಳಗ್ಗೆಯಿಂದ ಬಸ್ ಇಲ್ಲದೆ ಹೈರಾಣಾಗಿದ್ದ ಜನ ■ ಪ್ರಯಾಣಿಕರ ಹಿತದೃಷ್ಟಿಯಿಂದ ಮುಷ್ಕರವನ್ನು ತಾತ್ಕಾಲಿಕವಾಗಿ ಕೈಬಿಟ್ಟಿದ್ದೇವೆ: ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಅನಂತಸುಬ್ಬರಾವ್



ಮೈಸೂರಿನ ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ಮಂಗಳವಾರ ಸಂಜೆ ಬೆಂಗಳೂರು ಕಡೆಗೆ ಸಾಗುವ ಬಸ್‌ಗಳತ್ತ ತೆರಳುತ್ತಿರುವ ಪ್ರಯಾಣಿಕರನ್ನು ಚಿತ್ರದಲ್ಲಿ ಕಾಣಬಹುದು.

ಸಾರಿಗೆ ನೌಕರರ ಮುಷ್ಕರದಿಂದ ಮೈಸೂರಿನಲ್ಲಿ ಪ್ರಯಾಣಿಕರ ಪಡಿಪಾಟಲು

ಪುಟ–9ರಲ್ಲಿ

ಬೆಂಗಳೂರು, ಆ. 5(ಕೆಎಂಶಿ)– ಹೈಕೋರ್ಟ್ ಇಂದು ಮತ್ತೊಮ್ಮೆ ಚಾಟಿ ಬೀಸಿದ ಹಿನ್ನೆಲೆಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಲ್ಲಾ ನಾಲ್ಕು ನಿಗಮಗಳ ನೌಕರರ ಮುಷ್ಕರ ಹಿಂಪಡೆಯಲಾಗಿದೆ.

ನ್ಯಾಯಾಲಯ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಂತೆ ಸಾರಿಗೆ ಸಂಸ್ಥೆ ನೌಕರರ ಒಕ್ಕೂಟದ ಪದಾಧಿಕಾರಿಗಳು ಸಭೆ ಸೇರಿ ತಕ್ಷಣವೇ ಮುಷ್ಕರವನ್ನು ತಾತ್ಕಾಲಿಕವಾಗಿ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗಿ ಎಂದು ಸಿಬ್ಬಂದಿಗೆ ಸೂಚಿಸಿದರು.

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಅನಂತ ಸುಬ್ಬರಾವ್, ವಕೀಲರ ಸಲಹೆ ಮೇರೆಗೆ ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂದಕ್ಕೆ ಪಡೆದಿದ್ದೇವೆ. ನೌಕರರು ತಕ್ಷಣದಿಂದಲೇ ಸೇವೆಗೆ ಹಾಜರಾಗಬೇಕು, ನಿಮ್ಮ ರಕ್ಷಣೆಗೆ ನಾವಿದ್ದೇವೆ ಎಂಬ ಭರವಸೆ ನೀಡಿದರು.

ಸಾರಿಗೆ ಸಂಸ್ಥೆಯಲ್ಲಿ ಕೈಗಾರಿಕಾ ವ್ಯವಸ್ಥೆ ಸ್ಥಾಪಿಸಲು ಹಾಗೂ ಶಾಂತಿ ಮೂಡಿಸಲು ಸರ್ಕಾರ ಕೂಡಲೇ ಸಭೆ ಕರೆದು ಚರ್ಚಿಸುವಂತೆ ಒತ್ತಾಯಿಸಿದರು. ನ್ಯಾಯಾಲಯದ ಆದೇಶ ಗೌರವಿಸುವ ಮತ್ತು ಪ್ರಯಾಣಿಕರ ಹಿತದೃಷ್ಟಿಯಿಂದ ನಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದೇವೆ, ಇದು ತಾತ್ಕಾಲಿಕ. ನಮ್ಮ ಬೇಡಿಕೆಗಳು ಏನೆಂಬುದನ್ನು ಈಗಾಗಲೇ ಮುಖ್ಯಮಂತ್ರಿಗಳು ಕರೆದಿದ್ದ ಸಭೆಯಲ್ಲಿ ಸ್ಪಷ್ಟಪಡಿಸಿದ್ದು, ಅವುಗಳ ಈಡೇರಿಕೆಗೆ ಒತ್ತಾಯಿಸುತ್ತೇವೆ ಎಂದರು.

ಜನರ ಪರದಾಟ: ಮುಷ್ಕರ ಕರೆ ಹಿನ್ನೆಲೆಯಲ್ಲಿ ಬೆಳಗ್ಗೆ ರಾಜ್ಯದ ಹಲವೆಡೆ ಸಾರಿಗೆ ಸಂಸ್ಥೆ ಬಸ್‌ಗಳ ಸಂಚಾರವಿಲ್ಲದೆ, ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಪರದಾಡಬೇಕಾಯಿತು. ಎಲ್ಲೆಡೆ ಖಾಸಗಿ ಬಸ್ ಇನ್ನಿತರೆ ಪ್ರಯಾಣಿಕರ ವಾಹನಗಳು ಬಸ್ ನಿಲ್ದಾಣಗಳಲ್ಲಿ ಜನರನ್ನು ಕರೆದೊಯ್ಯಲಾರಂಭಿಸಿದ್ದವು. ಆದರೆ ಪ್ರಯಾಣ ದರ ಮಾತ್ರ ದುಬಾರಿ. ತರಬೇತಿ ಪಡೆಯುತ್ತಿದ್ದ ಚಾಲಕರು, ನಿರ್ವಾಹಕರ ಬಳಸಿಕೊಂಡು ಬಸ್ ಓಡಿಸಲು ರಾಜ್ಯ ರಸ್ತೆ ಸಾರಿಗೆ ಅಧಿಕಾರಿಗಳು ನಿರ್ಧರಿಸಿ, ಹಾಗೆಯೇ ಕಾರ್ಯಾಚರಣೆ ಕೈಗೊಂಡರು.

ಮುಷ್ಕರ ಒಂದು ದಿನ ಮುಂದೂಡುವಂತೆ ಹೈಕೋರ್ಟ್ ನಿನ್ನೆ ನೀಡಿದ್ದ ಆದೇಶ ಹಾಗೂ ಒಕ್ಕೂಟದಲ್ಲಿನ ಕೆಲವು ಕಾರ್ಮಿಕ ಸಂಘಟನೆಗಳು ಮುಷ್ಕರದಿಂದ ದೂರ ಉಳಿದಿದ್ದರಿಂದ ಶೇಕಡ 30ರಿಂದ 40ರಷ್ಟು ಬಸ್‌ಗಳು ಮಾತ್ರ ರಸ್ತೆಗಿಳಿದಿದ್ದವು.

ಮುನ್ನೆಚ್ಚರಿಕೆಯಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಿದ್ದರಿಂದ ಕಲ್ಲು ತೂರಾಟದ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ ಉಳಿದಂತೆ ಯಾವುದೇ ಅನಾಹುತಗಳು ಜರುಗಲಿಲ್ಲ.

ಕೆಲವೆಡೆ ಮುಷ್ಕರದ ಬಿಸಿ ಇಲ್ಲ: ಹೊರಗುತ್ತಿಗೆ ಚಾಲಕರನ್ನು ಹೊಂದಿದ ಎಲೆಕ್ಟ್ರಿಕ್ ಬಸ್‌ಗಳು ಎಂದಿನಂತೆ ■ 10ನೇ ಪುಟಕ್ಕೆ

ಮುಷ್ಕರ ನಿಲ್ಲಿಸದೇ ಹೋದರೆ ನ್ಯಾಯಾಂಗ ನಿಂದನೆ ಕೇಸ್ ಹಾಕ್ತೇವೆ...!

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ ಪ್ರಶ್ನಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ವಿಭಾಗೀಯ ಪೀಠ, ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ(ಜೆಎಸಿ)ಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು.

ಹೈಕೋರ್ಟ್ ಮುಷ್ಕರ ನಡೆಸಬಾರದೆಂದು ಆದೇಶ ನೀಡಿದ್ದರೂ, ನೀವು ಅದನ್ನು ಪಾಲಿಸಿಲ್ಲ. ಎಸ್ಮಾ ಜಾರಿಯಾಗಿದ್ದರೂ ಮುಷ್ಕರ ನಡೆಸುವುದು ಕಾನೂನುಬಾಹಿರ. ಎಸ್ಮಾ ಕಾಯಿದೆಯಡಿ ಸಂಘಟನೆಯ ಪದಾಧಿಕಾರಿಗಳನ್ನು ಬಂಧಿಸಬಹುದು. ನಾಳೆ ಮುಷ್ಕರ ನಿಂತಿರುವ ಬಗ್ಗೆ ಮಾಹಿತಿ ನೀಡಬೇಕೆಂದು ಹೈಕೋರ್ಟ್, ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಪರ ವಕೀಲರಿಗೆ ಸೂಚಿಸಿದೆ.

ಅಲ್ಲದೆ ಮುಷ್ಕರ ನಿಂತಿರುವ ಬಗ್ಗೆ ಮಾಹಿತಿ ನೀಡದೇ ಇದ್ದರೆ, ನಾಳೆ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಲಾಗುವುದು ಎಂದು ಹೈಕೋರ್ಟ್ ಎಚ್ಚರಿಕೆ ನೀಡಿತ್ತು. ಈ ವೇಳೆ ನಾಳೆ ಸಾರಿಗೆ ನೌಕರರು ಮುಷ್ಕರ ನಡೆಸುವುದಿಲ್ಲ ಎಂದು ಜಂಟಿ ಕ್ರಿಯಾ ಸಮಿತಿಯ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದರು.

ಮುಷ್ಕರ ಮುಂದೂಡಿದ ಸಂದೇಶದ ಬಳಿಕ

ಮೈಸೂರಲ್ಲಿ ಬಹುತೇಕ ಸಹಜ ಸ್ಥಿತಿಗೆ ಬಸ್ ಸಂಚಾರ



ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಸ್‌ಗಳ ಸಂಚಾರ ಆರಂಭವಾಗಿರುವುದನ್ನು ಕಾಣಬಹುದು.

ಮೈಸೂರು, ಆ.5(ಪಿಎಂ)– ಮುಷ್ಕರ ಮುಂದೂಡಿದ ಸಂದೇಶ ದೊರೆಯುತ್ತಿದ್ದಂತೆ ರಾಜ್ಯ ರಸ್ತೆ ಸಾರಿಗೆ ನೌಕರರು ಕರ್ತವ್ಯಕ್ಕೆ ಮರಳಿದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ವೇಳೆಗೆ ನಗರದಲ್ಲಿನ ಸಾರಿಗೆ ಬಸ್ ಸಂಚಾರ ಬಹುತೇಕ ಸಹಜ ಸ್ಥಿತಿಗೆ ಮರಳಿತು.


ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣ ಹಾಗೂ ನಗರ ಬಸ್ ನಿಲ್ದಾಣದಲ್ಲಿ ಸಂಜೆ ವೇಳೆಗೆ ಬಸ್‌ಗಳ ಸಂಚಾರ ಕಾರ್ಯಾಚರಣೆ ಆರಂಭವಾಯಿತು. ನಾನಾ ಊರುಗಳಿಂದ ಮೈಸೂರಿಗೆ ವಿವಿಧ ಕೆಲಸ ಕಾರ್ಯಕ್ಕೆ ಬರುವವರು ತೊಂದರೆ ಅನುಭವಿಸಿದರು. ಬೆಳಗ್ಗೆ ಖಾಸಗಿ ಬಸ್ ಸೇರಿದಂತೆ ಪರ್ಯಾಯ ಸಾರಿಗೆ ವ್ಯವಸ್ಥೆ ಅವಲಂಬಿಸಿದ್ದ ಇವರು ಸಂಜೆ ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸಂಚರಿಸುವಂತಾಯಿತು.

> ನೌಕರರು ಕರ್ತವ್ಯಕ್ಕೆ ಹಾಜರಾದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ವೇಳೆಗೆ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಎಂದಿನಂತೆ ಆರಂಭವಾಯಿತು. ಹೊರಗುತ್ತಿಗೆ ನೌಕರರು ಹಾಗೂ ತರಬೇತಿ ಪಡೆಯುವವರನ್ನು ಬಳಸಿಕೊಂಡು ಇಂದು ಬೆಳಿಗ್ಗೆಯಿಂದ ಸಂಜೆವರೆಗೆ 300 ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನೌಕರರು ಕರ್ತವ್ಯಕ್ಕೆ ಹಾಜರಾದ ಬಳಿಕ ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಗೆ ಹೋಗುವ ಬಸ್‌ಗಳು ಸಂಜೆ ನಂತರ ಎಂದಿನಂತೆ ಸಂಚರಿಸಿದವು.
>
> –ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ಗ್ರಾಮಾಂತರ, ಕೆಎಸ್‌ಆರ್‌ಟಿಸಿ.

ನಗರ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಾದ ನಾಗನಹಳ್ಳಿ ಗ್ರಾಮದ ಉಷಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬೆಳಗ್ಗೆ ಸಾರಿಗೆ ಸಂಸ್ಥೆ ಬಸ್‌ಗಳು ಇರಲಿಲ್ಲ. ನಾನು ಮೈಸೂರಿನ ರೈಲ್ವೆ ವರ್ಕ್‌ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದು, ಖಾಸಗಿ ಬಸ್‌ನಲ್ಲಿ ಇಂದು ಬೆಳಗ್ಗೆ ಮೈಸೂರಿಗೆ ಬರಬೇಕಾಯಿತು. ■ 10ನೇ ಪುಟಕ್ಕೆ

ಸಾರಿಗೆ ನೌಕರರ ಬೇಡಿಕೆ ಈಡೇರಿಸಿ: ಇಲ್ಲದಿದ್ರೆ ಕರ್ನಾಟಕ ಬಂದ್!

ರಾಮನಗರ: ಸಾರಿಗೆ ನೌಕರರ ಬೇಡಿಕೆ ಈಡೇರಿಸಿ ಅವರ ಸಮಸ್ಯೆ ಬಗೆಹರಿಸಿ, ಇಲ್ಲದಿದ್ರೆ ಕರ್ನಾಟಕ ಬಂದ್‌ಗೆ ಕರೆ ನೀಡುತ್ತೇವೆ ಎಂದು ಕ'ನ್'ನ'ಡ'ಪ'ರ' ಹೋರಾಟಗಾರ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.



ಸಾರಿಗೆ ನೌಕರರ ಮುಷ್ಕರ ವಿಚಾರವಾಗಿ ರಾಮನಗರದಲ್ಲಿ ಮಾತನಾಡಿದ ಅವರು, ಇದು ಸಾರಿಗೆ ನೌಕರರ ಬಹಳ ವರ್ಷದ ಬೇಡಿಕೆಯಾಗಿದೆ. ಅವರ ಬೇಡಿಕೆ ಸರಿಯಾಗಿದೆ. ಯಾವ ಸರ್ಕಾರವೂ ಅವರ ಸಮಸ್ಯೆ ಯನ್ನು ಆಲಿಸಿಲ್ಲ ಹೀಗಾಗಿ ಅವರ ಹಳೆಯ ಸಂಬಳವನ್ನ ಕೊಟ್ಟುಬಿಡಿ ಎಂದು ಕಿಡಿಕಾರಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲೂ ಕೃತಕ ಗರ್ಭಧಾರಣೆ ಸೌಲಭ್ಯ

▸ ಮೊದಲ ಹಂತದಲ್ಲಿ ಮೈಸೂರು ಸೇರಿ ಐದು ಕೇಂದ್ರಗಳಲ್ಲಿ ಆರಂಭ
▸ ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಮಾಹಿತಿ

ಬೆಂಗಳೂರು, ಆ. 5(ಕೆಎಂಶಿ)–ಮಕ್ಕಳಿಲ್ಲದ ದಂಪತಿಗೆ ಸಂತಾನಭಾಗ್ಯ ಕಲ್ಪಿಸುವ ಕೃತಕ ಗರ್ಭಧಾರಣೆ (ಐವಿಎಫ್) ಸೌಲಭ್ಯ ಇನ್ನು ಮುಂದೆ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲೂ ದೊರೆಯಲಿದೆ.

ಐವಿಎಫ್ ಚಿಕಿತ್ಸೆಯಡಿ ಖಾಸಗಿ ಆಸ್ಪತ್ರೆಗಳು ಉಳ್ಳವರಿಗೆ ಮಾತ್ರ ಸೇವೆ ನೀಡುತ್ತಿವೆ. ಈ ಸೌಲಭ್ಯ ಸಾಮಾನ್ಯ ಜನರಿಗೂ ದೊರೆಯಲಿ ಎಂಬ ಸದುದ್ದೇಶದಿಂದ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಆರಂಭಿಸಲು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಮುಂದಾಗಿದ್ದಾರೆ.

ಪ್ರಥಮವಾಗಿ ಬೆಂಗಳೂರಿನ ಬೌರಿಂಗ್, ಮೈಸೂರು, ಮಂಗಳೂರು, ಹುಬ್ಬಳ್ಳಿ, ಕಲಬುರಗಿ ಸೇರಿದಂತೆ ಐದು ಕೇಂದ್ರಗಳಲ್ಲಿ ಆರಂಭಗೊಳ್ಳಲಿದೆ.



ಖಾಸಗಿ ಆಸ್ಪತ್ರೆಗಳಲ್ಲಿ ಐವಿಎಫ್ ತಂತ್ರಜ್ಞಾನದಲ್ಲಿ ಮಕ್ಕಳನ್ನು ಪಡೆಯಲು ಮಧ್ಯಮ ವರ್ಗದ ಕುಟುಂಬಗಳಿಗೆ ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ಇಂತಹ ದಂಪತಿಗೆ ಸಂತಾನ ಭಾಗ್ಯಕ್ಕೆ ಈ ಯೋಜನೆ ಸಹಕಾರಿಯಾಗಲಿದೆ. ಐವಿಎಫ್ ತಂತ್ರಜ್ಞಾನದ ಮೂಲಕ ಮಕ್ಕಳನ್ನು ಪಡೆಯಲು ಮುಂದಾಗುವ ದಂಪತಿ ಇದಕ್ಕಾಗಿ ಲಕ್ಷಾಂತರ ರೂ.ಗಳನ್ನು ವೆಚ್ಚ ಮಾಡುತ್ತಿದ್ದು, ಬಡ, ಮಧ್ಯಮ ವರ್ಗದ ದಂಪತಿಗೆ ಈ ಪ್ರಮಾಣದ ಹಣ ■ 10ನೇ ಪುಟಕ್ಕೆ


ಉತ್ತರಕಾಶಿಯಲ್ಲಿ ಭೀಕರ ಮೇಘಸ್ಫೋಟ: ಜಲಪ್ರಳಯಕ್ಕೆ ಕೊಚ್ಚಿ ಹೋದ ಗ್ರಾಮ

60ಕ್ಕೂ ಅಧಿಕ ಗ್ರಾಮಸ್ಥರು, 8 ರಿಂದ 10 ಮಂದಿ ಯೋಧರೂ ನಾಪತ್ತೆ!

ಉತ್ತರಕಾಶಿ: ಉತ್ತರಾಖಂಡದ ಉತ್ತರಕಾಶಿಯಲ್ಲಿ ಭೀಕರ ಮೇಘಸ್ಫೋಟ ಸಂಭವಿಸಿದ್ದು, ಹಠಾತ್ ಪ್ರವಾಹಕ್ಕೆ ಧರಾಲಿ ಗ್ರಾಮಕ್ಕೆ ಗ್ರಾಮವೇ ಸರ್ವನಾಶವಾಗಿದೆ. 60ಕ್ಕೂ ಹೆಚ್ಚು ಮಂದಿ ಜಲಪ್ರಳಯದಲ್ಲಿ ಕೊಚ್ಚಿ ಹೋಗಿರುವ ಶಂಕೆ ವ್ಯಕ್ತವಾಗಿದೆ. ಸದ್ಯ ಐವರ ಸಾವು ಖಚಿತವಾಗಿದೆ. ಸ್ಥಳಕ್ಕೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ದೌಡಾಯಿಸಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಬೆಟ್ಟದ ಮೇಲಿನಿಂದ ಏಕಾಏಕಿ ನದಿಯಂತೆ ನೀರು ಕಲ್ಲು–ಬಂಡೆಗಳು ಸಾಗಿ ಬಂದು ಇಡೀ ಗ್ರಾಮವನ್ನೇ ಕೊಚ್ಚಿಕೊಂಡು ಹೋಗಿದೆ. ಪ್ರವಾಹದಲ್ಲಿ ಅನೇಕ ಮನೆಗಳು ಸರ್ವನಾಶವಾಗಿದ್ದು, ವಾಹನಗಳು ಹಾಗೂ ಅಂಗಡಿಗಳು ಸಹ ಧ್ವಂಸವಾಗಿವೆ. ಈ ಭೀಕರ ಪ್ರವಾಹದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಎದೆ ಝಲ್ ಎನ್ನಿಸುವಂತಿದೆ. ಏಕಾಏಕಿ ಜಲಪ್ರಳಯ ಉಂಟಾದ ಪರಿಣಾಮ ಜನರು ಕಿರುಚಾಡುತ್ತಿರುವುದು ವೀಡಿಯೋದಲ್ಲಿ ಸೆರೆಯಾಗಿದೆ. ಜನರು ಪ್ರಾಣ ಉಳಿಸಿಕೊಳ್ಳಲು ಓಡುತ್ತಿರುವ ದೃಶ್ಯಗಳು ಮನಕಲಕುವಂತಿದೆ. ಇದರ ಬೆನ್ನಲ್ಲೇ ಸುಖಿ ಟಾಪ್‌ನಲ್ಲಿ ಕೂಡ ಭಾರಿ ಪ್ರವಾಹ ಉಂಟಾಗಿದೆ.

ಸದ್ಯ ಉತ್ತರಾಖಂಡ ಸಿಎಂ ಪುಷ್ಕರ್ ಸಿಂಗ್ ಧಾಮಿ ದುರಂತದ ಬಗ್ಗೆ ಮಾಹಿತಿ ಪಡೆದಿದ್ದಾರೆ. ಮೇಘಸ್ಫೋಟದಲ್ಲಿ ದೊಡ್ಡ ಮಟ್ಟದ ■ 10ನೇ ಪುಟಕ್ಕೆ



ಉತ್ತರ ಕಾಶಿಯಲ್ಲಿ ಮೇಘಸ್ಫೋಟದಿಂದ ಜಲಪ್ರಳಯಕ್ಕೆ ಗ್ರಾಮ ಕೊಚ್ಚಿಹೋಗುತ್ತಿರುವುದು.

ಅರಣ್ಯ ಭವನದಲ್ಲಿ ದಸರಾ ಗಜಪಡೆ ಬೀಡು

ಆನೆಗಳ ಕಣ್ತುಂಬಿಕೊಳ್ಳುತ್ತಿರುವ ಮೈಸೂರು ಜನ

ಮಕ್ಕಳಿಗೆ ಆನೆ ತೋರಿಸಿ ಸಂಭ್ರಮಿಸುವ ಪೋಷಕರು; ಆನೆಗಳ ಆತ್ಮೀಯತೆಗೆ ಮಾರುಹೋದ ವನ್ಯಜೀವಿ ಪ್ರೇಮಿಗಳು

ಮೈಸೂರು, ಆ.5(ಎಂಟಿವೈ)– ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 9 ಆನೆಗಳು ಮಂಗಳವಾರ ದಿನವಿಡೀ ವಿಶ್ರಾಂತಿ ಪಡೆದರೆ, ಏಕಲವ್ಯ–ಭೀಮ, ಮಹೇಂದ್ರ ಮತ್ತು ಲಕ್ಷ್ಮೀ ಜೋಡಿ ವಿಚಾರ–ವಿನಿಮಯದಲ್ಲಿ ತೊಡಗಿ! ಆನೆ ನೋಡಲು ಬಂದ ಸಾರ್ವಜನಿಕರಲ್ಲಿ ಮತ್ತಷ್ಟು ಅಚ್ಚರಿ ಮೂಡಿಸಿದವು.

ಗಜಪಯಣದ ಮೂಲಕ ಮೈಸೂರಿನ ಅರಣ್ಯ ಭವನದ ಆವರಣದಲ್ಲಿ ತಂಗಿರುವ ವಿವಿಧ ಕ್ಯಾಂಪ್‌ಗಳ ದಸರಾ ಗಜಪಡೆ, ಒಂದೇ ದಿನದಲ್ಲಿ ನಗರ ವಾತಾವರಣಕ್ಕೆ ಹೊಂದಿಕೊಂಡಿದ್ದು, ದಸರಾ ಮಹೋತ್ಸವದ ಗುಂಗಿನಲ್ಲಿವೆ ಎಂಬಂತೆ ಕಂಡು ಬರುತ್ತಿವೆ. ಬಹುತೇಕ ಆನೆಗಳು ಜಂಬೂಸವಾರಿ ಮೆರವಣಿಗೆಗೆ ಸಜ್ಜಾಗಿರುವಂತೆ ಅವುಗಳ ಹಾವ–ಭಾವವಿದೆ. ಇದು ಅರಣ್ಯ ಇಲಾಖೆಯ ಅಧಿಕಾರಿಗಳಲ್ಲಿ ಸಮಾಧಾನ ತಂದಿದೆ.



ಮೈಸೂರಿನ ಅರಣ್ಯ ಭವನದ ಆವರಣದಲ್ಲಿ ಬೀಡು ಬಿಟ್ಟಿರುವ ಗಜಪಡೆಯ ಏಕಲವ್ಯ, ಭೀಮನ ಐಲಾಟ.

ಗಜಪಡೆ ಕಣ್ತುಂಬಿಕೊಳ್ಳಲು ಬೆಳಗ್ಗೆಯಿಂದ ಸಂಜೆವರೆಗೂ ಸುತ್ತಮುತ್ತ ಬಡಾವಣೆಗಳ ನಿವಾಸಿಗಳು ಸೇರಿದಂತೆ ಜನ ತಂಡೋಪತಂಡವಾಗಿ ಅರಣ್ಯ ಭವನಕ್ಕೆ ಆಗಮಿಸಿ, ದೂರದಿಂದಲೇ ಗಜಪಡೆಯನ್ನು ಕಣ್ತುಂಬಿಕೊಂಡು ಸಂಭ್ರಮಿಸುತ್ತಿದ್ದಾರೆ. ಬೆಳಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರಿಂದ ಕೆಲಕಾಲ ಗೇಟ್ ಹಾಕಿ ಯಾರನ್ನು ಒಳಗೆ ಬರದಂತೆ ನಿರ್ಬಂಧ ವಿಧಿಸಲಾಗಿತ್ತು. ಕೆಲ ಹೊತ್ತಿನ ಬಳಿಕ ಆನೆ ನೋಡಲು ಜನರನ್ನು ಬಿಡಲಾಯಿತು. ಆದರೆ, ಆನೆ ಕಟ್ಟಿ ಹಾಕಿರುವ ಸ್ಥಳದತ್ತ ಹೋಗದಂತೆ ಎಚ್ಚರಿಕಾ ಪಟ್ಟಿ ಕಟ್ಟಿ, ಕಟ್ಟೆಚ್ಚರ ವಹಿಸಲಾಗಿತ್ತು. ಮಕ್ಕಳೊಂದಿಗೆ ಬಂದ ಪೋಷಕರು ಆನೆಗಳನ್ನು ದೂರದಿಂದಲೇ ತೋರಿಸಿಕೊಂಡು ಸಂಭ್ರಮಿಸಿ ವಾಪಸ್ಸಾಗುತ್ತಿದ್ದರು.

ಆನೆಗಳು ಸಹಜವಾಗಿವೆ: ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಪತ್ರಕರ್ತರೊಂದಿಗೆ ಮಾತನಾಡಿ, ಗಜಪಯಣದ ಮೂಲಕ ಮೈಸೂರಿಗೆ ಬಂದಿರುವ ಗಜಪಡೆ ಅರಣ್ಯ ಭವನದ ಆವರಣದಲ್ಲಿ ವಿಶ್ರಾಂತಿ ಪಡೆಯುತ್ತಿವೆ. ಎಲ್ಲಾ ಆನೆಗಳು ಸಹಜವಾಗಿವೆ. ವಿವಿಧ ಕ್ಯಾಂಪ್‌ಗಳಿಂದ ಆಗಮಿಸಿರುವ ಆನೆಗಳು, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಅಣಿಗೊಂಡಿವೆ. ಗಜಪಯಣದ ಕಾರ್ಯಕ್ರಮದಲ್ಲಿ 6–7 ಸಾವಿರ ಜನರ ■ 10ನೇ ಪುಟಕ್ಕೆ



ಅರಣ್ಯ ಭವನದ ಆವರಣದಲ್ಲಿ ಪ್ರತ್ಯೇಕವಾಗಿ, ಸುರಕ್ಷಿತ ಸ್ಥಳದಲ್ಲಿ ಬೀಡು ಬಿಟ್ಟಿರುವ ಕ್ಯಾಪ್ಟನ್ ಅಭಿಮನ್ಯು.

ಸಲಗಗಳ ಸಲುಗೆ

> ರಿಲ್ಯಾಕ್ಸ್ ಮೂಡ್‌ನಲ್ಲಿರುವ ಗಜಪಡೆಯ ಸದಸ್ಯರಾದ ಏಕಲವ್ಯ ಹಾಗೂ ಭೀಮ ಇಂದು ಅತ್ಯಂತ ಸಲುಗೆಯಿಂದ ಒಂದೆಡೆ ಪರಸ್ಪರ ತಲೆ ಮೇಲೆ ಸೊಂಡಿಲು ಹಾಕಿಕೊಂಡು, ಮಾನವರು ಹೆಗಲಿಗೆ ಹೆಗಲು ಕೊಟ್ಟಂತೆ ನಿಂತ ಭಂಗಿ ಆಕರ್ಷಕವಾಗಿತ್ತು. ಇದೊಂದು ರೀತಿ ಮಿತ್ರ ಸಂಭಾಷಣೆಯಂತಿತ್ತು. ಇವರ ಸ್ನೇಹಸಂಗಮ ಕಂಡು ಜನ ಸಂಭ್ರಮಿಸಿದರು. ಮತ್ತೊಂದು ಬದಿಯಲ್ಲಿ ಮಹೇಂದ್ರನೊಂದಿಗೆ ಬಳ್ಳೆ ಲಕ್ಷ್ಮಿ ಸಲ್ಲಾಪವೂ ಎಲ್ಲರ ಗಮನ ಸೆಳೆಯಿತು.

ಕಲ್ಯಾಣ ಕ್ರಾಂತಿಯ ಕುರಿತು ಯುವ ಸಮೂಹ ಎಂದೆಂದೂ ಮರೆಯುವಂತಿಲ್ಲ

ಹಿರಿಯ ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ ಅಭಿಮತ



ಬಸವ, ರೇಣುಕಾ, ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಸೋಸಲೆ ಸಿದ್ದರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ಆ.5(ಎಸ್‌ಪಿಎನ್)– ಹನ್ನೆರಡನೇ ಶತಮಾನದ ಕಲ್ಯಾಣ ಕ್ರಾಂತಿಯನ್ನು ಎಂದೆಂದಿಗೂ ಯುವ ಸಮೂಹ ಮರೆಯುವಂತಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಮೈಸೂರು ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜು ಸಭಾಂಗಣದಲ್ಲಿ ನೀಲಗಂಗಾ ಮಹಿಳಾ ಬಳಗದ ವತಿಯಿಂದ ಏರ್ಪಡಿಸಿದ್ದ ಬಸವ, ರೇಣುಕಾ, ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಜಯಂತಿಗಳ ತವರೂರು. ಭಾರತದಲ್ಲಿ ಮಹಾಪುರುಷರ ಹೆಸರಿನಲ್ಲಿ ಆಚರಿಸುವ ಜಯಂತಿಗಳ ಮಹತ್ವ ತಿಳಿಯಬೇಕಾದರೆ, ಅವರ ಜೀವನದಲ್ಲಿ ಪಾಲಿಸಿದ ತತ್ವಾದರ್ಶಗಳನ್ನು ತಿಳಿದುಕೊಳ್ಳಬೇಕು. ಆಗ ಮಾತ್ರ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳು ನೆಲೆಗೊಳ್ಳುತ್ತವೆ. ಅದರಲ್ಲೂ 12ನೇ ಶತಮಾನದ ಶರಣರ ಜೀವನದ ಅನುಭವವನ್ನು ಅಳವಡಿಸಿಕೊಂಡರೆ ಇನ್ನು ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ತಿ.ನರಸೀಪುರ ತಾಲೂಕಿನ ಸೋಸಲೆ ಸಿದ್ದರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನೀಲಗಂಗಾ ಮಹಿಳಾ ಸಮಾಜದ ಅಧ್ಯಕ್ಷೆ ಗೀತಾ ರಾಜಶೇಖರ್, ಕಾರ್ಯದರ್ಶಿ ರಾಜೇಶ್ವರಿ ಮಹೇಶ್, ಪ್ರಸಾದ್ ಸೌಜನ್ಯ, ಸ್ಪಂದನಾ ಮಹಿಳಾ ಸಮಾಜದ ಅಧ್ಯಕ್ಷ ಗೀತಾ ಈಶ್ವರ್, ಮಂಗಳಾ ಮುದ್ದುಮಾದಪ್ಪ ಇದ್ದರು.

ಕಸದ ರಾಶಿಗೆ ಎಲೆಕೋಸು ಸುರಿದ ಹಾಸನ ರೈತನಿಗೆ ಮಧ್ಯವರ್ತಿಯಿಂದ 30 ಸಾವಿರ ಪರಿಹಾರ!

ಮೈಸೂರು ಎಪಿಎಂಸಿ ಆಡಳಿತ ಮಂಡಳಿಯಿಂದ ತ್ವರಿತ ಕ್ರಮ

ಮೈಸೂರು,ಆ.5(ಎಂಕೆ)–ಮಧ್ಯವರ್ತಿ ನಂಬಿ ಮಾರಾಟವಾಗದ 14 ಟನ್ ಎಲೆಕೋಸನ್ನು ರಸ್ತೆ ಬದಿಯಲ್ಲಿ ಸುರಿದ ಹಾಸನದ ನಾಗನಹಳ್ಳಿ ರೈತ ರಂಗನಾಥ್ ಅವರಿಗೆ ನಷ್ಟ ಪರಿಹಾರ ಕೊಡಿಸುವ ಮೂಲಕ ಎಂಪಿಎಂಸಿ ನೆರವಾಗಿದೆ.

ಮೈಸೂರಿನ ಬಂಡಿಪಾಳ್ಯ ಎಪಿಎಂಸಿ ಸಗಟು ಮಾರುಕಟ್ಟೆಯ ಮಧ್ಯವರ್ತಿ ಚಂದ್ರಪ್ಪ ಮಾತು ನಂಬಿ, ಲಾರಿ ತುಂಬಾ ಎಲೆಕೋಸು ತಂದಿದ್ದ ರಂಗನಾಥ್, ಕಡೆಗೆ 2 ದಿನ ಕಾದು ಕಡೆಗೆ ರಸ್ತೆ ಬದಿಯಲ್ಲಿ ಕೋಸು ಸುರಿದಿದ್ದರು. ಈ ಕುರಿತು ಆ.2ರ 'ಮೈಸೂರು ಮಿತ್ರ'ನಲ್ಲಿ 'ಕೈಕೊಟ್ಟ ಮಧ್ಯವರ್ತಿ; ಕಸದ ರಾಶಿ ಸೇರಿದ 14 ಟನ್ ಎಲೆಕೋಸು' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಕೂಡಲೇ ಎಚ್ಚೆತ್ತ ಎಂಪಿಎಂಸಿ ಆಡಳಿತ, ಮಧ್ಯವರ್ತಿಗೆ ನೋಟಿಸ್ ನೀಡಿ, ರೈತ ರಂಗನಾಥ್‌ಗೆ ಮಧ್ಯವರ್ತಿ ಚಂದ್ರಪ್ಪನಿಂದ 30 ಸಾವಿರ ರೂ. ಪರಿಹಾರ ಹಣ ಕೊಡಿಸುವ ಮೂಲಕ ರೈತನಿಗಾದ ನಷ್ಟಕ್ಕೆ ನೆರವಾಗಿದೆ.



ಪತ್ರಿಕೆಯಲ್ಲಿ ವರದಿ ಪ್ರಕಟವಾದ ಕೂಡಲೇ ಮಧ್ಯವರ್ತಿಗೆ ನೋಟಿಸ್ ನೀಡಿದ್ದು, ಮುಂದೆಂದೂ ಈ ರೀತಿಯ ಘಟನೆ ಮರುಕಳಿಸದಂತೆ ನೋಡಿಕೊಳ್ಳುವಂತೆ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ ಮಧ್ಯವರ್ತಿ ಚಂದ್ರಪ್ಪ ಹಾಗೂ ರೈತ ರಂಗನಾಥ್ ಅವರ ಸಮಕ್ಷಮದಲ್ಲಿ ಇಬ್ಬರ ಒಪ್ಪಿಗೆಯ ಮೇರೆಗೆ ಪರಿಹಾರ ಹಣ ಕೊಡಿಸಲಾಗಿದೆ ಎಂದು ಎಪಿಎಂಸಿ ಸೂಪರ್‌ವೈಸರ್ ನಾಗರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮನವಿ: ಭಾರತೀಯ ಕಿಸಾನ್ ಸಂಘದ ವತಿಯಿಂದ ನಷ್ಟಕ್ಕೊಳಗಾದ ರೈತ ರಂಗನಾಥ್‌ಗೆ ಪರಿಹಾರ ನೀಡಬೇಕು ಹಾಗೂ ಮಧ್ಯವರ್ತಿ ಚಂದ್ರಪ್ಪ ಅವರ ಲೈಸೆನ್ಸ್ ರದ್ದು ಮಾಡಬೇಕು ಎಂದು ಎಪಿಎಂಸಿ ಸಹ ಕಾರ್ಯದರ್ಶಿ ರೂಪ ಅವರಿಗೆ ಮನವಿ ಸಲ್ಲಿಸಲಾಗಿತ್ತು.

ಉಚಿತ ತರಬೇತಿ ಕಾರ್ಯಾಗಾರ

ಮೈಸೂರು, ಆ. 5– ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಆಸಕ್ತರಿಗೆ ನಾಟಕ ಆಧಾರಿತ ರಂಗಭೂಮಿ, ಜನಪದ ನೃತ್ಯ ಮತ್ತು ಸಂಗೀತ ಪ್ರಕಾರಗಳ ಉಚಿತ ತರಬೇತಿ ಶಿಬಿರವನ್ನು ಆ.7ರಿಂದ ಹಮ್ಮಿಕೊಳ್ಳಲಾಗಿದೆ. ಕಾರ್ಯಾಗಾರವು ಬಿ.ವಿ. ಕಾರಂತ ರಂಗ ಚಾವಡಿ, ಮೈಸೂರು ರಂಗಾಯಣ ವೇದಿಕೆಯಲ್ಲಿ ಸಂಜೆ 4 ಗಂಟೆಗೆ ಉದ್ಘಾಟನೆಯಾಗಲಿದ್ದು, ಆಸಕ್ತ ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ. ಶಿಬಿರವು ಪ್ರತಿದಿನ ಸಂಜೆ 4 ರಿಂದ 6 ರವರೆಗೆ ಮೈಸೂರಿನ ಕಲಾಮಂದಿರದ ಆವರಣದಲ್ಲಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 96320 73716, 76187 39343 ಸಂಪರ್ಕಿಸಬಹುದು.

ಆಲಮಟ್ಟಿ ಅಣೆಕಟ್ಟಿನ ಎತ್ತರ ಹೆಚ್ಚಿಸದಂತೆ ಕರ್ನಾಟಕವನ್ನು ತಡೆಯಿರಿ

ಕೇಂದ್ರಕ್ಕೆ ಮಹಾರಾಷ್ಟ್ರ ಒತ್ತಾಯ

ನವದೆಹಲಿ: ಕೃಷ್ಣಾ ನದಿಗೆ ನಿರ್ಮಿಸಿರುವ ಆಲಮಟ್ಟಿ ಅಣೆಕಟ್ಟು ಎತ್ತರವನ್ನು ಹೆಚ್ಚಿಸುವ ಕರ್ನಾಟಕದ ನಿರ್ಧಾರವನ್ನು ತಡೆಯಬೇಕು ಎಂದು ಕೋರಿ ಮಹಾರಾಷ್ಟ್ರ ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ನವದೆಹಲಿಯ ಜಲಶಕ್ತಿ ಸಚಿವಾಲಯದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಅವರನ್ನು ನಿಯೋಗದೊಂದಿಗೆ ಭೇಟಿಯಾಗಿ ಮನವಿ ಸಲ್ಲಿಸಿದ ಮಹಾರಾಷ್ಟ್ರ ಜಲಸಂಪನ್ಮೂಲ ಸಚಿವ ರಾಧಾಕೃಷ್ಣ ವಿಖೆ–ಪಾಟೀಲ್ ಆಲಮಟ್ಟಿ ಅಣೆಕಟ್ಟೆಯ ಎತ್ತರ ಹೆಚ್ಚಳವಾದರೆ ಹಿನ್ನೀರಿನಿಂದ ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ಸರ್ಕಾರವು ಅಣೆಕಟ್ಟಿನ ಎತ್ತರವನ್ನು 519.60 ಮೀಟರ್‌ನಿಂದ 524.256 ಮೀಟರ್‌ಗೆ ಏರಿಸಲು ಪ್ರಸ್ತಾಪಿಸಿದೆ. ಇದರಿಂದ ಕೃಷ್ಣಾ ಜಲಾನಯನದ ಪ್ರದೇಶದಲ್ಲಿರುವ ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಯಲ್ಲಿ ಪ್ರವಾಹ ಉಂಟಾಗಲಿದ್ದು, ಗಂಭೀರ ಪರಿಣಾಮ ಎದುರಾಗಲಿದೆ. ಪರಿಸರ ಹಾಗೂ ಮನುಷ್ಯರ ಮೇಲಾಗುವ ಹಾನಿಯನ್ನು ಪರಿಗಣಿಸಿ, ನಮ್ಮ ರಾಜ್ಯವು ನಿರಂತರವಾಗಿ ಆಕ್ಷೇಪಣೆ ವ್ಯಕ್ತಪಡಿಸಿದೆ. ಇದಕ್ಕೆ ಸಂಬಂಧಿಸಿ, ಅಂಕಿಅಂಶಗಳನ್ನು ನಿಮ್ಮ ಮುಂದಿಡುತ್ತಿದ್ದೇವೆ. ಹೀಗಾಗಿ, ಕೇಂದ್ರ ಸರ್ಕಾರವು ಮಧ್ಯಪ್ರವೇಶಿಸಿ, ಅಣೆಕಟ್ಟೆ ಹೆಚ್ಚಳ ಪ್ರಸ್ತಾಪವನ್ನು ರದ್ದುಮಾಡಬೇಕು ಎಂದು ಒತ್ತಾಯಿಸಿದ್ದಾರೆ. 2019 ಮತ್ತು 2021 ರಲ್ಲಿ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆ ಹಾಗೂ ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಿಂದಾಗಿ ತೀವ್ರ ಪ್ರವಾಹ ಸಂಭವಿಸಿದೆ ಎಂದು ಹೇಳಿದರು.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಈಗಾಗಲೇ ಕೇಂದ್ರಕ್ಕೆ ಪತ್ರ ಬರೆದು ಅಣೆಕಟ್ಟಿನ ಎತ್ತರ ಹೆಚ್ಚಳಕ್ಕೆ ಸಂಬಂಧಿಸಿದಂತೆ ಪ್ರಬಲವಾದ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ವಿಖೆ–ಪಾಟೀಲ್ ಹೇಳಿದರು.

ರಾಜ್ಯವನ್ನು ಮಾದಕ ವಸ್ತು ಮುಕ್ತ ಮಾಡಲು ಮೈಸೂರು ಚಲೋ

ಮೈಸೂರು, ಆ.5(ಜಿಎ)–ಕರ್ನಾಟಕ ದಕ್ಷಿಣ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಮೈಸೂರು ಮತ್ತು ರಾಜ್ಯವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡುವ ಉದ್ದೇಶದಿಂದ ಆ.12ರಂದು ಮೈಸೂರು ಚಲೋ, ಜಾಗೃತಿ ರ್‍ಯಾಲಿ, ಸಾರ್ವಜನಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಎಚ್.ಕೆ.ಪ್ರವೀಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ರ್‍ಯಾಲಿ ವಸ್ತುಪ್ರದರ್ಶನ ಮೈದಾನದ ಪಾರ್ಕಿಂಗ್ ಸ್ಥಳದಿಂದ ಹೊರಟು, ಹಾರ್ಡಿಂಜ್ ವೃತ್ತ ಮಾರ್ಗವಾಗಿ, ಕೋಟೆ ಆಂಜನೇಯ ಸ್ವಾಮಿ ರಸ್ತೆಯಲ್ಲಿ ಸಾಗಿ, ಗಾಂಧಿ ವೃತ್ತ ತಲುಪಿ, ಅಲ್ಲಿಯೇ ಸಾರ್ವಜನಿಕ ಸಭೆ ನಡೆಸಲಾಗುವುದು ಎಂದರು.

ಮೈಸೂರು ಇತ್ತೀಚೆಗೆ ಮಾದಕ ವ್ಯಸನ ಮತ್ತು ಡ್ರಗ್ಸ್ ಜಾಲದ ಕೇಂದ್ರ ವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿಯಾಗಿದೆ. ಮಹಾರಾಷ್ಟ್ರ ಪೊಲೀಸರು ಮೈಸೂರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ತಯಾರಿಕಾ ಘಟಕವನ್ನು ಪತ್ತೆ ಹಚ್ಚಿದ್ದಾರೆ. ಇದರಿಂದ ನಮ್ಮ ಪೊಲೀಸ್ ಇಲಾಖೆ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ನಾನಾ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ತಯಾರಿಕ ಘಟಕ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಬೇಕು. ಎನ್‌ಡಿಪಿಎಸ್ ಮತ್ತು ಕೋಟ್ಪಾ ಕಾಯ್ದೆಗಳನ್ನು ಬಲಪಡಿಸುವಲ್ಲಿ ಪ್ರಮುಖ ತಿದ್ದುಪಡಿಗಳನ್ನು ಮಾಡಬೇಕು ಹಾಗೂ ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಎಂದು ಹೇಳಿದರು.

ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರಗಳನ್ನು ಹೆಚ್ಚಿಸಬೇಕು ಮತ್ತು ಯುವಕರಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆಯು ಶಾಲಾ–ಕಾಲೇಜು ಹಾಗೂ ವಿದ್ಯಾರ್ಥಿ ಸಂಘಟನೆಗಳ ನೆರವಿನಿಂದ ನಿರಂತರ ಅಭಿಯಾನಗಳನ್ನು ನಡೆಸಬೇಕು. ಸಿವಿಲ್ ಠಾಣೆಗಳಲ್ಲಿ ದಾಖಲಾಗುವ ಡ್ರಗ್ಸ್ ಪ್ರಕರಣಗಳ ಮೇಲ್ವಿಚಾರಣೆಗೆ ಸರಕಾರ ರಚಿಸಿರುವ ಎಎನ್‌ಟಿಎಫ್ ತಂಡವು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಂಪೂರ್ಣ ಸ್ವತಂತ್ರವನ್ನು ನೀಡಬೇಕು ಹಾಗೂ ಟಾಸ್ಕ್ ಫೋರ್ಸ್ ರಚನೆಯ ಉದ್ದೇಶದ ಸರಳತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ವಸಂತ, ಸಂಜಿತ್, ಪ್ರಜ್ವಲ್ ಉಪಸ್ಥಿತರಿದ್ದರು.

ಕಿವಿ ಕೇಳದ, ಮಾತು ಬಾರದ ಸಂದೇಶ್‌ಗೆ ಆಯಿಷ್‌ನಿಂದ ಪುನರ್ ಜೀವನ!



ಸಂದೇಶ್

ಮೈಸೂರು,ಆ.5(ಎಂಕೆ)–ಕಿವಿ ಕೇಳದ... ಮಾತುಬಾರದ... ಶನಿವಾರ ಸಂತೆಯ ಎಸ್.ಸಿ. ಸಂದೇಶ್ ಈಗ ಕೇಂದ್ರ ಸರ್ಕಾರಿ ನೌಕರ...!

ಅರೆರೆ.. ಇದೇನಿದು ಸಾಧ್ಯನಾ...! ಎಂಬ ಪ್ರಶ್ನೆಗೆ ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯಲ್ಲಿ ಜೂನಿಯರ್ ಡಾಕ್ಯುಮೆಂಟ್ ಅಸಿಸ್ಟೆಂಟ್ ಆಗಿ ಕೆಲಸ ಮಾಡುತ್ತಿರುವ ಸಂದೇಶ್ ದಿಟ್ಟ ಸಾಕ್ಷಿ!

ಮೂಲತಃ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲೂಕಿನ ಶನಿವಾರಸಂತೆಯ ಸಂದೇಶ್‌ಗೆ ಬಾಲ್ಯದಲ್ಲಿ (ಒಂದೂವರೆ ವರ್ಷದ ಮಗು ಆಗಿದ್ದಾಗ) ಕಿವಿ ಕೇಳಿಸದೆ ಇದ್ದಿದ್ದರಿಂದ ಮಾತು ಕೂಡ ಬರುತ್ತಿರಲಿಲ್ಲ. ಇದನ್ನು ಗಮನಿಸಿ ಅವರ ತಾಯಿ ತ್ರಿವೇಣಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ದೊರೆಯುವ ಚಿಕಿತ್ಸೆ ಕುರಿತು ಆಕಾಶವಾಣಿಯಲ್ಲಿ ಪ್ರಕಟವಾದ ಮಾಹಿತಿಯನ್ನು ಆಲಿಸಿ, ಅಂದೇ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದ್ದಾರೆ.

ಆಯಿಷ್‌ಗೆ ಕರೆದುಕೊಂಡು ಬಂದು ಕಿವಿ ಪರೀಕ್ಷಿಸಿದಾಗ ಬಲಗಡೆ ಕಿವಿ ಕೇಳುತ್ತಿರಲಿಲ್ಲ. ಎಡಗಡೆ ಕಿವಿಗೆ ಮಿಷನ್ ಹಾಕಿದಾಗ ಶೇ.70ರಷ್ಟು ಕೇಳಿಸಿತು. ಅಂದಿನಿಂದ ಸತತ 3 ವರ್ಷ ಸ್ಪೀಚ್ ಥೆರಪಿ ಚಿಕಿತ್ಸೆ ಪಡೆದು ಆನಂತರ ಮೈಸೂರಲ್ಲೇ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಮುಗಿಸಿ, ಕಂಪ್ಯೂಟರ್ ಸೈನ್ಸ್‌ನಲ್ಲಿ ಡಿಪ್ಲೊಮಾ ಮಾಡಿದ ಸಂದೇಶ್ ಪ್ರಸ್ತುತ ಕೇಂದ್ರ ಸರ್ಕಾರ ನೌಕರರಾಗಿ ಚಿಕಿತ್ಸೆ ಪಡೆದ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ನನಗೆ ಒಂದೂವರೆ ವರ್ಷವಿದ್ದಾಗಲೇ ನಮ್ಮಮ್ಮ ಇಲ್ಲಿಗೆ (ಆಯಿಷ್) ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿದರು. ಇವಾಗ ನೂರು ಅಥವಾ ಇನ್ನೂರು ಇದೆ. ಆದರೆ, ಆವಾಗೆಲ್ಲಾ ಸಂಪೂರ್ಣ ಉಚಿತ ಇತ್ತು. 3 ವರ್ಷ ತುಂಬಾ ಹೇಳಿಕೊಟ್ಟು ಕಂಠಪಾಠ ಮಾಡಿಸುತ್ತಿದ್ದರು. ಎಲ್ಲಾ ರೀತಿಯಲ್ಲೂ ಚಿಕಿತ್ಸೆ ನೀಡಿದ್ದರಿಂದ ಇವತ್ತು ನನ್ನ ಜೀವನ ಚೆನ್ನಾಗಿದೆ. ಮದುವೆಯೂ ಆಗಿದ್ದೇನೆ. 3 ವರ್ಷದ ಮಗಳಿದ್ದು, ನಾನು ಚಿಕಿತ್ಸೆ ಪಡೆದ ಸಂಸ್ಥೆಯಲ್ಲೇ ಕೆಲಸ ಮಾಡುತ್ತಿರುವುದಕ್ಕೆ ಖುಷಿಯಾಗುತ್ತಿದೆ ಎಂದು 'ಮೈಸೂರು ಮಿತ್ರ'ನಲ್ಲಿ ತಮ್ಮಲ್ಲಿದ್ದ ದೈಹಿಕ ದೌರ್ಬಲ್ಯವನ್ನು ಗೆದ್ದು, ಕಲಿತು ಕೆಲಸ ಗಿಟ್ಟಿಸಿಕೊಂಡ ಅನುಭವ ಹಂಚಿಕೊಂಡರು.

ನಿರ್ಲಕ್ಷ್ಯತೆ ವಹಿಸಬಾರದು: ಮೈಸೂರಿನಲ್ಲಿರುವ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಕಿವಿ ಕೇಳಿಸದ, ಮಾತು ಬಾರದ ಮಕ್ಕಳಿಗೆ ಗುಣಮಟ್ಟದ ಚಿಕಿತ್ಸೆ ಜೊತೆಗೆ ವಿಶೇಷ ಕಲಿಕೆಗೆ ಆದ್ಯತೆ ನೀಡಲಾಗುತ್ತಿದೆ. ಪೋಷಕರು ತಮ್ಮ ಮಕ್ಕಳಲ್ಲಿ ಏನಾದರೂ ಕಿವಿ ಕೇಳಿಸದ, ಮಾತುಬಾರದ, ಸಾಮಾನ್ಯ ಮಕ್ಕಳಿಗಿಂತ ವಿಭಿನ್ನ ವರ್ತನೆ ಕಂಡುಬಂದಲ್ಲಿ ಕರೆದುಕೊಂಡು ಬಂದು ಚಿಕಿತ್ಸೆ ಪಡೆಯಬಹುದು. ಕಡಿಮೆ ಖರ್ಚಿನಲ್ಲಿ, ಕೇಂದ್ರ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬಹುದು ಎಂದು ಆಯಿಷ್ ನಿರ್ದೇಶಕಿ ಡಾ.ಪುಷ್ಪಾವತಿ ತಿಳಿಸಿದರು.

ಮೈಸೂರಿಗೆ 'ಮಹಾರಾಜ ಟ್ರೋಫಿ' ಕ್ರಿಕೆಟ್ ಪಂದ್ಯಾವಳಿ ಸ್ಥಳಾಂತರ?

ಮೈಸೂರು, ಆ.5– ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ)ಯ 'ಮಹಾರಾಜ ಟ್ರೋಫಿ' ಕ್ರಿಕೆಟ್ ಟಿ–20 ಪಂದ್ಯಾವಳಿ ಮೈಸೂರಿಗೆ ಸ್ಥಳಾಂತರವಾಗುವ ಸಾಧ್ಯತೆ ಹೆಚ್ಚಾಗಿದೆ. ಪಂದ್ಯಾವಳಿ ಆ.11ರಂದು ಆರಂಭವಾಗಬೇಕಿದ್ದು, ಆದರೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಪೊಲೀಸ್ ಇಲಾಖೆಯಿಂದ ಇನ್ನೂ ಅನುಮತಿ ದೊರೆತಿಲ್ಲ.

ಕಳೆದ ಜೂನ್‌ನಲ್ಲಿ ಐಪಿಎಲ್ ವಿಜೇತ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡದ ವಿಜಯೋತ್ಸವ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿ 11 ಮಂದಿ ಬಲಿಯಾದರು. ಈ ದುರಂತದ ನಂತರ ಕಟ್ಟುನಿಟ್ಟಿನ ಕ್ರಮ ವಹಿಸಿರುವ ಪೊಲೀಸರು, ಮಹಾರಾಜ ಟ್ರೋಫಿ ಸಂಬಂಧಿತ ಮನವಿಯನ್ನು ಇನ್ನೂ ಪರಿಗಣಿಸಿಲ್ಲ. ಇದರಿಂದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಮೈಸೂರಿಗೆ ಸ್ಥಳಾಂತರಿಸುವ ಸಾಧ್ಯತೆ ದಟ್ಟವಾಗಿದೆ. ಪಂದ್ಯಗಳಿಗೆ ಜನರ ಪ್ರವೇಶ ನಿರ್ಬಂಧಿಸುವ ನಿರ್ಧಾರವನ್ನು ಈಗಾಗಲೇ ಪ್ರಕಟಿಸಲಾಗಿದೆ. ಒಂದೆರಡು ದಿನಗಳಲ್ಲಿ ಸ್ಪಷ್ಟ ನಿರ್ಧಾರ ಪ್ರಕಟವಾಗಲಿದೆ.

ಕುಮಾರಸ್ವಾಮಿ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಆರೋಪ: ಆ.28ಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಕೇಂದ್ರ ಸಚಿವ ಹೆಚ್‌ಡಿ ಕುಮಾರಸ್ವಾಮಿ ವಿರುದ್ಧ ಸರ್ಕಾರಿ ಜಮೀನು ಒತ್ತುವರಿ ಆರೋಪ ಪ್ರಕರಣ ಸಂಬಂಧ ರಾಜ್ಯ ಸರ್ಕಾರದ ಎಸ್‌ಐಟಿ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನ ಆಗಸ್ಟ್ 28ಕ್ಕೆ ಹೈಕೋರ್ಟ್ ಮುಂದೂಡಿದೆ.

ಜಮೀನು ಒತ್ತುವರಿ ಆರೋಪ ಪ್ರಕರಣ ಸಂಬಂಧ ಸಮಾಜ ಪರಿವರ್ತನಾ ಸಮುದಾಯದಿಂದ ಮಧ್ಯ ಪ್ರವೇಶ ಕೋರಿ ಅರ್ಜಿ ಸಲ್ಲಿಸಲಾಗಿತ್ತು. ಭಾಗಶಃ ಅರ್ಜಿ ವಿಚಾರಣೆ ನಡೆಸಿ ಅದನ್ನ ಬಿಡುಗಡೆ ಮಾಡಿದ್ರೆ ಅರ್ಜಿದಾರರ ಪರ ವಕೀಲರು ನನ್ನ ಬಗ್ಗೆ ಏನೆಂದು ಕೊಳ್ಳುತ್ತಾರೆ ಎಂದು ಹೈಕೋರ್ಟ್‌ನ ನ್ಯಾ.ಇಎಸ್ ಇಂದಿರೇಶ್ ಪ್ರಶ್ನೆ ಮಾಡಿದರು.

ನೋಂದಣಿಯಿಂದ ತಪ್ಪಾಗಿರಬಹುದು, ಅರ್ಜಿ ವಿಚಾರಣೆ ನಡೆಸಲು ನಮ್ಮ ಆಕ್ಷೇಪ ಇಲ್ಲ ಅಂತಾ ಸಮಾಜ ಪರಿವರ್ತನಾ ಸಮುದಾಯದ ಪರ ವಕೀಲ ಬಸವರಾಜ್ ವಾದಿಸಿದರು. ನ್ಯಾಯಾಂಗ ವ್ಯವಸ್ಥೆಯನ್ನ ನಾವು ಗೌರವಿಸಬೇಕು. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಿದೆ. ಇದು ಇನ್ನೊಂದು ಅರ್ಜಿ ಅಷ್ಟೇ ಅಂತಾ ಪೀಠ ಹೇಳಿತು.

ಈ ವೇಳೆ, ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸೋದಾಗಿ ತಿಳಿಸಿದ ಸರ್ಕಾರದ ಪರ ವಕೀಲ ಎಜಿ ಶಶಿಕಿರಣ್ ಶೆಟ್ಟಿ ಕೋರ್ಟ್‌ಗೆ ಮತ್ತೊಂದು ದಿನ ಪ್ರಕರಣದ ವಿಚಾರಣೆ ನಡೆಸಲು ಮನವಿ ಮಾಡಿದರು. ಈ ಹಿನ್ನೆಲೆಯಲ್ಲಿ ಮಧ್ಯಂತರ ಆದೇಶ ವಿಸ್ತರಿಸಿ ಆಗಸ್ಟ್ 28ಕ್ಕೆ ವಿಚಾರಣೆಯನ್ನ ಹೈಕೋರ್ಟ್ ಮುಂದೂಡಿದೆ.

ಜಮ್ಮು–ಕಾಶ್ಮೀರ ಮಾಜಿ ಗವರ್ನರ್ ಸತ್ಯಪಾಲ್ ಮಲಿಕ್ ನಿಧನ



ನವದೆಹಲಿ: ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಜಮ್ಮು ಮತ್ತು ಕಾಶ್ಮೀರದ 79 ವರ್ಷದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರು ಮಂಗಳವಾರ ನಿಧನರಾದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ದೆಹಲಿಯ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಮಧ್ಯಾಹ್ನ 1.10ರ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ. ಮಲಿಕ್ ಆಗಸ್ಟ್ 2018ರಿಂದ ಅಕ್ಟೋಬರ್ 2019ರವರೆಗೆ ಜಮ್ಮು ಮತ್ತು ಕಾಶ್ಮೀರದ 10ನೇ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದರು. ಅವರ ಅಧಿಕಾರಾವಧಿಯಲ್ಲಿಯೇ ಕೇಂದ್ರ ಸರ್ಕಾರವು 370ನೇ ವಿಧಿಯನ್ನು ರದ್ದುಗೊಳಿಸಿತು. ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿತು ಹಾಗೂ ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು. 5 ದಶಕಗಳಿಗೂ ಹೆಚ್ಚು ಕಾಲ ವಿವಿಧ ಪಕ್ಷಗಳಲ್ಲಿ ಮತ್ತು ವಿವಿಧ ರಾಜ್ಯಗಳಲ್ಲಿ ತಮ್ಮ ರಾಜಕೀಯ ಜೀವನ ನಡೆಸಿದ್ದಾರೆ. ಮಲಿಕ್, ಮೊದಲು ಮಾಜಿ ಪ್ರಧಾನಿ ಚರಣ್ ಸಿಂಗ್ ಸ್ಥಾಪಿಸಿದ ಭಾರತೀಯ ಕ್ರಾಂತಿ ದಳದೊಂದಿಗೆ ಬಾಗ್‌ಪತ್‌ನಿಂದ ಶಾಸಕರಾಗಿದ್ದರು. ನಂತರ 1980 ಮತ್ತು 1989ರ ನಡುವೆ ಉತ್ತರಪ್ರದೇಶದಿಂದ ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. 1989ರಲ್ಲಿ ಜನತಾ ದಳದ ಟಿಕೆಟ್‌ನಲ್ಲಿ ಅಲಿಗಢದಿಂದ ಲೋಕಸಭೆಗೆ ಆಯ್ಕೆಯಾದರು. ಮಲಿಕ್ ಅವರನ್ನು 2012ರಲ್ಲಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು ಮತ್ತು 2014ರಲ್ಲಿ ಮರುನೇಮಕ ಮಾಡಲಾಯಿತು. ಮಲಿಕ್ ತಮ್ಮ ಸಾರ್ವಜನಿಕ ಜೀವನದ ಅಂತಿಮ ಹಂತದಲ್ಲಿ ಹಲವಾರು ಸರ್ಕಾರಿ ಹುದ್ದೆಗಳನ್ನು ಅಲಂಕರಿಸಿದರು. 2017ರಲ್ಲಿ ಬಿಹಾರದ ರಾಜ್ಯಪಾಲರಾಗಿ ನೇಮಕಗೊಂಡರು, 2018ರಲ್ಲಿ ಒಡಿಶಾದ ಹೆಚ್ಚುವರಿ ಉಸ್ತುವಾರಿ ವಹಿಸಲಾಗಿತ್ತು.

ಕೊಡಗು ಸೇರಿ ಕರಾವಳಿ ಜಿಲ್ಲೆಗಳಲ್ಲಿ ಗುಡುಗುಸಹಿತ ಮಳೆ ಸಾಧ್ಯತೆ

ಮೈಸೂರು, ಆ.5(ಎಂಕೆ)–ಕೊಡಗು, ಹಾಸನ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಗುಡುಗುಸಹಿತ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ದಕ್ಷಿಣ ಕೇರಳ ಕರಾವಳಿಯಲ್ಲಿ ಉಂಟಾದ ಮೇಲ್ಮೈ ಸುಳಿಗಾಳಿಯು ಕರಾವಳಿ ತೀರದಲ್ಲೇ ಉತ್ತರಕ್ಕೆ ಚಲಿಸಲಿದ್ದು, ನಾಳೆ(ಆ.6) ಸಂಜೆ ಉಡುಪಿ ಜಿಲ್ಲೆಯ ತನಕ ಚಲಿಸಿ ಶಿಥಿಲಗೊಳ್ಳುವ ಸಾಧ್ಯತೆಗಳಿದ್ದು, ಕಾಸರಗೋಡು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗಾಳಿಯೊಂದಿಗೆ ಮಳೆ ಬೀಳುವ ಸಾಧ್ಯತೆಗಳಿವೆ.

ಕೊಡಗು, ಹಾಸನ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳ ಹೆಚ್ಚಿನ ಭಾಗಗಳಲ್ಲಿ ಗುಡುಗುಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಉತ್ತರ ಒಳನಾಡಿನ ಕೆಲವು ಭಾಗಗಳಲ್ಲಿಯೂ ಮಳೆಯಾಗಲಿದೆ. ದಕ್ಷಿಣ ಒಳನಾಡಲ್ಲಿ ಆ.8ರ ತನಕ ಹಾಗೂ ಉತ್ತರ ಒಳನಾಡಿನಲ್ಲಿ ಆ.10ರ ತನಕ ಮಳೆ ಮುಂದುವರಿಯುವ ಸಾಧ್ಯತೆಗಳಿವೆ.

ಮೈಸೂರಲ್ಲಿ ಮಳೆ: ಮೈಸೂರು ಜಿಲ್ಲೆಯಲ್ಲಿ ಕಳೆದ ಜೂನ್, ಜುಲೈ ತಿಂಗಳಿನಲ್ಲಿ ವಾಡಿಕೆಗಿಂತ ಕಡಿಮೆ ಬಿದ್ದಿರುವ ಮಳೆಯು ಆಗಸ್ಟ್ ತಿಂಗಳ ಮೊದಲ ವಾರದಲ್ಲಿ ಚುರುಕುಗೊಂಡಿದೆ. ವಾಡಿಕೆ(17.1 ಮೀ.ಮೀ)ಗಿಂತ ಹೆಚ್ಚಿನ ಮಳೆ(23.8 ಮೀ.ಮೀ) ಯಾಗಿದ್ದು, ಮಳೆ ಇಲ್ಲದೆ ಬಾಡಿಹೋಗಿದ್ದ ಬೆಳೆಗೆ ಪುನಶ್ಚೇತನ ದೊರೆತಂತಾಗಿದೆ.

ಜಯಲಕ್ಷ್ಮಿ ಕೊಡವ ಅಸೋಸಿಯೇಷನ್ ವಾರ್ಷಿಕ ಸಂತೋಷ ಕೂಟ



ಜಯಲಕ್ಷ್ಮಿ ಕೊಡವ ಅಸೋಸಿಯೇಷನ್ ವಾರ್ಷಿಕ ಸಂತೋಷ ಕೂಟದಲ್ಲಿ (ಕುಳಿತಿರುವವರು ಎಡದಿಂದ ಬಲಕ್ಕೆ): ಚೋನಿರಾ ಕಾರಿಯಪ್ಪ, ಪಟ್ಟದ ಜೈಕುಮಾರ್, ಮುಕ್ಕಾಟೀರಾ ಎ.ಸೋಮಯ್ಯ (ಖಜಾಂಚಿ), ಜಮ್ಮಡ ಗಣೇಶ್ ಅಯ್ಯಣ್ಣ (ಕಾರ್ಯದರ್ಶಿ), ಬಲ್ಯಾಟಂಡ ಪಿ.ಉತ್ತಪ್ಪ (ಅಧ್ಯಕ್ಷ), ಪಂಡಿಯಂಡ ಯು.ಗಿರೀಶ್ (ಉಪಾಧ್ಯಕ್ಷ), ಅಲಮೇಂಗಡ ಶಾಂತಿ ವಿಟ್ಟಲ್, ಕೋಡೀರಾ ಜ್ಯೋತಿ ಪೂಣಚ್ಚ, ಪಂಡಿಯಂಡ ಅನಿಲ್ ಕಾರಿಯಪ್ಪ. (ನಿಂತಿರುವವರು ಎಡದಿಂದ ಬಲಕ್ಕೆ): ಕಲ್ಲಿಚಂಡ ಅಯ್ಯಣ್ಣ, ಕಂಜೀತಾಂಡ ಜಯಪ್ರಕಾಶ್, ಬಿದ್ದಂಡ ಬೇಬಾ ಗಣಪತಿ, ಬಿದ್ದಂಡ ಮೈನಾ ಗಣಪತಿ, ತಾತಂಡ ನಿಶಿ ಪೂಣಚ್ಚ, ಮಾಚಂಡ ರೇಷ್ಮಾ, ಮಲ್ಲಂಗಡ ಶ್ವೇತಾ ಜಯಪ್ರಕಾಶ್, ಕೋದಂಡ ಚೈತ್ರ ಮೇದಪ್ಪ, ಮುರುವಂಡ ಇಂದು ಗಣಪತಿ, ಬಾಚಿರ ಲವ ಪೂವಯ್ಯ, ಅಜ್ಜಿನಿಕಂಡ ಮನೀಶ್ ಪೆಮ್ಮಯ್ಯ, ಕಾಯಪಂಡ ವಿನಯ್ ಅವರನ್ನು ಕಾಣಬಹುದು.

ಮೈಸೂರು,ಆ.5–ಮೈಸೂರಿನ ಜಯಲಕ್ಷ್ಮಿ ಕೊಡವ ಅಸೋಸಿಯೇಷನ್‌ನ 20ನೇ ವಾರ್ಷಿಕ ಸಂತೋಷ ಕೂಟ ಜಯಲಕ್ಷ್ಮಿಪುರಂನ ಕೊಡಗು ಸಹಕಾರ ಸಂಘದಲ್ಲಿ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮ, ಶ್ರೀಮತಿ ಕೋಡಿರ ಜ್ಯೋತಿ ಪೂಣಚ್ಚ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಅಧ್ಯಕ್ಷ ಬಲ್ಯಾಟಂಡ ಉತ್ತಪ್ಪ ಅಧ್ಯಕ್ಷತೆ ವಹಿಸಿದ್ದರು.

ಇದೇ ವೇಳೆ ಕಳೆದ ವರ್ಷ ನಿಧನರಾದ ಐವರು ಸದಸ್ಯರಿಗೆ ಸಂತಾಪ ಸೂಚಿಸಲಾಯಿತು. 3.8.2024ರಿಂದ 27.8.2025 ರವರೆಗೆ ಸೇರ್ಪಡೆಗೊಂಡ ನೂತನ ಸದಸ್ಯರು ಸಭಿಕರಿಗೆ ತಮ್ಮ ಪರಿಚಯ ಮಾಡಿಕೊಂಡರು. ಕಳೆದ ವರ್ಷದ 2025–26ನೇ ಸಾಲಿನ ಸಮಿತಿ ಸದಸ್ಯರು ಕಾರ್ಯಕ್ರಮ ಮುಂದುವರಿಸಲಿದ್ದು, ಅಧ್ಯಕ್ಷರಾಗಿ ಬಲ್ಯಾಟಂಡ ಪಿ.ಉತ್ತಪ್ಪ, ಉಪಾಧ್ಯಕ್ಷರಾಗಿ ಪಾಂಡಿಯಂಡ ಗಿರೀಶ್, ಕಾರ್ಯದರ್ಶಿಯಾಗಿ ಜಮ್ಮಡ ಗಣೇಶ್ ಅಯ್ಯಣ್ಣ, ಖಜಾಂಚಿಯಾಗಿ ಮುಕ್ಕಾಟೀರ ಎ.ಸೋಮಯ್ಯರಿಗೆ 15 ಮಂದಿ ಸಮಿತಿ ಸದಸ್ಯರು ಸಹಕರಿಸಿದರು.

ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷ ಬಲ್ಯಾಟಂಡ ಉತ್ತಪ್ಪ ಸಂಘದ ಅಭಿವೃದ್ಧಿ ಕುರಿತು ಹಲವಾರು ಸಮಸ್ಯೆಗಳ ಬಗ್ಗೆ ಮಾತನಾಡಿದ ಅವರು, ಎಲ್ಲಾ ಸದಸ್ಯರು ಹಾಜರಾಗುವ ಮೂಲಕ ಸಕ್ರಿಯವಾಗಿ ಭಾಗವಹಿಸುವಂತೆ ಮನವಿ ಮಾಡಿದರು. 21 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ವಯಸ್ಕ ಸದಸ್ಯರು ಪ್ರತ್ಯೇಕವಾಗಿ ಸಂಘದ ಪ್ರತ್ಯೇಕ ಸದಸ್ಯತ್ವವನ್ನು ಪಡೆಯುವಂತೆ ಮನವಿ ಮಾಡಿದರು.

ಇದೇ ವೇಳೆ ಮೂವರು ಸಂಘದ ಹಿರಿಯ ಸದಸ್ಯರಾದ ಅಂಜ ಪರ್ವನಂದ ಕುಂಜಪ್ಪ (ನಿವೃತ್ತ ಐಜಿಪಿ), ಕಂಡಾರ್‌ತಂಡ ಸನ್ನಿ ಮುತ್ತಪ್ಪ ಮತ್ತು ಕೊಡಿರಾ ಪೂಣಚ್ಚ ಅವರನ್ನು ಸನ್ಮಾನಿಸಲಾಯಿತು. ಸಂಘಕ್ಕೆ ನೆರವಾದ ಸದಸ್ಯ ಜೈಕುಮಾರ್, ರೈಫಲ್ ಶೂಟಿಂಗ್‌ನ ಸಾಧನೆಗಾಗಿ ಮಿಸ್ ಮಲ್ಲಂಗಡ ದೇವಾಂಶಿ ಜಯಪ್ರಕಾಶ್ ಅವರನ್ನು ಪ್ರಶಂಸಿಸಲಾಯಿತು. ಖಜಾಂಚಿ ಮುಕ್ಕಾಟೀರಾ ಸೋಮಯ್ಯ 2024–25ನೇ ಸಾಲಿನ ಲೆಕ್ಕದ ವರದಿ ಮಂಡಿಸಿ, ಸಭೆಯಿಂದ ಅನುಮೋದನೆ ಪಡೆಯಲಾಯಿತು. ಶ್ರೀಮತಿ ಮಲ್ಲಂಗಡ ಶ್ವೇತಾ ಜಯಪ್ರಕಾಶ್ ಕಾರ್ಯಕ್ರಮ ನಡೆಸಿಕೊಟ್ಟರು.

ದೇಶ - ವಿದೇಶ

ಬ್ರೆಜಿಲ್ ಮಾಜಿ ಅಧ್ಯಕ್ಷ ಬೊಲ್ಸನಾರೊ ಗೃಹಬಂಧನಕ್ಕೆ ಕೋರ್ಟ್ ಆದೇಶ



ಸಾವೊ ಪಾಲೊ: ಗಲಭೆಗೆ ಸಂಚು ರೂಪಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ಎದುರಿಸುತ್ತಿರುವ ಬ್ರೆಜಿಲ್ ಮಾಜಿ ಅಧ್ಯಕ್ಷ ಜೈರ್ ಬೊಲ್ಸನಾರೊ ಅವರನ್ನು ಗೃಹಬಂಧನಕ್ಕೆ ಒಳಪಡಿಸುವಂತೆ ಅಲ್ಲಿನ ಸುಪ್ರೀಂ ಕೋರ್ಟ್ ಆದೇಶಿಸಿದೆ.

2022ರ ಅಕ್ಟೋಬರ್ 31ರಂದು ನಡೆದ ಚುನಾವಣೆಯಲ್ಲಿ ಬಲಪಂಥೀಯ ನಾಯಕ ಬೊಲ್ಸನಾರೊ, ಎಡಪಂಥೀಯ ನಾಯಕ ಲೂಯಿಸ್ ಇನಾಸಿಯೊ ಲುಲಾ ಡಾ.ಸಿಲ್ವಾ ಎದುರು ಸೋತಿದ್ದರು. ಈ ಸೋಲನ್ನು ಒಪ್ಪಿಕೊಳ್ಳದ ಬೊಲ್ಸನಾರೊ ಬೆಂಬಲಿಗರು ರಾಷ್ಟ್ರಪತಿ ಭವನ, ಸುಪ್ರೀಂ ಕೋರ್ಟ್ ಮತ್ತು ಸಂಸತ್ ಮೇಲೆ ದಾಳಿ ನಡೆಸಿದ್ದರು.

ಚುನಾವಣೆ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವ ಮೂಲಕ ಬೊಲ್ಸನಾರೊ ನ್ಯಾಯಾಂಗದ ಆದೇಶ ಉಲ್ಲಂಘಿಸಿದ್ದಾರೆ ಎಂದು ನ್ಯಾಯಮೂರ್ತಿ ಅಲೆಕ್ಸಾಂಡ್ರೆ ಡಿ. ಮೊರೇಸ್ ತೀರ್ಪಿನಲ್ಲಿ ಹೇಳಿದ್ದಾರೆ. ಪ್ರಯಾಣಕ್ಕೆ ಅವಕಾಶವಿಲ್ಲದ ಕಾರಣ ಬೊಲ್ಸನಾರೊ ಬ್ರೆಸಿಲಿಯಾದಲ್ಲಿಯೇ ಗೃಹ ಬಂಧನದಲ್ಲಿ ಉಳಿಯುವ ಸಾಧ್ಯತೆಯಿದೆ ಎನ್ನಲಾಗಿದೆ. ಏತನ್ಮಧ್ಯೆ, ಬೊಲ್ಸನಾರೊ ವಿರುದ್ಧದ ತನಿಖೆ ಕೈಬಿಡುವಂತೆ ಎಚ್ಚರಿಸಿದ್ದ ಟ್ರಂಪ್, ಬ್ರೆಜಿಲ್ ಸರಕುಗಳ ಮೇಲೆ ಶೇ.50ರಷ್ಟು ಸುಂಕ ವಿಧಿಸಿದ್ದರು.

105 ಕೋಟಿ ವಂಚನೆ ಪ್ರಕರಣ: ಮಾಜಿ ಐಎಎಸ್ ಅಧಿಕಾರಿ ಮನೆ ಮೇಲೆ ಇಡಿ ದಾಳಿ

ಗುವಹಾಟಿ: ಅಸ್ಸಾಂ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನಲ್ಲಿ ನಡೆದಿದೆ ಎನ್ನಲಾದ 105 ಕೋಟಿ ವಂಚನೆ ಪ್ರಕರಣದಲ್ಲಿ ಮಾಜಿ ಐಎಎಸ್ ಅಧಿಕಾರಿ ಸೇವಾಲಿ ದೇವಿ ಶರ್ಮಾ ಸಹಿತ ಇತರ ಅಧಿಕಾರಿಗಳ ಮನೆಗಳ ಮೇಲೆ ಜಾರಿ ನಿರ್ದೇಶನಾಲಯ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ SCERT ಮಾಜಿ ಕಾರ್ಯನಿರ್ವಾಹಕ ಅಧ್ಯಕ್ಷೆ ಹಾಗೂ ನಿರ್ದೇಶಕಿಯೂ ಆಗಿರುವ ಶರ್ಮಾ ಅವರಿಗೆ ಸೇರಿದ ಎಂಟು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಶೋಧ ನಡೆಸಿದರು ಎಂದು ಮೂಲಗಳು ಹೇಳಿವೆ. ಅಸ್ಸಾಂ ಮುಖ್ಯಮಂತ್ರಿ ಅವರ ವಿಶೇಷ ವಿಚಕ್ಷಣ ದಳದ ನಿರ್ದೇಶನದಂತೆ ರಾಜ್ಯ ಪೊಲೀಸರು 2023ರಲ್ಲಿ ಎಫ್‌ಐಆರ್ ದಾಖಲಿಸಿದ್ದರು.

1992ರ ತಂಡದ ರಾಜಸ್ಥಾನ ಕೇಡರ್ ಅಧಿಕಾರಿಯಾಗಿರುವ ಶರ್ಮಾ ಆದಾಯಕ್ಕಿಂತ ಹೆಚ್ಚಿನ 5.7 ಕೋಟಿ ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿದ್ದರು. ರಾಜಸ್ಥಾನ ಪೊಲೀಸರು ಶರ್ಮಾರನ್ನು ಬಂಧಿಸಿದ್ದರು. ಇವರು 2017ರಿಂದ 2020ರವರೆಗೆ SCERT ನಿರ್ದೇಶಕಿಯಾಗಿದ್ದರು. ಈ ಯೋಜನೆಯಡಿ 59 ಸಂಸ್ಥೆಗಳ 27 ಸಾವಿರ ಶಿಕ್ಷಕರಿಗೆ ತರಬೇತಿ ನೀಡುವ ಯೋಜನೆ ಇದಾಗಿದೆ. ಆದರೆ, ಅಕ್ರಮವಾಗಿ 347 ಕೇಂದ್ರಗಳನ್ನು ಶರ್ಮಾ ತೆರೆದಿದ್ದರು. ಇದರಲ್ಲಿ 1.06 ಲಕ್ಷ ಶಿಬಿರಾರ್ಥಿಗಳನ್ನು ದಾಖಲಿಸಿಕೊಂಡು ಅಕ್ರಮವಾಗಿ ಶುಲ್ಕ ಸಂಗ್ರಹಿಸಿದ್ದರು ಎಂಬ ಆರೋಪ ಇವರ ಮೇಲಿದೆ.

ವೀಸಾ ಅವಧಿ ಮೀರಿ ವಾಸ್ತವ್ಯ; ವಿದೇಶಿ ಪ್ರಜೆಗಳಿಗೆ ಅಮೆರಿಕ ಗಡಿಪಾರು ಎಚ್ಚರಿಕೆ



ವಾಷಿಂಗ್ಟನ್: ಅಮೆರಿಕದ ವೀಸಾ ನಿಯಮಗಳನ್ನು ಮೀರಿ ವಾಸ್ತವ್ಯ ಹೂಡಿರುವ ವಿದೇಶಿ ಪ್ರಜೆಗಳಿಗೆ ಅಮೆರಿಕ ಗಡಿಪಾರು ಎಚ್ಚರಿಕೆ ನೀಡಿದೆ. ವೀಸಾ ಅವಧಿ ಮೀರಿ ಉಳಿಯುವುದು ಮತ್ತು ಉಲ್ಲಂಘಿಸುವುದು ವೀಸಾ ರದ್ಧತಿ ಹಾಗೂ ಗಡಿಪಾರು ಸೇರಿದಂತೆ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು ಎಂದು ಭಾರತ ಸೇರಿದಂತೆ ಇತರೆ ದೇಶದ ಪ್ರಜೆಗಳಿಗೆ ಅಮೆರಿಕ ಎಚ್ಚರಿಕೆ ನೀಡಿದೆ.

ಅಮೆರಿಕದ ಗೃಹ ಭದ್ರತಾ ಇಲಾಖೆಯು, ಭಾರತ ಸೇರಿದಂತೆ ವಿದೇಶಿ ರಾಷ್ಟ್ರಗಳಲ್ಲಿ ವೀಸಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತನ್ನ ದೇಶದಲ್ಲಿರುವ ವಿದೇಶಿ ನಾಗರಿಕರಿಗೆ ಸೂಚನೆ ನೀಡಿದೆ. ವೀಸಾ ಅವಧಿ ಮೀರಿದರೆ, ಅಂತಹ ವ್ಯಕ್ತಿಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸಬಹುದು. ಇದರಲ್ಲಿ ಗಡಿಪಾರು, ದಂಡ ಮತ್ತು ಭವಿಷ್ಯದಲ್ಲಿ ಅಮೆರಿಕ ಪ್ರವೇಶ ನಿಷೇಧವೂ ಸೇರಿರಬಹುದು.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅಮೆರಿಕ ಗೃಹ ಭದ್ರತಾ ಇಲಾಖೆಯ ವಕ್ತಾರರು, ವಿದೇಶದಲ್ಲಿ ವೀಸಾ ನಿಯಮಗಳನ್ನು ಉಲ್ಲಂಘಿಸಿದರೆ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು. ಯಾವುದೇ ದೇಶದ ಕಾನೂನುಗಳನ್ನು ಗೌರವಿಸುವುದು. ವೀಸಾ ಅವಧಿಯೊಳಗೆ ಉಳಿಯುವುದು ಅತ್ಯಗತ್ಯ ಎಂದು ಹೇಳಿದ್ದಾರೆ.

ಎಟಿಎಂ ಕಳ್ಳತನಕ್ಕೆ ಎಸ್‌ಯುವಿ ಬಳಸಿದ ಚಾಲಾಕಿ ಕಳ್ಳರು



ಛತ್ರಪತಿ ಸಾಂಭಾಜಿನಗರ: ಮಹಾರಾಷ್ಟ್ರದ ಛತ್ರಪತಿ ಸಾಂಭಾಜಿನಗರದಲ್ಲಿನ ಎಟಿಎಂ ಕಳ್ಳತನಕ್ಕೆ ಯತ್ನಿಸಿದ್ದ ಕಳ್ಳರು, ಅದನ್ನು ಎಳೆದೊಯ್ಯಲು ಎಸ್‌ಯುವಿ ಬಳಸಿದ ಪ್ರಕರಣ ವರದಿಯಾಗಿದೆ. ಆದರೆ ಕಳ್ಳರ ಯತ್ನ ಕೈಗೂಡಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಪ್ರಕರಣ ಸಂಬಂಧಿತ ಅಪರಿಚಿತ ಕಳ್ಳರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಘಟನೆಯು ಸೋಮವಾರ ನಸುಕಿನ 3ರಿಂದ 4ರ ಒಳಗೆ ನಡೆದಿದೆ. ಭಾರತೀಯ ಸ್ಟೇಟ್ ಬ್ಯಾಂಕ್‌ನ ಶಹನೂರ್ವಾಡಿ ಶಾಖೆಯಲ್ಲಿರುವ ಎಟಿಎಂ ಕದ್ದೊಯ್ಯಲು ಕಳ್ಳರ ತಂಡ ಯತ್ನಿಸಿದೆ.

4 ಜನರಿದ್ದ ಈ ಕಳ್ಳರ ತಂಡವು ಎಸ್‌ಯುವಿ ವಾಹನ ಬಳಸಿದೆ. ಎಟಿಎಂಗೆ ಹಳದಿ ಬಣ್ಣದ ಬೆಲ್ಟ್ ಕಟ್ಟಿದ್ದರು. ನಂತರ ಎಸ್‌ಯುವಿಯಿಂದ ಯಂತ್ರವನ್ನು ಹೊರಗೆಳೆಯುವ ಯತ್ನ ನಡೆಸಿದರು. ಆದರೆ ಅದು ಸಾಧ್ಯವಾಗಲಿಲ್ಲ. ಮೊದಲು ಎಟಿಎಂ ಒಳಗಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಕಳ್ಳರು ನಾಶಪಡಿಸಿದ್ದಾರೆ. ಎಟಿಎಂ ಯಂತ್ರ ತೆರೆದು ಹಣ ದೋಚುವ ಯತ್ನವನ್ನೂ ನಡೆಸಿದ್ದಾರೆ. ಆದರೆ ಹಣವನ್ನು ಪಡೆಯಲು ಸಾಧ್ಯವಾಗಿಲ್ಲ ಎಂದಿದ್ದಾರೆ.

ಉಕ್ರೇನ್‌ಗೆ ನ್ಯಾಟೊ ಶಸ್ತ್ರಾಸ್ತ್ರ ಪೂರೈಕೆ



ಬ್ರಸೆಲ್ಸ್: ತನ್ನ ಸದಸ್ಯ ರಾಷ್ಟ್ರಗಳು ಅಮೆರಿಕದಿಂದ ಖರೀದಿಸಿರುವ ಶಸ್ತ್ರಾಸ್ತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಉಕ್ರೇನ್‌ಗೆ ಪೂರೈಸುವ ಪ್ರಕ್ರಿಯೆಯನ್ನು ನ್ಯಾಟೊ ಶುರು ಮಾಡಿದೆ. ವಾಯು ರಕ್ಷಣಾ ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರಗಳು ಸೇರಿದಂತೆ 57.8 ಕೋಟಿ ಡಾಲರ್ (ಅಂದಾಜು 5,073 ಕೋಟಿ) ಮೊತ್ತದ ಯುದ್ಧ ಸಾಮಗ್ರಿಗಳನ್ನು ಉಕ್ರೇನ್‌ಗೆ ನೀಡುವುದಾಗಿ ನೆದರ್ಲೆಂಡ್ಸ್ ಮಂಗಳವಾರ ಹೇಳಿದೆ.

ಉಕ್ರೇನ್‌ನ ಆದ್ಯತೆ ಪರಿಗಣಿಸಿ ಶಸ್ತ್ರಾಸ್ತ್ರಗಳನ್ನು 2 ಪ್ಯಾಕೇಜ್‌ಗಳಲ್ಲಿ ಪೂರೈಸಲಾಗುವುದು ಎಂದು ನ್ಯಾಟೊ ತಿಳಿಸಿದೆ. ಉಕ್ರೇನ್‌ನ ಪ್ರಮುಖ ನಗರಗಳನ್ನು ಗುರಿಯಾಗಿಸಿ ರಷ್ಯಾ ನಿರಂತರ ಡ್ರೋನ್ ಹಾಗೂ ಕ್ಷಿಪಣಿ ದಾಳಿ ನಡೆಸುತ್ತಿರುವುದರಿಂದ ಅದನ್ನು ತಡೆಯಲು ವಾಯುರಕ್ಷಣಾ ವ್ಯವಸ್ಥೆಯು ಉಕ್ರೇನ್ ಸೇನೆಗೆ ಅತಿ ಅಗತ್ಯವಾಗಿದೆ. ರಷ್ಯಾ ದಾಳಿಯಿಂದಾಗಿ ಉಕ್ರೇನ್‌ನ 12 ಸಾವಿರಕ್ಕೂ ಹೆಚ್ಚು ನಾಗರಿಕರು ಮೃತಪಟ್ಟಿದ್ದಾರೆ ಎಂದು ವಿಶ್ವಸಂಸ್ಥೆ ಹೇಳಿದೆ.

ಗಡಿಗೆ ಹೊಂದಿರುವ ಉಕ್ರೇನ್‌ನ ಗ್ರಾಮಗಳನ್ನು ವಶಪಡಿಸಿಕೊಳ್ಳುವ ಕಾರ್ಯಾಚರಣೆಯನ್ನು ರಷ್ಯಾ ಮುಂದುವರಿಸಿದೆ. ಪ್ರಸ್ತುತ, ಉಕ್ರೇನ್‌ನ ಪೂರ್ವ ಭಾಗದ ಪೊಕ್ರೊವ್ಸ್ಕ್ ನಗರ ವಶಪಡಿಸಿಕೊಳ್ಳಲು ಹೋರಾಟ ನಡೆಸುತ್ತಿದೆ. ಈ ನಗರ ರಷ್ಯಾದ ಕೈವಶವಾದರೆ, ಉಕ್ರೇನ್‌ನ ಇನ್ನಷ್ಟು ಒಳಭಾಗಕ್ಕೆ ನುಗ್ಗುವುದು ರಷ್ಯಾ ಸೇನೆಗೆ ಸುಲಭವಾಗಲಿದೆ.

ಧರ್ಮಸ್ಥಳ ಪ್ರಕರಣ: 6ನೇ ದಿನ ನೂರಾರು ಮೂಳೆ, ತಲೆಬುರುಡೆ ಪತ್ತೆ

ಮಂಗಳೂರು: ಧರ್ಮಸ್ಥಳದಲ್ಲಿ ನೂರಾರು ಶವ ಹೂತಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ನಡೆದ ಉತ್ಖನನ ವೇಳೆ ಸುಮಾರು 100 ಮೂಳೆಗಳು ಮತ್ತು ತಲೆಬುರುಡೆ ಪತ್ತೆಯಾಗಿದೆ. ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ನೇತ್ರಾವತಿ ಸ್ನಾನಘಟ್ಟ ಬಳಿಯ ಅರಣ್ಯ ಪ್ರದೇಶದಲ್ಲಿ ಆರನೇ ದಿನದಲ್ಲಿ ಈ ಅವಶೇಷಗಳು ಪತ್ತೆಯಾಗಿದ್ದು, ತಲೆಬುರುಡೆ, ಬೆನ್ನು ಮೂಳೆಗಳು ಸೇರಿದಂತೆ ಸುಮಾರು 100 ಮೂಳೆಗಳನ್ನು ವಶಪಡಿಸಿಕೊಳ್ಳಲಾಗಿದೆ.



ದೂರುದಾರ ತೋರಿಸಿದ 11ನೇ ಸ್ಥಳದಿಂದ ಸುಮಾರು 100 ಮೀಟರ್ ಅಂತರದಲ್ಲಿ ಈ ಮಾನವ ಅವಶೇಷಗಳು ಪತ್ತೆಯಾಗಿವೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ. ಪತ್ತೆಯಾದ ಅಸ್ಥಿಪಂಜರದ ಭಾಗಗಳು ಇಬ್ಬರು ವ್ಯಕ್ತಿಗಳಿಗೆ ಸೇರಿರಬಹುದು ಎನ್ನಲಾಗಿದೆ. ಉದ್ದವಾದ ಬೆನ್ನುಮೂಳೆಯ ಪಟ್ಟಿ ಕೂಡ ಕಂಡುಬಂದಿದೆ. ತಜ್ಞರ ತಂಡ ವೈಜ್ಞಾನಿಕವಾಗಿ ಇವುಗಳನ್ನು ಸಂಗ್ರಹಿಸಿದೆ.

ಗಂಟು ಹಾಕಿದ ಸೀರೆ ಪತ್ತೆ: ಅದೇ ಸ್ಥಳದಲ್ಲಿ ಗಂಟು ಹಾಕಿದ ಸೀರೆಯೂ ಪತ್ತೆಯಾಗಿದೆ. ಮರದ ಮೇಲೆ ಆರು ಅಡಿ ಎತ್ತರದಲ್ಲಿ ಸೀರೆ ಕಟ್ಟಲಾಗಿತ್ತು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ. ಬೆಳಗ್ಗೆ 11.30ರ ಸುಮಾರಿಗೆ ಅರಣ್ಯ ಪ್ರವೇಶಿಸಿದ ಎಸ್‌ಐಟಿ ತಂಡ ಮಧ್ಯಾಹ್ನದ ಭೋಜನಕ್ಕೂ ವಿರಾಮ ತೆಗೆದುಕೊಳ್ಳದೆ ಸಂಜೆ 6.15ರವರೆಗೂ ಶೋಧ ಕಾರ್ಯ ನಡೆಸಿತು. ಅಸ್ಥಿ ಪಂಜರದ ಅವಶೇಷಗಳನ್ನು ಮೂರು ಬಕೆಟ್‌ಗಳು ಮತ್ತು ಎರಡು ಪಿವಿಸಿ ಪೈಪ್‌ಗಳಲ್ಲಿ ಮುಚ್ಚಿಕೊಂಡು ಕಾಡಿನಿಂದ ಹೊರಗೆ ತರಲಾಯಿತು.

ಕುತೂಹಲ ಮೂಡಿಸಿದ ದೂರುದಾರನ ನಡೆ: ದೂರುದಾರ ಈ ಹಿಂದೆ ಧರ್ಮಸ್ಥಳ ಸ್ನಾನಘಟ್ಟದ ಬಳಿ ಮತ್ತು ಅರಣ್ಯದೊಳಗೆ 13 ಶವ ಹೂತಿಟ್ಟ ಸಂಭವನೀಯ ಜಾಗಗಳನ್ನು ಗುರುತಿಸಿದ್ದರು. ಇವುಗಳಲ್ಲಿ 10 ಜಾಗಗಳಲ್ಲಿ ಇಲ್ಲಿವರೆಗೆ ಉತ್ಖನನ ಮಾಡಲಾಗಿದೆ. ಸೋಮವಾರ 11ನೇ ಜಾಗದಲ್ಲಿ ಜಾಗ ಅಗೆಯುವಿಕೆಗೆ ನಿರ್ಧರಿಸಲಾಗಿತ್ತು. ಆದರೆ, ದೂರುದಾರ ಅದರ ಬದಲಾಗಿ ಹತ್ತಿರದ ಬೇರೆ ಸ್ಥಳದಲ್ಲಿ ಅಗೆಯಲು ಮನವಿ ಮಾಡಿದರು. ಇದಕ್ಕಾಗಿ ಸುಮಾರು 20 ಕಾರ್ಮಿಕರನ್ನು ನಿಯೋಜಿಸಲಾಗಿತ್ತು. ಸ್ಥಳಕ್ಕೆ ಮಿನಿ ಅರ್ಥ್ ಮೂವರ್ಸ್ ಯಂತ್ರ ಕರೆಸಲಾಗಿತ್ತು. ಅದರಲ್ಲಿ ಅರಣ್ಯ ಪ್ರದೇಶದಲ್ಲಿ ಅದನ್ನು ಬಳಸಲಿಲ್ಲ.

ಸಾರಿಗೆ ನೌಕರರ ಸಮಸ್ಯೆಗೆ ಶೀಘ್ರ ಪರಿಹಾರ ಕಲ್ಪಿಸಿ

ಸಿದ್ದರಾಮಯ್ಯರಿಗೆ ವಿಪಕ್ಷ ನಾಯಕ ಆರ್.ಅಶೋಕ್ ಆಗ್ರಹ

ಬೆಂಗಳೂರು, ಆ. 5(ಕೆಎಂಶಿ)–ಸರ್ಕಾರಿ ಸಾರಿಗೆ ನೌಕರರ ಸಮಸ್ಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ಪರಿಹಾರ ನೀಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಆಗ್ರಹಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿಯಿಂದಾಗಿ ಗ್ರಾಮಾಂತರ ಬಸ್‌ಗಳ ಸಂಚಾರದಲ್ಲಿ ಕಡಿತಗೊಳಿಸಲಾಗಿದೆ ಎಂದರು. ಸಾರಿಗೆ ಸಂಸ್ಥೆ ನಿಗಮಗಳ ನೌಕರರಿಗೆ ವೇತನ ಕೊಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ, ಆರ್ಥಿಕ ಮುಗ್ಗಟ್ಟಿನಿಂದ ಸಮಸ್ಯೆ ಉಲ್ಬಣಿಸಿದೆ, ನೌಕರರ ಬೇಡಿಕೆ ಈಡೇರಿಸಲು ಮುಖ್ಯಮಂತ್ರಿಗಳಿಂದ ಸಾಧ್ಯವಾಗುತ್ತಿಲ್ಲ. ಮುಖ್ಯಮಂತ್ರಿ ಹಾಗೂ ಸಾರಿಗೆ ಸಚಿವರು ತಕ್ಷಣವೇ ಕಾರ್ಮಿಕರ ಮತ್ತು ಅಧಿಕಾರಿಗಳ ಸಭೆ ಕರೆದು ಪರಿಹಾರ ಕಂಡುಕೊಳ್ಳಬೇಕು, ಜನಸಾಮಾನ್ಯರಿಗೆ ಮುಂದೆ ತೊಂದರೆ ತಪ್ಪಿಸಬೇಕು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬೆಂಗಳೂರು ಭೇಟಿ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಾರಿಗೆ ನೌಕರರ ಸಭೆ ಕರೆದಿದ್ದರು. ಖಾಸಗಿ ವಾಹನಗಳು ಹಾಗೂ ಶಿಕ್ಷಣ ಸಂಸ್ಥೆಗಳ ಬಸ್‌ಗಳಿಗೆ ಪತ್ರ ಬರೆದಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲೂ ಸಮಸ್ಯೆ ಉಂಟು ಮಾಡಲು ಹೊರಟಿದ್ದು, ಮೊದಲೇ ವ್ಯವಸ್ಥೆ ಕೈಗೊಳ್ಳದೆ ಗಡ್ಡಕ್ಕೆ ಬೆಂಕಿ ಹೊತ್ತಿಕೊಂಡಾಗ ಬಾವಿ ತೋಡಿದರು ಎಂಬಂತಾಗಿದೆ ಎಂದರು.

ಭಾರತದ 'ಬ್ರಹ್ಮೋಸ್ ಕ್ಷಿಪಣಿ'ಗಾಗಿ ಮೆಗಾ ಆರ್ಡರ್

ಐಎಎಫ್ ನೌಕಾಪಡೆಗಾಗಿ ಖರೀದಿ!

ನವದೆಹಲಿ: 'ಆಪರೇಷನ್ ಸಿಂಧೂರ್' ವೇಳೆ ಪಾಕಿಸ್ತಾನದ ಮಿಲಿಟರಿ ನೆಲೆಗಳಿಗೆ ಗಮನಾರ್ಹ ಹಾನಿಯನ್ನುಂಟು ಮಾಡಿದ ಬ್ರಹ್ಮೋಸ್ ಸೂಪರ್ ಸಾನಿಕ್ ಖಂಡಾಂತರ ಕ್ಷಿಪಣಿಗಳಿಗೆ ಭಾರತೀಯ ಪಡೆಗಳು ಮೆಗಾ ಆರ್ಡರ್ ನೀಡುತ್ತಿವೆ. ಉನ್ನತ ಮಟ್ಟದ ರಕ್ಷಣಾ ಸಚಿವಾಲಯದ ಸಭೆಯು ಭಾರತೀಯ ವಾಯುಪಡೆಯ ಜೊತೆಗೆ ಭಾರತೀಯ ನೌಕಾಪಡೆಯ ಯುದ್ಧನೌಕೆಗಳಿಗೆ ಹೆಚ್ಚಿನ ಸಂಖ್ಯೆಯ ಬ್ರಹ್ಮೋಸ್ ಕ್ಷಿಪಣಿಗಳ ಖರೀದಿಗೆ ಅನುಮತಿ ನೀಡುವ ನಿರೀಕ್ಷೆಯಿದೆ ಎಂದು ಉನ್ನತ ರಕ್ಷಣಾ ಮೂಲಗಳು ಸುದ್ದಿಸಂಸ್ಥೆಗೆ ತಿಳಿಸಿವೆ. ಭಾರತ ಮತ್ತು ರಷ್ಯಾ ಜಂಟಿಯಾಗಿ ಬ್ರಹ್ಮೋಸ್ ಕ್ಷಿಪಣಿ ಅಭಿವೃದ್ಧಿಪಡಿಸಿವೆ. ನಾಲ್ಕು ದಿನಗಳ ಸೇನಾ ಸಂಘರ್ಷದ ವೇಳೆಯಲ್ಲಿ ಪಾಕಿಸ್ತಾನದ ವಾಯುನೆಲೆಗಳು ಮತ್ತು ಸೇನಾ ಕಂಟೋನ್ಮೆಂಟ್ ಧ್ವಂಸಕ್ಕೆ ಈ ಕ್ಷಿಪಣಿಗಳನ್ನು ದೊಡ್ಡ ಮಟ್ಟದಲ್ಲಿ ಬಳಸಲಾಗಿತ್ತು. ಭಾರತೀಯ ವಾಯುಪಡೆಯು ರಷ್ಯಾ ಮೂಲದ Su–30 MKI ಯುದ್ಧ ವಿಮಾನಗಳಿಗಾಗಿ ಈ ಕ್ಷಿಪಣಿ ಬಳಸುತ್ತಿದ್ದರೆ, ನೌಕಾಪಡೆಯು ತನ್ನ ವೀರ್–ವರ್ಗದ ಯುದ್ಧನೌಕೆಗಳನ್ನು ಸಜ್ಜುಗೊಳಿಸಲು ಕ್ಷಿಪಣಿಗಳನ್ನು ಬಳಸುತ್ತದೆ ಎಂದು ಮೂಲಗಳು ತಿಳಿಸಿವೆ.



'ಗಣಪ', 'ಕರಿಯ 2' ಸಿನಿಮಾದ ನಟ ಸಂತೋಷ್ ಬಾಲರಾಜ್ ಇನ್ನಿಲ್ಲ

ಬೆಂಗಳೂರು: ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಕನ್ನಡ ಜನಪ್ರಿಯ ನಿರ್ಮಾಪಕ ಆನೇಕಲ್ ಬಾಲರಾಜ್ ಅವರ ಪುತ್ರ ಸಂತೋಷ್ ಬಾಲರಾಜ್ ಅವರು ಮಂಗಳವಾರ ವಿಧಿವಶರಾಗಿದ್ದಾರೆ.



ಜಾಂಡೀಸ್ ನಿಂದ ಬಳಲುತ್ತಿದ್ದ ಸಂತೋಷ್ ಬಾಲರಾಜ್ ಅವರು, ಕೋಮಾ ಸ್ಥಿತಿಗೆ ಜಾರಿದ್ದರು ಎಂದು ಹೇಳಲಾಗಿತ್ತು. ಆದರೆ, ಇಂದು ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.

34 ವರ್ಷ ನಟ ಸಂತೋಷ್ ಬಾಲರಾಜ್ ಕನ್ನಡದಲ್ಲಿ ಹಲವು ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದಾರೆ. ಇವರ ತಂದೆ ಆನೇಕಲ್ ಬಾಲರಾಜ್ 'ಕರಿಯ' ಸಿನಿಮಾವನ್ನು ನಿರ್ಮಾಣ ಮಾಡಿದ್ದರು.

ಆ.10, ವಾರ್ಷಿಕ ಮಹಾಸಭೆ

ಮೈಸೂರು,ಆ.5–ಆಶಾಮಂದಿರ ನಿವೇಶನ ಮತ್ತು ವಸತಿದಾರರ ಕ್ಷೇಮಾಭಿವೃದ್ಧಿ ಸಂಘದ ವಾರ್ಷಿಕ ಮಹಾಸಭೆಯನ್ನು ಆ. 10 ರಂದು ಬೆಳಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ಬೋರೇಗೌಡರ ಅಧ್ಯಕ್ಷತೆಯಲ್ಲಿ ಹೆಬ್ಬಾಳು 2ನೇ ಹಂತದಲ್ಲಿರುವ ಉಮಾಮಹೇಶ್ವರಿ ದೇವಸ್ಥಾನದ ಆವರಣದಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9945308870 ಮೂಲಕ ಸಂಪರ್ಕಿಸಬಹುದು.



ಸಾರ್ವಜನಿಕ ಪ್ರಕಟಣೆ

ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಐಟಂ–1 ಸ್ವತ್ತಿನ ಮಾಲೀಕರಾದ, ಮೈಸೂರು, ಮೈಸೂರು ನಗರ ವೀವರ್ಸ್ ಕಾಲೋನಿ, ವಿಶ್ವೇಶ್ವರನಗರ, 1ನೇ ಕ್ರಾಸ್, ಮನೆ ನಂಬರ್. 39 ರ ವಾಸಿಯಾದ (1). ಶ್ರೀ. ಟಿ. ಸರವಣ ಕುಮಾರ್ ಬಿನ್ ಜಾನಕಿರಾಮನ್ ಎಸ್., ಐಟಂ–2 ಸ್ವತ್ತಿನ ಮಾಲೀಕರಾದ, ಮೈಸೂರು, ಜೆ.ಪಿ.ನಗರ, ಸಿದ್ಧಲಿಂಗೇಶ್ವರ ಬಡಾವಣೆ, 3ನೇ ಕ್ರಾಸ್, 1ನೇ ಹಂತ, ನಂಬರ್. 156/ಎ ರ ವಾಸಿಯಾದ (2). ಶ್ರೀಮತಿ. ಭಾಗ್ಯಶ್ರೀ ಕೋಂ. ಹೆಚ್. ಸಿ. ಮುದ್ದು ಮಾದಪ್ಪ, ಐಟಂ–3 ಮತ್ತು 4 ಸ್ವತ್ತಿನ ಮಾಲೀಕರಾದ, ಮೈಸೂರು, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೂರ ಗ್ರಾಮದ ನಿವಾಸಿಗಳಾದ (3). ಶ್ರೀ. ಮಲ್ಲಪ್ಪ @ ಮಲ್ಲಯ್ಯ ಬಿನ್. ಲೇಟ್. ಚಿಕ್ಕಮಾದಪ್ಪ ಹಾಗೂ ನಾಗಮ್ಮ ಕೋಂ. ಮಲ್ಲಪ್ಪ, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸರ್ವೆ ನಂಬರ್. 198/1 ರಲ್ಲಿನ ಒಂದು ಎಕರೆ ಹತ್ತು ಗುಂಟೆ (1.10.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 199, ಪಶ್ಚಿಮಕ್ಕೆ:– ಸರ್ವೆ ನಂಬರ್ 197, ಉತ್ತರಕ್ಕೆ: – ಸರ್ವೆ ನಂಬರ್ 198/2, ದಕ್ಷಿಣಕ್ಕೆ:– ಸರ್ವೆ ನಂಬರ್ 198/3


ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸರ್ವೆ ನಂಬರ್. 198/3 ರಲ್ಲಿನ ಒಂದು ಎಕರೆ (1.00.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 199; ಪಶ್ಚಿಮಕ್ಕೆ:– ಸರ್ವೆ ನಂಬರ್ 197; ಉತ್ತರಕ್ಕೆ: – ಸರ್ವೆ ನಂಬರ್ 198/1; ದಕ್ಷಿಣಕ್ಕೆ:–ಸರ್ವೆ ನಂಬರ್ 198/4

ಐಟಂ–3: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸರ್ವೆ ನಂಬರ್. 198/4 ರಲ್ಲಿನ ಒಂದು ಎಕರೆ (1.00.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:–ಸರ್ವೆ ನಂಬರ್ 199; ಪಶ್ಚಿಮಕ್ಕೆ:– ಸರ್ವೆ ನಂಬರ್ 197; ಉತ್ತರಕ್ಕೆ: – ಸರ್ವೆ ನಂಬರ್ 198/3; ದಕ್ಷಿಣಕ್ಕೆ:– ಸರ್ವೆ ನಂಬರ್ 196

ಐಟಂ–4: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾಟೂರು ಗ್ರಾಮದ ಸರ್ವೆ ನಂಬರ್. 199/3 ರಲ್ಲಿನ ಎರಡು ಗುಂಟೆ (0.02.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 199/1 ; ಪಶ್ಚಿಮಕ್ಕೆ:– ಸರ್ವೆ ನಂಬರ್ 197/1; ಉತ್ತರಕ್ಕೆ: – ಸರ್ವೆ ನಂಬರ್ 196; ದಕ್ಷಿಣಕ್ಕೆ:–ಸರ್ವೆ ನಂಬರ್ 198/3.

Sd/- M.N Prakash Kalappa
KAR-1996-2000
Advocate & Legal Consultant
#67/7A, P.R.I Complex, No.2&3,1st Floor,
New Sayyaji Rao Road, Fort Mohalla,
Mysore-570004. Ph: 9343112535

ಸ್ಥಳ : ಮೈಸೂರು
ದಿನಾಂಕ: 05/08/2025



ದಿ|| ಪಿ.ಎಲ್. ಮಲ್ಲಣ್ಣರವರು

ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದಿನಾಂಕ : 06-08-2025 ರಂದು ಬುಧವಾರ ಮಧ್ಯಾಹ್ನ 12.00 ಗಂಟೆಗೆ ನಮ್ಮ ಪುರಿಗಾಲಿಯ ಸ್ವಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ.

ಭೋಜನ : ಮಧ್ಯಾಹ್ನ 1.00 ಗಂಟೆಗೆ

ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ
ಪ್ರೀತಿ ಮತ್ತು ಆದರ್ಶಗಳೆ ನಮಗೆ ದಾರಿದೀಪ ನಿಮ್ಮ ಸವಿನೆನಪು
ಸದಾ ಹಸಿರಾಗಿ ನಮ್ಮ ಮನದಲ್ಲಿರುತ್ತದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ

ಇಂತಿ ದುಃಖತಪ್ತರು : ಪತ್ನಿ ಶ್ರೀಮತಿ ಮಹದೇವಮ್ಮ
ಶ್ರೀಮತಿ ಶಶಿಕಲಾ ಮತ್ತು ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶಾಸಕರು, ಮಳವಳ್ಳಿ ಕ್ಷೇತ್ರ
ಮಾಜಿ ಸಚಿವರು ಹಾಗೂ ಅಧ್ಯಕ್ಷರು, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಮೊಮ್ಮಕ್ಕಳು ಸಂಜನಾ, ಮೇಘನಾ, ಯುವರಾಜ್
ಶ್ರೀಮತಿ ಜ್ಯೋತಿ ಮತ್ತು ಶ್ರೀ ಪಿ.ಎಂ. ಪರಶಿವಮೂರ್ತಿ
ಮೊಮ್ಮಕ್ಕಳು ಅಕ್ಷತಾ, ಆಕಾಶ್
ಶ್ರೀಮತಿ ಪಿ.ಎಂ. ಭಾರತಿ ಸೋಮಸುಂದರ್, ಮತ್ತು ಮಕ್ಕಳು, ಸಹೋದರರು–ಸಹೋದರಿಯರು
ಕುಟುಂಬ ವರ್ಗದವರು ಹಾಗೂ ಪುರಿಗಾಲಿ ಗ್ರಾಮಸ್ಥರು

ಗೌರವಾನ್ವಿತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೈಸೂರು

ಹೆಚ್.ಆರ್.ಸಿ ಸಂಖ್ಯೆ: 10/2015

ಅರ್ಜಿದಾರರು : **1** ಶ್ರೀ. ಪಿ. ರಾಜಪ್ಪ ಬಿನ್ ದಾಸಪ್ಪ ವಯಸ್ಸು ಸುಮಾರು 66 ವರ್ಷ ವಾಸ: ಮನೆ ನಂ. 144, ಕೆ.ಬಿ.ಎಲ್. ಲೇಔಟ್, ಬನ್ನೂರು ರಸ್ತೆ, ಆಲನಹಳ್ಳಿ, ಮೈಸೂರು.
2. ಶ್ರೀಮತಿ ಇಂದಿರಾ ಪ್ರಿಯದರ್ಶಿನಿ. ಎನ್.ಟಿ. ಕೋಂ ರಾಮೇಗೌಡ ವಯಸ್ಸು ಸುಮಾರು 47 ವರ್ಷ ವಾಸ: ನಲ್ಲೇನಹಳ್ಳಿ ಗ್ರಾಮ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
3. ಶ್ರೀಮತಿ ಪುಷ್ಪಲತಾ ಕುಮಾರಿ.ಎನ್.ಟಿ. ಕೋಂ ದೇವರಾಜು. ಸಿ.ಟಿ. ವಯಸ್ಸು ಸುಮಾರು 43 ವರ್ಷ ವಾಸ: ಚಂದಗಿರಿಕೊಪ್ಪಲು, ಬಲ್ಲೇನಹಳ್ಳಿ ಅಂಚೆ, ಕೆ. ಶೆಟ್ಟಹಳ್ಳಿ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ವಿರುದ್ಧ

ಎದುರುದಾರರು: ಶ್ರೀಮತಿ. ಜಯಮ್ಮ ಪೌತಿ ಇವರ ವಾರಸುದಾರರು 1(ಎ) ಎದುರುದಾರರು ಕುಮಾರಿ ಕೋಂ ಲೇಟ್ ಮಂಜುನಾಥ D/in-law of ಜಯಮ್ಮ ವಯಸ್ಸು ಸುಮಾರು 61 ವರ್ಷ ವಾಸ: ಹಳೆಹುಂಡವಾಡಿ ಗ್ರಾಮ, ಕೆ.ಆರ್.ಎಸ್.ಅಂಚೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಎದುರುದಾರರ ವಿರುದ್ಧ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ [illegible] ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು [illegible] 1(ಎ) ಎದುರುದಾರರು [illegible] ನ್ಯಾಯಾಲಯದ ಸಮನ್ಸ್ ಮತ್ತು ನೋಟಿಸ್ [illegible] ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ರ [illegible] 1(ಎ) ಎದುರುದಾರರಿಗೆ [illegible] 'ಮೈಸೂರು ಮಿತ್ರ' ಕನ್ನಡ ದಿನ ಪತ್ರಿಕೆಗೆ ಪ್ರಕಟಣೆಗಾಗಿ ಆದೇಶ ಮಾಡಿರುತ್ತದೆ. ಆದ್ದರಿಂದ 1 (ಎ) ಎದುರುದಾರರಾದ ನೀವು ದಿನಾಂಕ 04-09-2025 ರಂದು ಬೆಳಿಗ್ಗೆ 11.00 ಗಂಟೆಗೆ [illegible]

ಷೆಡ್ಯೂಲ್

ಮೈಸೂರು ಸಿಟಿ, ಗಾಯತ್ರಿಪುರಂ, 1ನೇ ಹಂತ, 6ನೇ ಕ್ರಾಸ್, ಮನೆ ನಂ. 223 ರ ವಿಸ್ತೀರ್ಣ 37*30 ಅಡಿ ಅಳತೆವುಳ್ಳ ನೆಲ ಅಂತಸ್ತಿನ ಮನೆಗೆ ಚೆಕ್ಕುಬಂಧಿ: ಪೂರ್ವಕ್ಕೆ : ನಂ. 224, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಂ. 222, ದಕ್ಷಿಣಕ್ಕೆ: ರಸ್ತೆ.

ನ್ಯಾಯಾಲಯದ ಆದೇಶದ ಮೇರೆಗೆ
ಗೌರವಾನ್ವಿತ 6ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು
2 ಮತ್ತು 3ನೇ ಅರ್ಜಿದಾರರ ಪರ ವಕೀಲರು
ಶ್ರೀ ಎನ್.ಎಸ್. ಚೇತನ್‌ಕುಮಾರ್
ವಕೀಲರು
ನಂ. 2798, 2ನೇ ಮಹಡಿ, 2ನೇ ಮುಖ್ಯ ರಸ್ತೆ, ಜಯನಗರ, ಮೈಸೂರು.
ದಿನಾಂಕ: 30-07-2025
ಮೈಸೂರು

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

Email: ceo_zp_mys@nic.in, zpmysceo@gmail.com,
Ph: 0821-2330052

ಸಂಖ್ಯೆ: ಇಎಸ್‌ಟಿ(1)/32649/2025–26 ದಿನಾಂಕ: 02.08.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ವಿಷಯ: ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯುವ ಬಗ್ಗೆ.
ವೆಬ್‌ಸೈಟ್: https://kppp.karnataka.gov.in ಇ.ಎಂ.ಡಿ. ಮೊತ್ತ ರೂ.1,59,000/–(ಒಂದು ಲಕ್ಷದ ಐವತ್ತೊಂಭತ್ತು ಸಾವಿರ ರೂ.ಗಳು ಮಾತ್ರ)
ಟೆಂಡರ್ ಸಲ್ಲಿಸಲು ಕೊನೆಯ ದಿ: 13.08.2025ರ ಪೂರ್ವಾಹ್ನ 11:00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿ: 21.08.2025ರ ಪೂರ್ವಾಹ್ನ 10:00 ಗಂಟೆ
ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ,
ಜಿಲ್ಲಾ ಪಂಚಾಯತ್, ಮೈಸೂರು

DIPR/DDMYS/04/KSMCA/426/2025-26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್.ಸ್ಟೇಷನ್ ಎದುರು, ಹೈಟೆನ್ಷನ್, ಕೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ – 570018
ಕಛೇರಿ : 0821-2001737, ಇಮೇಲ್ : ka.hootagalli.cmc@gmail.com

ಸಂ: ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್–02/2025–26 ದಿನಾಂಕ: 04.08.2025

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ. ಅನುದಾನ 2025–26 ಹಾಗೂ ನಗರಸಭಾ ಸಾಮಾನ್ಯ ನಿಧಿ ಅನುದಾನದಡಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–01 ನಿಯಮದಂತೆ ಇ–ಪೋರ್ಟಲ್ ಮೂಲಕ ಐಟಂವಾರು ಟೆಂಡರ್ ಕರೆಯಲಾಗಿದ್ದು, ಸಿವಿಲ್ ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್‌ಗಳನ್ನ ಸಲ್ಲಿಸುವ ಕೊನೆಯ **ದಿನಾಂಕ:19/08/2025 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್‌ಗಳನ್ನು ತೆರೆಯುವ **ದಿನಾಂಕ:21/08/2025 ಬೆಳಗ್ಗೆ 10:30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ. ಕಾಮಗಾರಿಗಳಿಗೆ ಜಿ.ಎಸ್.ಟಿಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಕ್ರ. ಸಂ.	ಕಾಮಗಾರಿಗಳ ಇಂಡೆಂಟ್ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ)	ಮೀಸಲಾತಿ
1	DMA/2025-26/WS/WORK_INDENT46786	12.30	26,100/-	ಸಾಮಾನ್ಯ
2	DMA/2025-26/WS/WORK_INDENT46787	14.00	29,700/-	ಸಾಮಾನ್ಯ
3	DMA/2025-26/OW/WORK_INDENT46828/CALL-2	10.00	21,200/-	ಸಾಮಾನ್ಯ
4	DMA/2025-26/OW/WORK_INDENT46803	10.00	10,600/-	CAT-1

ಸಹಿ/– ಪೌರಾಯುಕ್ತರು,
ನಗರಸಭೆ, ಹೂಟಗಳ್ಳಿ

DIPR/MYS/KAVITA/753/24-25

ಖಾಸಗಿ ತೋಟಕ್ಕೆ ಅಳವಡಿಸಿದ್ದ ನಾಮಫಲಕ ತೆರವು

ವಿರಾಜಪೇಟೆ, ಆ.5–ಸರಕಾರಿ ಜಾಗ ಎಂದು ಅನಧಿಕೃತವಾಗಿ ನಾಮಫಲಕ ಹಾಕಿದ್ದನ್ನು ವಿರೋಧಿಸಿ ನಿವೃತ್ತ ಯೋಧರೊಬ್ಬರು ಮಾಡಿದ ಮನವಿಗೆ ಮಣಿದು ತಹಶೀಲ್ದಾರ್ ಅದನ್ನು ತೆರವುಗೊಳಿಸಿದ ಪ್ರಸಂಗವೊಂದು ಮಂಗಳವಾರ ಪಟ್ಟಣದಲ್ಲಿ ನಡೆದಿದೆ.

ತಾಲೂಕಿನ ಬಾಳಗೋಡು ನಾಂಗಲ ಗ್ರಾಮದ ನಿ.ಮೇಜರ್ ಸುಶೀಲಾ ರಾಮ್‌ದಾಸ್ ರವರಿಗೆ ಸೇರಿದ ಖಾಸಗಿ ತೋಟಕ್ಕೆ ಕಂದಾಯ ಅಧಿಕಾರಿಗಳು ಸರಕಾರಿ [ಪೈಸಾರಿ]ಜಾಗ ಇಲ್ಲಿಗೆ ಅತಿಕ್ರಮ ಪ್ರವೇಶ ನಿಷೇಧಿಸಿದ್ದು ಜಾಗದ ಒತ್ತುವರಿ ಕಂಡು ಬಂದಲ್ಲಿ ಕರ್ನಾಟಕ ಭೂ ಕಂದಾಯ ಕಾನೂನು ಅಡಿಯಲ್ಲಿ ಶಿಕ್ಷೆ ವಿಧಿಸಲಾಗುವುದೆಂದು ನಾಲ್ಕು ತಿಂಗಳ ಹಿಂದೆ ನಾಮಫಲಕ ಅಳವಡಿಸಿದ್ದರು. ಕಾಫಿ ತೋಟದ ಮಾಲಿಕರಾದ ಮೇಜರ್ ಸುಶೀಲಾ ರಾಮ್‌ದಾಸ್ ವಕೀಲರೊಂದಿಗೆ ತಹಶೀಲ್ದಾರ್ ಅನಂತ ಶಂಕರ ಅವರನ್ನು ಭೇಟಿ ಮಾಡಿ ತಮ್ಮ ತೋಟದ ದಾಖಲಾತಿಗಳನ್ನು ತೋರಿಸಿ ನಾನು ಒಬ್ಬ ಯೋಧನಾಗಿ ಚೀನಾ ಮತ್ತು ಬಾಂಗ್ಲಾ ದೇಶದ ಗಡಿಯಲ್ಲಿ ಕಾರ್ಯನಿರ್ವಹಿಸಿ ಬಂದಿದ್ದೇನೆ ನನಗೆ 74 ವರ್ಷ ನನ್ನ ಜಾಗದ ವಿಚಾರದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ತುಂಬ ಹಿಂಸೆ ನೀಡುತ್ತಿದ್ದಾರೆ ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದ್ದರು.



ತಹಶೀಲ್ದಾರ್ ಬಳಿ ತೋಟದ ಮಾಲೀಕರಾದ ನಿ.ಮೇಜರ್ ಸುಶೀಲಾ ರಾಮ್‌ದಾಸ್ ಅಲಳು ತೋಡಿಕೊಳ್ಳುತ್ತಿರುವುದು.

ಸಿಬ್ಬಂದಿ ವಿರುದ್ಧ ಶಿಸ್ತಿನ ಕ್ರಮ

ನಮ್ಮ ಸಿಬ್ಬಂದಿಗಳು ಮಾಡಿದ ಎಡವಟ್ಟಿನಿಂದ ಈ ಸಮಸ್ಯೆಯಾಗಿ ಮೇಜರ್ ಸುಶೀಲಾ ರಾಮ್‌ದಾಸ್‌ರವರಿಗೆ ತೊಂದರೆಯಾಗಿದೆ. ಈ ನಾಮಫಲಕ ಅಳವಡಿಸಿದ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸುವುದಾಗಿ ತಹಶೀಲ್ದಾರ್ ಪತ್ರಕರ್ತರಿಗೆ ಭರವಸೆ ನೀಡಿದರು.

ತಹಶೀಲ್ದಾರ್ ಅನಂತ ಶಂಕರ, ಕಂದಾಯ ಪರಿವೀಕ್ಷಕ ಹರೀಶ್ ಮತ್ತು ಸರ್ವೆ ಅಧಿಕಾರಿಗಳು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿದಾಗ ಸ,ನಂ,136/1ರಲ್ಲಿ ನನ್ನದು ಸೇರಿ ಇತರರ ತೋಟಗಳಿದ್ದು ಅಲ್ಲಿ ಏಕೆ ನಾಮಫಲಕ ಅಳವಡಿಸಿಲ್ಲ ಹಲವು ವರ್ಷಗಳಿಂದ ತೋಟದಲ್ಲಿ ಕೆಲಸ ಮಾಡಿಕೊಂಡು ಫಸಲು ಕೊಯ್ಯುತ್ತಿದ್ದೇನೆ ಇತ್ತೀಚೆಗೆ ಅಧಿಕಾರಿಗಳು ಬಂದು ಸರಕಾರಿ ಜಾಗ ಎಂದು ತೋಟದ ಮಧ್ಯಭಾಗದಲ್ಲಿ ನಾಮಫಲಕ ಅಳವಡಿಸಿರುವುದು ಸರಿಯಲ್ಲ ನಿಮ್ಮ ಕಂದಾಯ ಅಧಿಕಾರಿಗಳು ಕೆಲವು ವರ್ಷಗಳಿಂದ ನೀಡುತ್ತಿರುವ ಹಿಂಸೆ ಸಹಿಸಲಾರದೆ ತೊಟವನ್ನು ಮಾರಿ ಹೋಗುತ್ತೇನೆ ಎಂದು ದುಃಖ ವ್ಯಕ್ತಪಡಿಸಿಕೊಂಡಾಗ ಕಂದಾಯ ಇಲಾಖೆಯಿಂದ ಸರ್ವೆ ನಂಬರ್ ಬದಲಾಗಿದೆ ಈಗ ಹಾಕಿರುವ ನಾಮಫಲಕವನ್ನು ತೆರವುಗೊಳಿಸುವಂತೆ ಸಿಬ್ಬಂದಿಗಳಿಗೆ ಸೂಚಿಸಿದರು.



ಕೊಡಗಿಗೂ ತಟ್ಟಿದ ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರ ಬಿಸಿ

ಮಡಿಕೇರಿ, ಆ.5– ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಡೆಯುತ್ತಿರುವ ಮುಷ್ಕರದ ಬಿಸಿ ಕೊಡಗು ಜಿಲ್ಲೆಗೂ ತಟ್ಟಿತ್ತು. ಜಿಲ್ಲೆಯ ಗ್ರಾಮೀಣ ಭಾಗಗಳಿಗೆ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳು ಬೆಳಗಿನ 8 ಗಂಟೆಯವರೆಗೆ ಸೇವೆ ನೀಡಿದರೂ ನಂತರ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಇನ್ನು ಶಾಲಾ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಂಚರಿಸುವ ಬಸ್‌ಗಳನ್ನು ಡಿಪೋ ವ್ಯವಸ್ಥಾಪಕರ ಕೋರಿಕೆ ಮತ್ತು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಆ ಮಾರ್ಗಗಳಲ್ಲಿ ಕೊಂಡೊಯ್ಯಲಾಗಿತ್ತು.

ಬಂದ್ ಮಾಹಿತಿ ಇಲ್ಲದೆ ಬಸ್ ನಿಲ್ದಾಣಗಳಲ್ಲಿ ವಿವಿಧ ಊರಿಗಳಿಗೆ ತೆರಳಲು ಪ್ರಯಾಣಿಕರು ಕಾದು ಕುಳಿತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಪುತ್ತೂರು ಡಿಪೋದ ಮಡಿಕೇರಿ ಘಟಕದ ಮೂಲಕ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಗೆ ಒಟ್ಟು 130 ಬಸ್ ಮಾರ್ಗಗಳಿದ್ದು, ಈ ಪೈಕಿ 64 ಮಾರ್ಗಗಳು ಮಡಿಕೇರಿ ಘಟಕದಿಂದ ನಿರ್ವಹಿಸಲಾಗುತ್ತಿವೆ. ಬಂದ್ ಹಿನ್ನೆಲೆಯಲ್ಲಿ ಬಹುತೇಕ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಹೊರ ಭಾಗಗಳಿಂದ ನಿಲ್ದಾಣಕ್ಕೆ ಆಗಮಿಸಿದ ಬಸ್‌ಗಳು ಸಂಚಾರಿ ನಿಯಂತ್ರಕರಲ್ಲಿ ನೋಂದಾಯಿಸಿಕೊಂಡು ಇಲ್ಲಿಯೇ ಉಳಿದು ಬಂದ್‌ಗೆ ಚಾಲಕರು ಮತ್ತು ನಿರ್ವಾಹಕರು ಕೈ ಜೋಡಿಸಿದರು.



ಮಡಿಕೇರಿಯ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿತ್ತು.

ಖಾಸಗಿ ಮತ್ತು ಸರಕಾರಿ ಒಪ್ಪಂದದಲ್ಲಿ ಸಂಚರಿಸುವ ಪವರ್ ಫ್ಲಸ್ ಬ್ಯಾಟರಿ ಚಾಲಿತ ಬಸ್ ಮಾತ್ರವೇ ಪ್ರಯಾಣಿಕರನ್ನು ತುಂಬಿಕೊಂಡು ತನ್ನ ನಿಗಧಿತ ಗಮ್ಯವಾದ ಬೆಂಗಳೂರು ಕಡೆಗೆ ಮಡಿಕೇರಿ ನಿಲ್ದಾಣದಿಂದ ತೆರಳಿದ್ದು ಕಂಡು ಬಂತು. ಮುಷ್ಕರದ ಹಿನ್ನೆಲೆಯಲ್ಲಿ ನಿಲ್ದಾಣಗಳಲ್ಲಿ ಎಂದಿನಂತೆ ಪ್ರಯಾಣಿಕರ ಜಂಗುಳಿ ಕಂಡು ಬರಲಿಲ್ಲ. ಬಸ್ ಡಿಪೋ, ನಿಲ್ದಾಣಗಳಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗದಂತೆ ಹೆಚ್ಚುವರಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

ಖಾಸಗಿ ವಾಹನಗಳಿಗೆ ಅವಕಾಶ: ಕೆಎಸ್‌ಆರ್‌ಟಿಸಿ ಬಸ್ ಸೇವೆ ಸ್ಥಗಿತವಾಗಿದ್ದ ಹಿನ್ನೆಲೆಯಲ್ಲಿ ಎಲ್ಲಾ ಬಸ್ ನಿಲ್ದಾಣಗಳ ಮೂಲಕ ಖಾಸಗಿ ಬಸ್‌ಗಳು, ಮಿನಿ ಬಸ್, ಮ್ಯಾಕ್ಸಿ ಕ್ಯಾಬ್, ಟೆಂಪೋ ಟ್ರಾವೆಲರ್ಸ್‌ಗಳಿಗೆ ಪ್ರಯಾಣಿಕರನ್ನು ಕರೆದೊಯ್ಯಲು ಸಾರಿಗೆ ಇಲಾಖೆ ಅವಕಾಶ ಒದಗಿಸಿತ್ತು. ಈ ಹಿನ್ನೆಲೆಯಲ್ಲಿ ಖಾಸಗಿ ಬಸ್‌ಗಳು ಕೂಡ ಕೆಎಸ್‌ಆರ್‌ಟಿಸಿ ನಿಲ್ದಾಣದ ಮುಂಭಾಗ ಮಡಿಕೇರಿ–ಕುಶಾಲನಗರ, ಮಡಿಕೇರಿ–ಸುಳ್ಯ, ಮಡಿಕೇರಿ–ಮೈಸೂರು ಮಾರ್ಗಗಳಲ್ಲಿ ಪ್ರಯಾಣಿಕರ ಸೇವೆ ಒದಗಿಸಿದವು.

ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟದಿದ್ದರೆ ಬಂದ್‌ಗೆ ಕರೆ : ಎಚ್ಚರಿಕೆ

ಮಡಿಕೇರಿ, ಆ.5– ಜಿಲ್ಲೆಯಲ್ಲಿ ಕಾಡು ಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟದಿದ್ದಲ್ಲಿ ಕೊಡಗು ಬಂದ್‌ಗೆ ಕರೆ ನೀಡುವ ಮೂಲಕ ಬೃಹತ್ ಹೋರಾಟ ಮಾಡಬೇಕಾಗುತ್ತದೆ ಎಂದು ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಎಚ್ಚರಿಸಿದ್ದಾರೆ

ಮಾನವ ಹಾಗೂ ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ತಿತಿಮತಿಯಲ್ಲಿ ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಅರಣ್ಯ ಭವನದ ಆವರಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿದ್ದ ರೈತರು ಅರಣ್ಯ ಇಲಾಖೆ ಯಾವುದೇ ಶಾಶ್ವತ ಯೋಜನೆಗಳನ್ನು ರೂಪಿಸದೆ ಅವೈಜ್ಞಾನಿಕ ಕಾಮಗಾರಿಗಳನ್ನು ನಡೆಸುವ ಮೂಲಕ ಜನರ ತೆರಿಗೆ ಹಣವನ್ನು ಪೋಲು ಮಾಡುತ್ತಿದ್ದು, ಯೋಜನೆಯ ಹಣವನ್ನು ಅಧಿಕಾರಿಗಳು ಭ್ರಷ್ಟಾಚಾರದ ಮೂಲಕ ಕಬಳಿಸುತ್ತಿದ್ದಾರೆ. ಜನರ ತಾಳ್ಮೆಯನ್ನು ಪರೀಕ್ಷೆ ಮಾಡದೆ ಕಾಡುಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟದಿದ್ದಲ್ಲಿ ಬೃಹತ್ ಹೋರಾಟದೊಂದಿಗೆ ಕೊಡಗು ಬಂದ್‌ಗೆ ಕರೆ ನೀಡುವ ಮೂಲಕ ಜಿಲ್ಲೆಯ ಜನರನ್ನು ಒಗ್ಗೂಡಿಸಿ ಬೃಹತ್ ಹೋರಾಟ ಮಾಡಬೇಕಾಗುತ್ತದೆ ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಎಚ್ಚರಿಸಿದರು.

ಕಾರ್ಮಿಕ ಸಂಘಟನೆಯ ಮುಖಂಡ ಪಿ.ಆರ್.ಭರತ್ ಮಾತನಾಡಿ ಹೊಟ್ಟೆಪಾಡಿನ ಜೀವನಕ್ಕಾಗಿ ಕೆಲಸಕ್ಕೆ ತೆರಳುವ ಕಾರ್ಮಿಕರು ಕಾಡು ಪ್ರಾಣಿಗಳ ಹಾವಳಿಯಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.



ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಿತಿಮತಿಯಲ್ಲಿ ರೈತ ಸಂಘದ ಕಾರ್ಯಕರ್ತರು ಪ್ರತಿಭಟಿಸಿದರು

ಇಂದು ಶಾಲಾ ಕಾಲೇಜುಗಳಿಗೆ ರಜೆ

ಮಡಿಕೇರಿ, ಆ.5– ಕೊಡಗಿನಲ್ಲಿ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಆರೆಂಜ್ ಅಲರ್ಟ್ ಎಂದು ಹವಾಮಾನ ಇಲಾಖೆ ಘೋಷಿಸಿದೆ. ಜಿಲ್ಲೆಯ ಎಲ್ಲಾ ಶಾಲಾ ಕಾಲೇಜು, ಅಂಗನವಾಡಿ ಸಂಸ್ಥೆಗಳಿಗೆ ನಾಳೆ ರಜೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟರಾಜ ಆದೇಶ ನೀಡಿದ್ದಾರೆ.

ಸಾರಿಗೆ ಬಸ್ ಸಂಚಾರ ಸ್ಥಗಿತ: ಪ್ರಯಾಣಿಕರ ಪರದಾಟ

ಮಂಡ್ಯ, ಆ.5– ಸಾರಿಗೆ ನೌಕರರ ಮುಷ್ಕರ ಹಿನ್ನೆಲೆಯಲ್ಲಿ ಜಿಲ್ಲೆಯ ಮಂಡ್ಯ ನಗರ ಸೇರಿದಂತೆ ಎಲ್ಲಾ ತಾಲೂಕುಗಳಲ್ಲೂ ಸಾರಿಗೆ ಸೇವೆ ಸ್ತಬ್ಧವಾಗಿ ಪ್ರಯಾಣಿಕರು ಪರದಾಡುವಂತಾಯಿತು.

ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಬಸ್‌ಗಳು ನಿಂತಲ್ಲಿಯೇ ನಿಂತಿದ್ದವು. ಪ್ರಯಾಣಿಕರು ಬಸ್‌ಗಾಗಿ ಕಾಯುತ್ತಿದ್ದದ್ದು ಕಂಡು ಬಂತು. ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಬಸ್‌ಗಳು, ಆಟೋಗಳು ಸಂಚರಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಸಾರಿಗೆ ನೌಕರರ ಮುಷ್ಕರ ಗೊತ್ತಿಲ್ಲದೆ ಪ್ರಯಾಣಿಕರು ನಗರಕ್ಕೆ ಆಗಮಿಸಿದ್ದರು. ಅಲ್ಲದೇ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಬಸ್‌ಗಳಿಲ್ಲದೆ ತೊಂದರೆ ಅನುಭವಿಸಿದರು. ಒಂದು ಸಾರಿಗೆ ಬಸ್‌ಗಳು ಕೂಡ ರಸ್ತೆಗಿಳಿಯಲಿಲ್ಲ. ಬೆಳಗ್ಗೆ ಕೆಲವು ಬೆರಳೆಣಿಕೆ ಬಸ್‌ಗಳು ಮಾತ್ರ ಸಂಚರಿಸುತ್ತಿದ್ದವು. ನಂತರ ಅವು ಕೂಡ ಸಂಚಾರ ನಿಲ್ಲಿಸಿದವು. ಇದರಿಂದ ಕೆಲಸಕ್ಕೆ ತೆರಳಬೇಕಾದ ಕಾರ್ಮಿಕರು, ಸರ್ಕಾರಿ ನೌಕರರು, ಕಾರ್ಖಾನೆಗಳ ಕಾರ್ಮಿಕರು, ಮಂಡ್ಯದಿಂದ ಬೆಂಗಳೂರು ಹಾಗೂ ಮೈಸೂರಿಗೆ ತೆರಳಲು ಬಸ್‌ಗಾಗಿ ಕಾದು ನಿಂತಿದ್ದರು. ಅಲ್ಲದೆ ಖಾಸಗಿ ಬಸ್‌ಗಳ ಮೊರೆ ಹೋಗಬೇಕಾಯಿತು. ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆಯಾಗದಂತೆ ಜಿಲ್ಲಾಡಳಿತ ಖಾಸಗಿ ಬಸ್‌ಗಳ ಸೌಲಭ್ಯ ಕಲ್ಪಿಸಿತ್ತು. ಇದರಿಂದ ಪ್ರಯಾಣಿಕರು ಕೊಂಚ ನಿರಾಳರಾದರು. ನಂತರ ಖಾಸಗಿ ಬಸ್‌ಗಳು ಸಂಚರಿಸಿದವು. ಯಾವುದೇ ದುಪ್ಪಟ್ಟು ದರ ಪಡೆಯದಂತೆ ಸೂಚನೆ ನೀಡಲಾಗಿತ್ತು.



ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಜಿಲ್ಲಾಧಿಕಾರಿ ಪರಿಶೀಲನೆ: ಕೆಎಸ್‌ಆರ್‌ಟಿಸಿ ನೌಕರರು ಮುಷ್ಕರಕ್ಕೆ ಕರೆ ನೀಡಿರುವ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಮಾಡಿರುವ ವ್ಯವಸ್ಥೆ ಕುರಿತು ಜಿಲ್ಲಾಧಿಕಾರಿ ಡಾ.ಕುಮಾರ್ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಅವರು, ರಾಜ್ಯಾದ್ಯಂತ ಕೆಎಸ್‌ಆರ್‌ಟಿಸಿ ವಾಹನ ಚಾಲಕರು ಹಾಗೂ ನಿರ್ವಾಹಕರು ಮುಷ್ಕರಕ್ಕೆ ಕರೆ ನೀಡಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಮಂಡ್ಯ ವಿಭಾಗ ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಕರೊಂದಿಗೆ ಸಭೆ ನಡೆಸಿದರು.

ಮಂಡ್ಯ ವಿಭಾಗ ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಕರು ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಎಲ್ಲರೂ ಕೆಲಸಕ್ಕೆ ಹಾಜರಾಗುವಂತೆ ಬೆಳಗ್ಗೆಯಿಂದಲೇ ಕರೆ ಮಾಡಿ ಮನವಿ ಮಾಡಿದರೂ ಯಾರೂ ಕೆಲಸಕ್ಕೆ ಹಾಜರಾಗಿಲ್ಲ ಎಂದರು.

ಜಿಲ್ಲೆಯಲ್ಲಿ 215 ಖಾಸಗಿ ಬಸ್, 272 ಮಿನಿ ಬಸ್‌ಗಳಿದ್ದು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಖಾಸಗಿ ಬಸ್ ವ್ಯವಸ್ಥೆ ಮಾಡಲಾಗಿದೆ. ಕೆಎಸ್‌ಆರ್‌ಟಿಸಿಯಲ್ಲಿ 525 ಬಸ್‌ಗಳು 475 ರೂಟ್‌ಗಳಿದ್ದು, ಎಲ್ಲ ಮಾರ್ಗಗಳಿಗೆ ಅನುಗುಣವಾಗಿ ಖಾಸಗಿ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಟೋ ರಿಕ್ಷಾ ಹಾಗೂ ಖಾಸಗಿ ಬಸ್‌ಗಳ ನಿರ್ವಾಹಕರೊಂದಿಗೆ ಈಗಾಗಲೇ ಚರ್ಚಿಸಿ ಸಾರ್ವಜನಿಕರಿಗೆ ಹೆಚ್ಚಿನ ದರ ವಿಧಿಸಬಾರದು ಎಂದು ಸೂಚನೆ ನೀಡಲಾಗಿದೆ ಎಂದರು.

ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳು ಕೆಲಸಕ್ಕೆ ಹಾಜರಾಗದಿದ್ದರೆ ವೇತನ ಕಡಿತಗೊಳಿಸುವಂತೆ ಸರ್ಕಾರ ಆದೇಶ ಮಾಡಿದೆ. ಸಿಬ್ಬಂದಿಗಳು ಸಹ ಸಾರ್ವಜನಿಕರ ಕಷ್ಟ ಅರ್ಥ ಮಾಡಿಕೊಂಡು ಕೆಲಸಕ್ಕೆ ಹಾಜರಾಗುವಂತೆ ಮನವಿ ಮಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಕ ನಾಗರಾಜು ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಆ.5– ವಿಕಲಚೇತನರ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಜಿಲ್ಲೆಯ ನಗರಸಭೆ ವ್ಯಾಪ್ತಿಯಲ್ಲಿ ವಿಕಲಚೇತನರ ಕೆಲಸ ಕಾರ್ಯಗಳನ್ನು ಮಾಡಲು ಖಾಲಿ ಇರುವ ನಗರ ಪುನರ್ವಸತಿ ಕಾರ್ಯಕರ್ತರ ಹುದ್ದೆಗೆ ಗೌರವಧನ ಪಾವತಿ ಆಧಾರದ ಮೇಲೆ ನಗರ ಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಅರ್ಹ ವಿಕಲಚೇತನರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೆ ದಿನ. ಹೆಚ್ಚಿನ ಮಾಹಿತಿಗೆ ದೂ.ಸಂ: 9480075940 / 08232–239234 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.



ಮಾಜಿ ಸಚಿವ ಸಿಎಸ್‌ಪಿಗೆ ಸನ್ಮಾನ

ಪಾಂಡವಪುರದಲ್ಲಿ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು. ಪತ್ರಕರ್ತರಾದ ಸಂಘದ ಅಧ್ಯಕ್ಷ ಚಂದ್ರಕೀರ್ತಿ, ಬಿ.ಎಸ್.ಜಯರಾಂ, ಚಿನಕುರಳಿ ಲೋಕೇಶ್, ಎಸ್.ನಾಗಸುಂದರ್, ಚನ್ನಮಾದೇಗೌಡ, ರಮೇಶ್, ಕುಮಾರ್, ರಘುವೀರ್, ಎಸ್.ರವಿಕುಮಾರ್, ಅನಿಲ್, ಭಾಸ್ಕರ್ ಹಾಜರಿದ್ದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಖಂಡನೆ



ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಪ್ರತಿಭಟಿಸಲಾಯಿತು.

ಭಾರತೀನಗರ, ಆ.5– ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದರಿಂದ ಕೃಷಿ ಕೂಲಿಕಾರರು ತತ್ತರಿಸುವಂತಾಗಿದೆ ಎಂದು ಕೃಷಿ ಕೂಲಿಕಾರರ ಸಂಘದ ತಾಲೂಕು ಕಾರ್ಯದರ್ಶಿ ಟಿ.ಪಿ.ಅರುಣ್‌ಕುಮಾರ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಗ್ರಾಪಂ ವ್ಯಾಪ್ತಿಯ 3 ಘಟಕಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡದೆ ನಿರ್ಲಕ್ಷ್ಯ ವಹಿಸುತ್ತಿರುವ ಸರ್ಕಾರ ಆಹಾರ ಪದಾರ್ಥಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರು ವುದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ ಎಂದರು.

ಕೃಷಿ ಕೂಲಿಕಾರರು ಪ್ರತಿ ದಿನ 4 ಗಂಟೆ ಮಾಡುತ್ತಿದ್ದ ಕೆಲಸದ ಅವಧಿಯನ್ನು 8 ಗಂಟೆಗೆ ಹೆಚ್ಚಿರುವುದು ಸರಿಯಲ್ಲ. ಉದ್ಯೋಗ ಖಾತರಿ ಯೋಜನೆಯನ್ನು ನಿರ್ನಾಮ ಮಾಡಲು ಕೇಂದ್ರ ಸರ್ಕಾರ ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿದ ಅವರು ವರ್ಷಕ್ಕೆ 200 ದಿನ ಕೆಲಸ ನೀಡಿ ಪ್ರತಿ ದಿನ 600 ರೂ. ಕೂಲಿ ನೀಡಬೇಕೆಂದು ಆಗ್ರಹಿಸಿದರು.

ಕೃಷಿ ರಕ್ಷಿಸಬೇಕಾದ ಸರ್ಕಾರ ಕೃಷಿ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ಕೃಷಿ ರಂಗ ನಾಶ ಪಡಿಸುತ್ತಿದೆ. ರೈತ ಕೂಲಿಕಾರರನ್ನು ದಿವಾಳಿ ಮಾಡಲು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ಬಡ ಹಾಗೂ ಮಧ್ಯಮ ವರ್ಗದ ಜನರು ಜೀವನ ನಡೆಸುವುದೇ ಕಷ್ಟ ಸಾಧ್ಯವಾಗಿದ್ದು, ಉಳ್ಳುವರಿಗಾಗಿ ಇರುವ ಕೇಂದ್ರ ಸರ್ಕಾರ ನೊಂದವರ ನೆರವಿಗೆ ಧಾವಿಸುವ ಮೂಲಕ ದಿನ ಬಳಕೆ ಪದಾರ್ಥಗಳ ಬೆಲೆ ಕಡಿತಕ್ಕೆ ಕ್ರಮವಹಿಸಬೇಕೆಂದರು.

ಕೃಷಿ ಕೂಲಿಕಾರರ ಸಂಘದ ಹಿರಿಯ ಮುಖಂಡ ನಿಂಗೇಗೌಡ ಧ್ವಜಾರೋಹಣ ನೆರವೇರಿಸಿದರು. ಸಮ್ಮೇಳನದಲ್ಲಿ ಕಾಡುಕೊತ್ತನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ 3 ಘಟಕಗಳನ್ನು ಸ್ಥಾಪನೆ ಮಾಡಲಾಯಿತು.

ಈ ವೇಳೆ ಕೃಷಿ ಕೂಲಿಕಾರರ ಸಂಘದ ಘಟಕದ ಅಧ್ಯಕ್ಷ ಸುಧಾ, ಉಪಾಧ್ಯಕ್ಷ ಕಪನೀಗೌಡ, ಕಾರ್ಯದರ್ಶಿ ಮಹದೇವಮ್ಮ, ಸದಸ್ಯರಾದ ಪಲ್ಲವಿ, ನಾಗಣ್ಣ, ರೇಣುಕಾ, ಸಂಪತ್, ಶಂಕರ್, ಅಭಿಲಾಷ್, ಪುಟ್ಟಂಕೇಗೌಡ, ಪಲ್ಲವಿ, ನಾಗರಾಜು, ಸುಗುಣ, ಜಯಮ್ಮ ಸೇರಿದಂತೆ ಹಲವರಿದ್ದರು.

ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆ : ಬಸ್ ಸಂಚಾರ ವಿರಳ

ಚಾಮರಾಜನಗರ, ಆ.5–ವೇತನ ಹೆಚ್ಚಳ ಮತ್ತು ವೇತನ ಬಾಕಿ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಸಾರಿಗೆ ನೌಕರರು ನಡೆಸುತ್ತಿರುವ ಮುಷ್ಕರದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಾರಿಗೆ ಬಸ್‌ಗಳ ಸಂಚಾರ ವಿರಳವಾಗಿತ್ತು.

ಜಿಲ್ಲೆಯ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ಪಟ್ಟಣಗಳಲ್ಲಿ ಬೆರಳೆಣಿಕೆಯಷ್ಟು ಬಸ್ ಸಂಚಾರ ಮಾತ್ರ ಇದ್ದುದರಿಂದ ಪ್ರಯಾಣಿಕರಿಗೆ ತೊಂದರೆಯಾಯಿತು. ನಗರದಿಂದ ಮೈಸೂರು, ಗುಂಡ್ಲುಪೇಟೆ, ಬೆಂಗಳೂರು ಕಡೆಗೆ ತೆರಳುವ ಪ್ರಯಾಣಿಕರು ತಾಸುಗಟ್ಟಲೆ ಕಾದು ಕಾದು ಸುಸ್ತಾದರು.

ಪೊಲೀಸ್ ಬಂದೋಬಸ್ತ್: ಬಸ್ ನಿಲ್ದಾಣ, ಡಿಪೋದಲ್ಲೇ ಬೆಳಗ್ಗೆಯಿಂದಲೇ ಬಿಗಿ ಪೊಲೀಸ್ ಬಂದೋಬಸ್ತ್ ವಹಿಸಲಾಗಿತ್ತು. ಪೊಲೀಸ್ ಇನ್ಸ್‌ಪೆಕ್ಟರ್ ಗಳ ನೇತೃತ್ವದಲ್ಲಿ ಡಿಎಆರ್ ತುಕಡಿ ನಿಯೋಜಿಸಲಾಗಿತ್ತು. ನಿಗದಿಯಂತೆ ರೂಟ್‌ಗಳಲ್ಲಿ ಸಂಚರಿಸಿ, ಯಾವುದೇ ಭಯ ಬೇಡ ಎಂದು ತಮ್ಮ ಸಿಬ್ಬಂದಿಯನ್ನು ಸಾರಿಗೆ ಅಧಿಕಾರಿಗಳು ಪೊಲೀಸರ ಮೂಲಕ ಮನವೊಲಿಸಿದ ಪರಿಣಾಮ ಮಧ್ಯಾಹ್ನದ ವೇಳೆ ಹೆಚ್ಚಿನ ಬಸ್ ಸಂಚಾರ ಆರಂಭಿಸಿದ್ದರಿಂದ ಪ್ರಯಾಣಿಕರಿಗೆ ಅನುಕೂಲವಾಯಿತು.



ಸಾರಿಗೆ ನೌಕರರ ಮುಷ್ಕರದಿಂದ ಬಸ್ ನಿಲ್ದಾಣ ಪ್ರಯಾಣಿಕರಿಲ್ಲದೆ ಬಿಕೋ ಎನ್ನುವಂತಿತ್ತು.

ಖಾಸಗಿ ಬಸ್‌ಗಳಿಗೆ ಆದಾಯ: ಶಕ್ತಿ ಯೋಜನೆಯಿಂದ ಕಂಗೆಟ್ಟಿದ್ದ ಖಾಸಗಿ ಬಸ್‌ಗಳು ಮಂಗಳವಾರ ಹುರುಪು ಕಂಡವು. ನಗರದಿಂದ ಮೈಸೂರು, ಕೊಳ್ಳೇಗಾಲ, ನಂಜನಗೂಡಿಗೆ ಪ್ರಯಾಣಿಕರು ಖಾಸಗಿ ಬಸ್‌ಗಳ ಮೊರೆ ಹೋದರು. ಬಸ್ ನಿಲ್ದಾಣದ ಮುಂಭಾಗ ನಿಂತ ಹತ್ತಾರು ಖಾಸಗಿ ಬಸ್‌ಗಳಿಗೆ ಪ್ರಯಾಣಿಕರು ಮುಗಿಬಿದ್ದರು.

ಬೆಳಗ್ಗೆ ಮೂರು ಡಿಪೋಗಳಿಂದ 39 ಬಸ್ ಕಾರ್ಯಾಚರಣೆ ಆರಂಭಿಸಬೇಕಿತ್ತು. ಈ ಪೈಕಿ 13 ಬಸ್‌ಗಳು ಮಾತ್ರ ಡಿಪೋದಿಂದ ನಿರ್ಗಮಿಸಿವೆ. ಚಾಲಕರು, ನಿರ್ವಾಹಕರ ಬರುವಿಕೆಗೆ ಕಾಯುತ್ತಿದ್ದೇವೆ. ಕರ್ತವ್ಯಕ್ಕೆ ಹಾಜರಾಗುವಂತೆ ನೌಕರರನ್ನು ಮನವೊಲಿಸುತ್ತಿದ್ದೇವೆ. ನಿನ್ನೆ ರಾತ್ರಿ ಕಾರ್ಯಾಚರಣೆ ಆರಂಭಿಸಿದ್ದ 149 ಬಸ್‌ಗಳ ನೌಕರರು ಕರ್ತವ್ಯದಲ್ಲಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಡಿಸಿ ಅಶೋಕ್ ಕುಮಾರ್ ತಿಳಿಸಿದರು.

ಇಂದು ನಗರಕ್ಕೆ ಸಚಿವ ಸಂತೋಷ್ ಲಾಡ್

ಚಾಮರಾಜನಗರ: ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಅವರು ಆ. 6 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಇಂದು ರಾತ್ರಿ ನಗರದಲ್ಲಿ ವಾಸ್ತವ್ಯ ಹೂಡಿದ್ದು, ಬೆಳಿಗ್ಗೆ 9.30 ಗಂಟೆಗೆ ನಗರದ ಪ್ರವಾಸಿಮಂದಿರದಲ್ಲಿ ಜಿಲ್ಲಾಧಿಕಾರಿಗಳು, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿಗಳು ಮತ್ತು ಎಸ್ಪಿ ಜೊತೆ ಚರ್ಚೆ ನಡೆಸುವರು. 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡುವರು. ಬೆಳಿಗ್ಗೆ 11 ಗಂಟೆಗೆ ಬದನಗುಪ್ಪೆ ಗ್ರಾಮದ ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹಮ್ಮಿಕೊಂಡಿರುವ ಶ್ರಮಿಕ ತಾತ್ಕಾಲಿಕ ವಸತಿ ಸಮುಚ್ಚಯಗಳ ಲೋಕಾರ್ಪಣೆ ಮತ್ತು ಜಿಲ್ಲೆಯ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಮೈಸೂರಿಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

ಜೆಡಿಎಸ್ ಹೆಮ್ಮರವಾಗಿ ಬೆಳೆಯಲಿ : ಶಾಸಕ ಮಂಜುನಾಥ್

ಕೊಳ್ಳೇಗಾಲ, ಆ.5–ಕ್ಷೇತ್ರ ವ್ಯಾಪ್ತಿಯ 3 ತಾಲೂಕುಗಳು ಒಳಪಡುವ ಹಿನ್ನೆಲೆ ಮುಂಬರುವ ಚುನಾವಣೆ ವೇಳೆಗೆ ಪಕ್ಷದ ಕಾರ್ಯಕರ್ತರು, ಸಜ್ಜಾಗುವಂತೆ ಶಾಸಕ ಮಂಜುನಾಥ್ ಕರೆ ನೀಡಿದರು. ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ಜಾ.ದಳ ಆಯೋಜಿಸಿದ್ದ ಪದಗ್ರಹಣ, ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ಈ ಭಾಗದಲ್ಲಿ ಜೆಡಿಎಸ್ ಹೆಮ್ಮರವಾಗಿ ಬೆಳೆಯುವಂತಾಗಬೇಕಾದರೆ ಬೂತ್ ಮಟ್ಟದಲ್ಲಿ ಪಕ್ಷ ಜನರ ಬಳಿಗೆ ತೆರಳಿ ಕೆಲಸ ಮಾಡುವಂತಾಗಬೇಕು ಎಂದರು.

ಕಾರ್ಯಕರ್ತರಿಗೆ ಅನ್ಯಾಯವಾದಲ್ಲಿ ಧ್ವನಿ ಎತ್ತಲು ಪಕ್ಷದ ಮುಖಂಡರು ಮುಂದಾಗಬೇಕು, ನೊಂದವರಿಗೆ ಶಕ್ತಿ ತುಂಬಿ ನ್ಯಾಯ ಕೊಡಿಸುವ ದಿಸೆಯಲ್ಲಿ ಎಲ್ಲರೂ ಕೆಲಸ ಮಾಡಬೇಕು ಆಗಾಲೇ ಪಕ್ಷ ತನ್ನಿಂತಾನೆ ಬಲವರ್ಧನೆಯಾಗುತ್ತದೆ ಎಂದರು.

ನಗರಸಭೆ ಸದಸ್ಯೆ ಜಯಮರಿ ಜೆಡಿಎಸ್‌ಗೆ ಸೇರ್ಪಡೆಯಾದ ಹಿನ್ನೆಲೆಯಲ್ಲಿ ಅವರನ್ನು ಮಹಿಳಾ ತಾಲೂಕು ಅಧ್ಯಕ್ಷರಾಗಿ ನೇಮಕ ಮಾಡಿ ಆದೇಶ ವಿತರಿಸಲಾಯಿತು. ತಾಲೂಕು ಅಧ್ಯಕ್ಷರಾಗಿ ಮಾಂಬಳ್ಳಿ ರಾಜೇಶ್ ಮಹಾಜನ್, ಪ್ರಧಾನ ಕಾರ್ಯದರ್ಶಿ ಸಿದ್ದಯ್ಯನಪುರ ರಾಚಯ್ಯ, ಉಪಾಧ್ಯಕ್ಷರಾಗಿ ಕುಣಗಳ್ಳಿ ಸುಂದರ್, ಯುವ ಘಟಕ ಅಧ್ಯಕ್ಷ ಅಜಯ್ ನೇಮಕಗೊಂಡರು. ತಾಲೂಕು ಅಧ್ಯಕ್ಷರಾಗಿ ಆನಂದ್, ಪ್ರಧಾನ ಕಾರ್ಯದರ್ಶಿ ಅಂಬಳೆ ರವೀಶ್, ಯುವ ಘಟಕ ಅಧ್ಯಕ್ಷ ಕಾರ್ತಿಕ್, ಸಂತೇಮರಳ್ಳಿ ಹೋಬಳಿ ಅಧ್ಯಕ್ಷ ಶಂಕರಪ್ಪ ಅಭಿನಂದಿಸಿದರು.

ಪರಾಜಿತ ಅಭ್ಯರ್ಥಿ ಪುಟ್ಟಸ್ವಾಮಿ ಮಾತನಾಡಿ, ಇಂದಿನಿಂದಲೇ ಮುಂಬರುವ ಗ್ರಾಪಂ, ತಾಪಂ, ಜಿಪಂ, ಚುನಾವಣೆಗೆ ಪಕ್ಷ ಸಜ್ಜಾಗಿದೆ. 241 ಬೂತ್‌ನಲ್ಲಿ ಈಗಾಗಲೇ 200 ಬೂತ್ ಗಳಲ್ಲಿ ಕಾರ್ಯಕರ್ತರನ್ನು ನೇಮಿಸಲಾಗಿದೆ. ಇಂದಿನ ಕಾರ್ಯಕ್ರಮ ಮುಂದಿನ ಚುನಾವಣೆಯ ದಿಕ್ಸೂಚಿ, ಪಕ್ಷ ಹೆಮ್ಮರವಾಗಿಸುವ ನಿಟ್ಟಿನಲ್ಲಿ ನಾವೆಲ್ಲರೂ ಶ್ರಮಿಸುತ್ತೇವೆ, ಜೆಡಿಎಸ್ ಮುಗಿಸುವುದು ಯಾರಿಂದಲೂ ಸಾಧ್ಯವಿಲ್ಲ, ಇಲ್ಲಿಂದ ನಾಯಕರಾದವರು ಕಾಂಗ್ರೆಸ್ ಪಕ್ಷದಲ್ಲಿ ಆಡಳಿತ ನಡೆಸುತ್ತಿದ್ದಾರೆ ಎಂಬುದನ್ನು ಮನಗಾಣಬೇಕಿದೆ ಎಂದರು



ಪಕ್ಷದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಶಾಸಕ ಮಂಜುನಾಥ್ ನೂತನ ಪದಾಧಿಕಾರಿಗಳಿಗೆ ಜೆಡಿಎಸ್ ಬಾವುಟ ನೀಡಿ ಸ್ವಾಗತಿಸಿದರು.

ತಂಬಾಕು ಮುಕ್ತ ಗ್ರಾಮ ಘೋಷಣೆಗಾಗಿ ದೇವರಾಜಪುರ ಗ್ರಾಮ ಸಭೆ



ಚಾಮರಾಜನಗರ: ತಾಲೂಕಿನ ಹೆಬಸೂರು ಗ್ರಾಪಂ ವ್ಯಾಪ್ತಿಗೆ ಬರುವ ದೇವರಾಜಪುರ ಗ್ರಾಮವನ್ನು ತಂಬಾಕು ಮುಕ್ತ ಗ್ರಾಮವೆಂದು ಘೋಷಣೆ ಮಾಡಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಪಂಚಾಯಿತಿ ಅಧ್ಯಕ್ಷರಾದ ಕೆ. ಪದ್ಮ ಅಧ್ಯಕ್ಷತೆಯಲ್ಲಿ ವಿಶೇಷ ಗ್ರಾಮ ಸಭೆ ನಡೆಸಲಾಯಿತು. ಗ್ರಾಮವನ್ನು ತಂಬಾಕು ಮುಕ್ತ ಘೋಷಣೆಗೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ ಗ್ರಾಮಸ್ಥರು ಗ್ರಾಮದ ರಾಯಭಾರಿಯನ್ನಾಗಿ ಮುಖಂಡ ಬಸವೇಗೌಡರನ್ನು ಆಯ್ಕೆ ಮಾಡಲಾಯಿತು. ಗ್ರಾಮದ ಎಲ್ಲಾ ಪ್ರವೇಶ ದ್ವಾರಗಳಲ್ಲಿ ಹಾಗೂ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ 'ತಂಬಾಕು ಮುಕ್ತ ಗ್ರಾಮ' ನಾಮಫಲಕಗಳನ್ನು ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಗ್ರಾಮ ಉಪಾಧ್ಯಕ್ಷಹೆಚ್.ಎಂ.ಮಧು, ಸದಸ್ಯರಾದ ಜಯಶಂಕರ್, ಭಾಗ್ಯಮ್ಮ, ಪುಷ್ಪಲತಾ, ವಸಂತ, ಭಾಗ್ಯ, ಪಿಡಿಓ ರಂಜಿತ, ಕವನಾ, ವೀರಣ್ಣ ಹಾಗೂ ಮುಖಂಡರು ಇದ್ದರು.

ಸರ್ಕಾರಿ ಬಸ್ ನಿಲ್ದಾಣದಲ್ಲಿ ಆಟೋಗಳ ನಿಲುಗಡೆ : ನಿರ್ಲಕ್ಷ್ಯ

ಯಳಂದೂರು, ಆ.5– ಇದು ಬಸ್ ನಿಲ್ದಾಣವೋ ಇಲ್ಲವೆ ಕಾರ್ ನಿಲ್ದಾಣವೋ ಅಥವಾ ಆಟೋ, ಬೈಕ್ ನಿಲ್ದಾಣವೋ ಎಂದು ತಿಳಿಯದಾಗದಂತ ಸ್ಥಿತಿಯಲ್ಲಿ ಪಟ್ಟಣದ ಬಸ್ ನಿಲ್ದಾಣವಿದೆ

ಪಟ್ಟಣದ ಬಸ್ ನಿಲ್ದಾಣವು ಹಲವು ಹಳ್ಳಿ ಪಟ್ಟಣ ಹಾಗೂ ಬೇರೆಬೇರೆ ತಾಲೂಕಿಗೆ ಸಂಪರ್ಕ ಕಲ್ಪಿಸುವ ಕೇಂದ್ರಸ್ಥಾನವಾಗಿದೆ. ಬಸ್ ನಿಲ್ದಾಣಕ್ಕೆ ಮೈಸೂರು, ನಂಜನಗೂಡು ಚಾಮರಾಜನಗರದಿಂದ, ಕೊಳ್ಳೇಗಾಲದಿಂದ, ಬಿಳಿಗಿರಿರಂಗನ ಬೆಟ್ಟದಿಂದ ಕಾಗಲವಾಡಿಯಿಂದ ಬಸ್‌ಗಳ ಸಂಚಾರವಿದೆ. ಆದರೆ ಈ ನಿಲ್ದಾಣ ಬೇರೆ ವಾಹನಗಳ ನಿಲ್ದಾಣವಾಗಿ ಪರಿಣಮಿಸಿದ್ದು ಇಲ್ಲಿ ಹೇಳೋರು ಇಲ್ಲ ಕೇಳೋರು ದಿಕ್ಕಿಲ್ಲ ಎಂಬಂತಾಗಿ ಸರ್ಕಾರಿ ಬಸ್ ಚಾಲಕರು ಮತ್ತು ನಿರ್ವಾಹಕರು ಪ್ರಯಸಪಡಬೇಕಾದ ಸಮಸ್ಯೆ ಒದಗಿ ಬಂದಿದೆ.



ಸರ್ಕಾರಿ ಬಸ್ ನಿಲ್ದಾಣದಲ್ಲಿ ಬಸ್‌ಗಳೊಂದಿಗೆ ಆಟೋಗಳು ನಿಂತಿರುವುದು

ಬಸ್ ನಿಲ್ದಾಣದಲ್ಲಿ ಖಾಸಗಿಯವರ ಕಾರು, ಬೈಕ್, ಆಟೋಗಳನ್ನು ನಿಲ್ಲಿಸುವುದರಿಂದ ಪ್ರಯಾಣಿಕರಿಗೆ ಹಾಗೂ ಚಾಲಕ ನಿರ್ವಾಹಕರಿಗೆ ತೊಂದರೆಯುಂಟಾಗುತ್ತಿದೆ. ಬಸ್ ನಿಲ್ಲಬೇಕಾದ ಸ್ಥಳದಲ್ಲಿ ಬೇರೆ ವಾಹನಗಳು ನಿಲ್ಲುವುದರಿಂದ ಟ್ರಾಫಿಕ್ ಜಾಮ್ ಆಗಿ ತೊಂದರೆಯಾಗುತ್ತಿದೆ. ಇದರಿಂದ ಬಸ್ ನಿಲ್ಲಿಸಲು ಆಗದೆ ಚಾಲಕರು ನಿರ್ವಾಹಕರು ಪ್ರಯಾಸ ಪಡುತ್ತಿದ್ದು ಬೇರೆ ವಾಹನದ ಮಾಲೀಕರು ಬಸ್ ಚಾಲಕರ ಮೇಲೆ ಜಗಳ ಮಾಡುವುದು ಕಂಡು ಬರುತ್ತಿದೆ.

ಬಸ್ ನಿಲ್ದಾಣದ ಸಮಸ್ಯೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನೀಗಿಸುತ್ತಾರೋ ಇಲ್ಲವೆ ಮತ್ತೆ ಮರುಕಳಿಸದಂತೆ ಕ್ರಮಕೈಗೊಳ್ಳುತ್ತಾರೋ ಕಾದು ನೋಡೋಣ.

ಸಾರಿಗೆ ನೌಕರರ ಮುಷ್ಕರದಿಂದ ಮೈಸೂರಿನಲ್ಲಿ ಪ್ರಯಾಣಿಕರ ಪಡಿಪಾಟಲು

● ಬೆಳಗ್ಗೆಯಿಂದ ಸಂಜೆವರೆಗೆ ನಗರ, ಗ್ರಾಮಾಂತರ ಪ್ರದೇಶಗಳ ಸಾರಿಗೆ ಬಸ್ ಸಂಚಾರ ಸಂಪೂರ್ಣ ಅಸ್ತವ್ಯಸ್ತ ● ಪರ್ಯಾಯ ವ್ಯವಸ್ಥೆಯಾಗಿ ಖಾಸಗಿ ಬಸ್ ಇತರೆ ವಾಹನಗಳ ಮುಕ್ತ ಸಂಚಾರವಿದ್ದರೂ ಪ್ರಯಾಣಿಕರ ಪರದಾಟ ● ಬಿಗಿ ಪೊಲೀಸ್ ಬಂದೋಬಸ್ತ್, ಶಾಂತಿಯುತ ಮುಷ್ಕರ




ಸಾರಿಗೆ ನೌಕರರ ಮುಷ್ಕರದಿಂದ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿರುವ ಪ್ರಯಾಣಿಕರು (ಎಡಚಿತ್ರ). ಬಸ್‌ಗಳಿಲ್ಲದೆ ಬಿಕೋ ಎನ್ನುತ್ತಿರುವ ಮೈಸೂರು ನಗರ ಬಸ್ ನಿಲ್ದಾಣವನ್ನು (ಬಲಚಿತ್ರ) ಕಾಣಬಹುದು.

ಮೈಸೂರು,ಆ.5(ಬಿಎಲ್‌ಯು)– ಹೈಕೋರ್ಟ್ ಆದೇಶವನ್ನು ಧಿಕ್ಕರಿಸಿ ಕೆಎಸ್‌ಆರ್‌ಟಿಸಿ ನೌಕರರು ಮೈಸೂರು ಸೇರಿದಂತೆ ರಾಜ್ಯಾದ್ಯಂತ ಮಂಗಳವಾರ ನಡೆಸಿದ ಮುಷ್ಕರದಿಂದ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸಿದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕ ಬಸ್‌ಗಳಿಲ್ಲದೆ ಪ್ರಯಾಣಿಕರು ಪಡಿಪಾಟಲುಪಟ್ಟರು. ಹೊರಗುತ್ತಿಗೆ ನೌಕರರು ಹಾಗೂ ತರಬೇತಿ ಪಡೆದವರನ್ನು ಬಸ್ ಚಾಲನೆಗೆ ನಿಯೋಜನೆ ಮಾಡಿದರೂ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಲು ಸಾಧ್ಯವಾಗಲಿಲ್ಲ.

38 ತಿಂಗಳ ವೇತನ ಹಿಂಬಾಕಿ ಪಾವತಿಸುವಂತೆ ಹಾಗೂ ವೇತನ ಪರಿಷ್ಕರಣೆ ಮಾಡಬೇಕೆಂಬುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕೆಎಸ್‌ಆರ್‌ಟಿಸಿ ನೌಕರರು ಇಂದು ನಡೆಸಿದ ಮುಷ್ಕರ ಮೈಸೂರಿನಲ್ಲಿ ತೀವ್ರ ಪರಿಣಾಮ ಬೀರಿತು. ಬಸ್‌ಗಳಿಲ್ಲದೆ, ಪ್ರಯಾಣಿಕರು ಪರದಾಡುವ ಸನ್ನಿವೇಶ ನಿರ್ಮಾಣವಾಗಿತ್ತು. ಮೈಸೂರಿನ ನೂರಾರು ನೌಕರರು ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣ ಹಾಗೂ ನಗರ ಬಸ್ ನಿಲ್ದಾಣದತ್ತ ಸಾರಿಗೆ ನೌಕರರು ಇಂದು ಮುಖ ಮಾಡಲಿಲ್ಲ. ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 2700ಕ್ಕೂ ಹೆಚ್ಚು ಚಾಲಕರು, ನಿರ್ವಾಹಕರು, ಮೆಕ್ಯಾನಿಕ್‌ಗಳು ಸೇರಿದಂತೆ ಹಲವು ನೌಕರರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಕೆಎಸ್‌ಆರ್‌ಟಿಸಿಯಲ್ಲಿ ಹಲವು ನೌಕರರ ಸಂಘಟನೆಗಳಿದ್ದರೂ ಭಿನ್ನಾಭಿಪ್ರಾಯವಿಲ್ಲದೆ ಎಲ್ಲಾ ನೌಕರ ಸಂಘಟನೆಯವರು ಮುಷ್ಕರದಲ್ಲಿ ಭಾಗಿಯಾಗಿ ಒಗ್ಗಟ್ಟು ಪ್ರದರ್ಶಿಸಿದರು.

ಪರ್ಯಾಯ ವ್ಯವಸ್ಥೆ: ಸಾರಿಗೆ ನೌಕರರ ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆ ಆಗಬಾರದೆಂದು ಸರ್ಕಾರದ ನಿರ್ದೇಶನದ ಮೇರೆಗೆ ಹೊರಗುತ್ತಿಗೆ ನೌಕರರು ಹಾಗೂ ತರಬೇತಿ ಪಡೆಯುತ್ತಿದ್ದವರನ್ನು ಬಸ್ ಚಾಲನೆಗೆ ನಿಯೋಜನೆ ಮಾಡಲಾಗಿತ್ತು ಅಲ್ಲದೆ ಖಾಸಗಿ ಬಸ್‌ಗಳ ಸಂಚಾರಕ್ಕೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಮಾತ್ರ ಸೀಮಿತವಾಗಿದ್ದ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣ ಮತ್ತು ನಗರ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳು ಸಂಚಾರ ನಡೆಸಿದವು.

ಖಾಸಗಿ ಬಸ್‌ಗಳು ಮಾತ್ರವಲ್ಲದೆ ಮಿನಿ ಬಸ್‌ಗಳು, ಪ್ರವಾಸಿ ಬಸ್‌ಗಳು, ಟಿಟಿಗಳು ಸೇರಿದಂತೆ ನೂರಾರು ಬಸ್‌ಗಳು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಮುಕ್ತವಾಗಿ ಸಂಚರಿಸಿದವು. ಮೈಸೂರಿನಿಂದ ಬೆಂಗಳೂರು, ಮಡಿಕೇರಿ, ಚಾಮರಾಜನಗರ, ಹಾಸನ, ಮಂಡ್ಯ ಸೇರಿದಂತೆ ಕೆಲವು ಆಯ್ದ ಭಾಗಗಳಿಗೆ ಮಾತ್ರ ಈ ಬಸ್‌ಗಳು ಸಂಚರಿಸಿದವು. ಆದರೆ ಉಳಿದ ಸ್ಥಳಗಳಿಗೆ ಬಸ್‌ಗಳಿಲ್ಲದ ಕಾರಣ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸಿದರು.

ಪರ್ಯಾಯ ವ್ಯವಸ್ಥೆ ಮಾಡಿದ್ದ ಕೆಎಸ್‌ಆರ್‌ಟಿಸಿ ಬಸ್‌ಗಳು ಹಾಗೂ ಖಾಸಗಿ ಬಸ್‌ಗಳು ತಾಲೂಕು ಹಾಗೂ ಜಿಲ್ಲೆಗಳಿಗೆ ಸಂಚರಿಸುತ್ತಿದ್ದವು. ಆದರೆ ಗ್ರಾಮೀಣ ಪ್ರದೇಶದ ಮಾರ್ಗಗಳಿಗೆ ಯಾವ ಬಸ್‌ಗಳು ಸಂಚರಿಸಲಿಲ್ಲ. ಇದರಿಂದ ಗ್ರಾಮೀಣ ಪ್ರದೇಶದ ಜನರು ತೊಂದರೆ ಅನುಭವಿಸಿದರು.

ಮುಷ್ಕರದ ಮಾಹಿತಿ ಹೊಂದಿದ್ದ ಸಾಕಷ್ಟು ಜನರು ಇಂದು ಪ್ರಯಾಣಿಸುವ ಗೋಜಿಗೇ ಹೋಗಲಿಲ್ಲ. ಮಹದೇಶ್ವರ ಬೆಟ್ಟಕ್ಕೆ ಖಾಸಗಿ ಬಸ್‌ಗಳ ಸಂಚಾರ ಇದ್ದರೂ ಆ ಬಸ್‌ನಲ್ಲಿ ಪ್ರಯಾಣಿಕರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು. ಈಗ ಬೆಟ್ಟಕ್ಕೆ ಹೋಗಿ, ವಾಪಸ್ ಬರಲು ಬಸ್ ವ್ಯವಸ್ಥೆ ಇರುವುದಿಲ್ಲವೆಂದು ತಿಳಿದು ಬಹಳಷ್ಟು ಜನರು ಮಹದೇಶ್ವರ ಬೆಟ್ಟಕ್ಕೆ ಹೋಗಲು ಮನಸು ಮಾಡಲಿಲ್ಲ.

ಮೈಸೂರು ಜಿಲ್ಲೆಯಲ್ಲಿ 750 ರೂಟ್‌ಗಳಿದ್ದು, ನಗರದಲ್ಲಿ 120 ರೂಟ್‌ಗಳಿವೆ. ಹೊರಗುತ್ತಿಗೆ ನೌಕರರು, ತರಬೇತಿ ಪಡೆಯುತ್ತಿದ್ದವರನ್ನು ಬಸ್ ಚಾಲನೆಗೆ ನೇಮಿಸಿ, ಖಾಸಗಿ ಬಸ್‌ಗಳ ಸಂಚಾರಕ್ಕೆ ಮುಕ್ತ ಅವಕಾಶ ಕಲ್ಪಿಸಿದರೂ ಶೇ.90ರಷ್ಟು ರೂಟ್‌ಗಳಿಗೆ ಸಮರ್ಪಕ ಬಸ್ ವ್ಯವಸ್ಥೆ ಮಾಡಲು ಸಾಧ್ಯವಾಗಲಿಲ್ಲ.

ಮುಷ್ಕರನಿರತ ಸಾರಿಗೆ ನೌಕರರು ಪರ್ಯಾಯ ವ್ಯವಸ್ಥೆಗೆ ಅಡ್ಡಿಪಡಿಸಲಿಲ್ಲ. ಆದರೂ ಮುಂಜಾಗ್ರತಾ ಕ್ರಮವಾಗಿ ನಗರ, ಗ್ರಾಮಾಂತರ ಬಸ್ ನಿಲ್ದಾಣ ಸೇರಿದಂತೆ ಹಲವೆಡೆ ಬಿಗಿ ಪೊಲೀಸ್ ಬಂದೋಬಸ್ ಮಾಡಲಾಗಿತ್ತು. ಬಸ್ ನಿಲ್ದಾಣದಲ್ಲಿ ಪೊಲೀಸರು ಖುದ್ದು ನಿಂತು ಯಾವುದೇ ಅಹಿತಕರ ಘಟನೆ ನಡೆಯದಂತೆ ಪರಿಸ್ಥಿತಿ ನಿಭಾಯಿಸಿದರು. ಚಾಮರಾಜ ಒಡೆಯರ್ ವೃತ್ತದಲ್ಲಿ ಅಗ್ನಿಶಾಮಕ ದಳದವರನ್ನು ನಿಯೋಜನೆ ಮಾಡಲಾಗಿತ್ತು.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪೊಲೀಸ್ ಇಲಾಖೆಯ ಮೊಬೈಲ್ ಕಮಾಂಡ್ ಸೆಂಟರ್‌ನ ಸಿಸಿಟಿವಿ ಮೂಲಕ ಸುತ್ತಮುತ್ತಲ ಚಲನವಲನಗಳನ್ನು ಪೊಲೀಸರು ಗಮನಿಸುತ್ತಿದ್ದರು. ಇದರಿಂದ ಇಡೀ ದಿನ ಮೈಸೂರಿನಲ್ಲಿ ಯಾವುದೇ ಅಹಿತಕರ ಘಟನೆ ಜರುಗಲಿಲ್ಲ.

ಬೆಂಗಳೂರು ಏರ್‌ಪೋರ್ಟ್‌ಗೆ ತೆರಳುವವರು ಕಂಗಾಲು




ಮೈಸೂರು ಹಾಗೂ ಮಡಿಕೇರಿಯಿಂದ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ಏರ್‌ಪೋರ್ಟ್‌ಗೆ ಫ್ಲೈ ಬಸ್‌ಗಳ ಸಂಚಾರ ಇರಲಿಲ್ಲ. ಇಂದು ಬೆಳಿಗ್ಗೆ ಒಂದೆರಡು ಫ್ಲೈ ಬಸ್‌ಗಳು ಮಾತ್ರ ಸಂಚರಿಸಿದವು. ವೋಲ್ವೊ ಕಂಪನಿಯ ಫ್ಲೈ ಬಸ್‌ಗಳ ಚಾಲನೆಗೆ ಅನುಭವ ಹಾಗೂ ವಿಶೇಷ ಪರಿಣತಿ ಅಗತ್ಯವಾದ ಹಿನ್ನೆಲೆಯಲ್ಲಿ ಈ ಬಸ್‌ಗಳ ಚಾಲನೆಗೆ ಹೊರಗುತ್ತಿಗೆ ಹಾಗೂ ತರಬೇತಿ ಪಡೆಯುತ್ತಿರುವವರನ್ನು ನಿಯೋಜಿಸಿರಲಿಲ್ಲ. ಇದರಿಂದ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಏರ್‌ಪೋರ್ಟ್‌ಗೆ ಹೋಗುವವರು ಪರದಾಡಿದರು. ಫ್ಲೈ ಬಸ್ ಸಿಗುವುದಿಲ್ಲವೆಂದು ಖಚಿತವಾದ ಮೇಲೆ ಟ್ಯಾಕ್ಸಿಯಲ್ಲಿ ಹೋಗಲು ಕೆಲವು ನಿರ್ಧರಿಸಿದರು. ಆದರೆ ಬೇಡಿಕೆ ಹೆಚ್ಚಿದ್ದ ಕಾರಣ ಟ್ಯಾಕ್ಸಿ ಕೂಡ ಸಾಕಷ್ಟು ಮಂದಿಗೆ ಲಭ್ಯವಾಗಲಿಲ್ಲ. ಕೆಲವರು ನಿರಾಸೆಯಿಂದ ಮನೆಗೆ ವಾಪಸ್ಸಾದರು.

ಪವರ್ ಪ್ಲಸ್‌ಗೆ ಮನಿ ಪವರ್ ಬೇಕಲ್ಲ?



ಮೈಸೂರಿನಿಂದ ಬೆಂಗಳೂರಿಗೆ ತೆರಳಲು ಹೆಚ್ಚಿನ ಸಂಖ್ಯೆಯ ಕೆಎಸ್‌ಆರ್‌ಟಿಸಿ ಪವರ್ ಪ್ಲಸ್ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಉದ್ದಕ್ಕೂ ಪವರ್ ಪ್ಲಸ್ ಬಸ್‌ಗಳು ನಿಂತಿದ್ದವು. 410 ರೂ. ದರವಿದ್ದರೂ ಬಹಳಷ್ಟು ಜನ ಈ ಬಸ್‌ಗಳಲ್ಲೇ ಬೆಂಗಳೂರಿಗೆ ಪ್ರಯಾಣಿಸಿದರು. ಆದರೆ ಆರ್ಥಿಕ ಚೈತನ್ಯವಿಲ್ಲದವರು 410 ರೂಪಾಯಿ ದರವಿದ್ದ ಪವರ್ ಪ್ಲಸ್ ಬಸ್‌ನಲ್ಲಿ ಹೋಗಲು ಮನಸ್ಸು ಮಾಡಲಿಲ್ಲ.

ಭಿಕ್ಷುಕರ ಹೊಟ್ಟೆಗೆ ಇಂದು ತಣ್ಣೀರು ಬಟ್ಟೆ



ಮೈಸೂರಿನ ಗ್ರಾಮಾಂತರ ಹಾಗೂ ನಗರ ಬಸ್ ನಿಲ್ದಾಣದಲ್ಲಿ ಬಹಳಷ್ಟು ಅಶಕ್ತರು, ಅಂಗವಿಕಲರು ಹಾಗೂ ವೃದ್ಧರು ಭಿಕ್ಷೆ ಬೇಡುವ ಮೂಲಕ ದಿನನಿತ್ಯ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಆದರೆ ಇಂದು ಸಾರಿಗೆ ನೌಕರರ ಮುಷ್ಕರದಿಂದ ಭಣಗುಡುತ್ತಿದ್ದ ಬಸ್ ನಿಲ್ದಾಣದಲ್ಲಿ ಭಿಕ್ಷುಕರಿಗೂ ಹಾಹಾಕಾರ. ಬಸ್ ನಿಲ್ದಾಣದಲ್ಲಿ ವಿರಳವಾಗಿದ್ದ ಪ್ರಯಾಣಿಕರ ಬಳಿ ವೃದ್ಧನೊಬ್ಬ ಭಿಕ್ಷೆ ಬೇಡುತ್ತಿದ್ದ. ಆದರೆ ಅವನ ಹೊಟ್ಟೆ ತುಂಬುವಷ್ಟು ಭಿಕ್ಷೆಯಂತೂ ದೊರೆಯಲಿಲ್ಲ

ಖಾಸಗಿ ಬಸ್, ಟ್ಯಾಕ್ಸಿಗಳಲ್ಲಿ ದುಬಾರಿ ದರ ಸುಲಿಗೆ



ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣಗಳಲ್ಲಿ ಖಾಸಗಿ ಬಸ್‌ಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಜನರ ಅನಿವಾರ್ಯತೆಯನ್ನು ಬಳಸಿಕೊಂಡ ಖಾಸಗಿ ಬಸ್‌ನವರು ದುಬಾರಿ ದರ ವಸೂಲಿ ಮಾಡಿದರು. ಮೈಸೂರಿನಿಂದ ಬೆಂಗಳೂರಿಗೆ ಸಾಮಾನ್ಯ ಬಸ್‌ಗಳಲ್ಲಿ 220 ರೂ. ಇದ್ದರೆ ಖಾಸಗಿ ಬಸ್‌ನವರು 300 ರಿಂದ 350 ರೂ. ವಸೂಲಿ ಮಾಡಿದರು. ಬೆಂಗಳೂರು ಮಾತ್ರವಲ್ಲದೆ ವಿವಿಧ ಸ್ಥಳಗಳಿಗೂ ದುಬಾರಿ ದರ ಸುಲಿಗೆ ಮಾಡಲಾಯಿತು. ಶಕ್ತಿ ಯೋಜನೆಯಿಂದ ಖಾಸಗಿ ಬಸ್‌ಗಳಿಗೆ ಬೇಡಿಕೆ ಕಡಿಮೆಯಾಗಿತ್ತು ಆದರೆ ಇಂದು ಅವುಗಳಿಗೆ ಭಾರಿ ಡಿಮ್ಯಾಂಡಿತ್ತು. ಮೈಸೂರು ಜಿಲ್ಲೆಯಾದ್ಯಂತ 400ಕ್ಕೂ ಹೆಚ್ಚು ಖಾಸಗಿ ಬಸ್‌ಗಳು ಸಂಚರಿಸಿದವು.

ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಕಾರುಗಳಲ್ಲಿ ಬೆಂಗಳೂರಿಗೆ ಹೋಗಲು ಒಬ್ಬರಿಗೆ 400 ರೂಪಾಯಿ ದರ ಇತ್ತು. ಬಸ್‌ಗಳು ಬೆಂಗಳೂರಿನ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಮಾತ್ರ ಹೋಗುತ್ತವೆ. ನಮ್ಮ ಕಾರಿನಲ್ಲಿ ಬಂದರೆ ಮೆಜೆಸ್ಟಿಕ್‌ಗೆ ಬಿಡುತ್ತೇವೆ ಎಂದು ಕಾರು ಚಾಲಕರು ಪ್ರಯಾಣಿಕರ ಮನವೊಲಿಸಿ ಕರೆದೊಯ್ಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಮೈಸೂರಿನ ವ್ಯಾಪಾರ–ವಹಿವಾಟು ಖೋತಾ!



ಸಾರಿಗೆ ನೌಕರರ ಮುಷ್ಕರದಿಂದ ಮೈಸೂರಿನ ವಾಣಿಜ್ಯ ವಹಿವಾಟಿನ ಮೇಲೆ ತೀವ್ರ ರೀತಿಯ ಪರಿಣಾಮ ಬೀರಿತು. ಹೋಟೆಲ್‌ಗಳು, ಬಟ್ಟೆ ಅಂಗಡಿಗಳು, ಪಾತ್ರೆ ಅಂಗಡಿಗಳು, ಚಿನ್ನ ಬೆಳ್ಳಿ ಅಂಗಡಿಗಳು, ಬೀದಿಬದಿ ವ್ಯಾಪಾರಿ ಸ್ಥಳಗಳು ಸೇರಿದಂತೆ ಇತರೆ ವ್ಯಾಪಾರ ವಹಿವಾಟು ಸ್ಥಳಗಳು ಭಣಗುಟ್ಟಿದವು. ಬಸ್ ನಿಲ್ದಾಣದ ಅಂಗಡಿಗಳಿಗೂ ವ್ಯಾಪಾರ ಖೋತಾ ಎನ್ನಬಹುದು. ವರಮಹಾಲಕ್ಷ್ಮಿ ಹಬ್ಬದ ಖರೀದಿ ಭರಾಟೆಯೂ ನಗರದಲ್ಲಿ ಅಷ್ಟಾಗಿ ಕಂಡುಬರಲಿಲ್ಲ. ಪ್ರಯಾಣಿಕರಿಲ್ಲದ ಕಾರಣ ಬಸ್ ನಿಲ್ದಾಣದ ಅಂಗಡಿಗಳಲ್ಲಿ ಗ್ರಾಹಕರಿರಲಿಲ್ಲ. ಸಾರಿಗೆ ಮುಷ್ಕರ ಮೈಸೂರಿನ ಪ್ರವಾಸಿ ತಾಣಗಳ ಮೇಲೆ ಅಷ್ಟಾಗಿ ಪರಿಣಾಮ ಬೀರಲಿಲ್ಲ. ಹೊರ ಜಿಲ್ಲೆ, ರಾಜ್ಯ ಹಾಗೂ ದೇಶದಿಂದ ಬರುವವರು ಕಾರು, ಬಸ್, ಮಿನಿ ಬಸ್‌ಗಳಲ್ಲಿ ಬರುವ ಕಾರಣ ಮುಷ್ಕರದ ಬಿಸಿ ಅವರಿಗೆ ತಟ್ಟಲಿಲ್ಲ.

ಆಟೋ ಚಾಲಕರ ಸಂಪಾದನೆ ಅಷ್ಟಕ್ಕಷ್ಟೆ



ಕೆಎಸ್‌ಆರ್‌ಟಿಸಿ ಬಸ್‌ಗಳ ಸೇವೆ ಸ್ಥಗಿತವಾದಾಗ ಆಟೋಗಳಿಗೆ ತುಂಬಾ ಡಿಮ್ಯಾಂಡ್ ಇರುವುದು ಸಾಮಾನ್ಯ. ಆದರೆ ಇಂದು ಇದಕ್ಕೆ ವ್ಯತಿರಿಕ್ತವಾಗಿ ಆಟೋಗಳಿಗೆ ಅಷ್ಟಾಗಿ ಡಿಮ್ಯಾಂಡ್ ಇರಲಿಲ್ಲ. ನಗರ ಬಸ್ ನಿಲ್ದಾಣದ ಮುಂದೆ ಉದ್ದಕ್ಕೂ ಆಟೋಗಳು ನಿಂತು, ಪ್ರಯಾಣಿಕರಿಗೆ ದಾರಿ ಕಾಯುತ್ತಿದ್ದವು. ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ನಡುವೆ ಸಾರಿಗೆ ಸಂಪರ್ಕವಿಲ್ಲದೆ ಜನರಿಲ್ಲದ ಕಾರಣ ಆಟೋ ಚಾಲಕರಿಗೆ ಸಾಮಾನ್ಯ ದಿನಕ್ಕಿಂತ ಇಂದು ಆದಾಯ ಕಡಿಮೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಟುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಟುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

11ನೇ ದಿನ, ಬುಧವಾರ, 06–08–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಅರಿಸ್ಟೋಕ್ರೇಟ್ ಪ್ಲೇಟ್–1200 ಮೀ. 3 ವರ್ಷ (ಟರ್ಮ್ಸ್) ಮ.1.30ಕ್ಕೆ
1 ಓಶನ್ ಆಫ್ ಗ್ರೇಸ್ 2. ನ್ಯಾಚುರಲ್ ಲುಕ್ 3. ಕೊಸೆಟ್ಟಿ

II. ಮಾನಸಸರೋವರ ಪ್ಲೇಟ್ –1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ನಿಂಬಲ್ ಸ್ಪಿರಿಟ್ 2. ಅಲ್ಲೂರಿಂಗ್ ಬ್ಯೂಟಿ 3. ಸೂಪರ್ ಸೆಕ್ಸ್

III. ವಾರಣಾಸಿ ಪ್ಲೇಟ್–2000 ಮೀ. ರೇಟೆಡ್ 60 ಮತ್ತು ಮೇಲ್ವರ್ಗ ಮ.2.30ಕ್ಕೆ
1 ರಾಕ್‌ಬ್ಯಾಂಕ್ 2 ಮ್ಯಾಗ್ನೇಟಿಕ್ 3. ಸ್ಲೆಂಡಿದೊ

IV. ಅಶ್ವಜಯ ಪ್ಲೇಟ್ ಡಿII–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಓಶನ್ 2. ಟೈಗರ್ ಕಿಂಗ್ 3. ಸೆರಾಯ್

V. ಕಾಂಚನಗಂಗಾ ಪ್ಲೇಟ್ ಡಿII–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1 ಪ್ರೆಟ್ಟಿಮೂನ್ 2. ದಿ ಗೋಲ್ಡನ್ ಸನ್‌ರೈಸ್ 3. ಟಾಸ್ಕನಾ

VI. ಮೈಸೂರು ರೇಸ್ ಕ್ಲಬ್ ಮಿಲಿಯನ್–1600 ಮೀ. 3 ವರ್ಷದ ಟರ್ಮ್ಸ್. ಸಂ.4.00ಕ್ಕೆ
1. ಡಾನ್‌ಕ್ಯಾಸ್ಟರ್ ಬೆಲ್ಲಿ 2. ಮೂನ್ ಸ್ಟಾರ್ 3. ಮಾಹ್ಲರ್

VII. ಅಶ್ವಜಯ ಪ್ಲೇಟ್ ಡಿI–1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಪಾರ್ಕ್‌ವೆಸ್ಟ್ 2. ಬೌಂಟಿಫುಲ್ ಬ್ಯೂಟಿ 3. ಹಾಸ್ಟಿಂಗ್ ಸನ್‌ರೈಸ್

VIII. ಕಾಂಚನಗಂಗಾ ಪ್ಲೇಟ್ ಡಿI–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಕಾನ್ಫಿಡೆಂಟ್ ಗೇಮ್ 2. ಸ್ವಾಗತಮ್ 3. ರೆಡ್ ಫಾಲ್ಕನ್

ದಿನದ ಅತ್ಯುತ್ತಮ	ರಾಕ್ ಬ್ಯಾಂಕ್
ಡಬ್ಬಲ್	ಓಶನ್ ಆಫ್ ಗ್ರೇಸ್, ಓಶನ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7, ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ

ಇಂದು ಅಸಂಘಟಿತ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ



ಮೈಸೂರು, ಆ.5(ಎಸ್‌ಪಿಎನ್)– ಮೈಸೂರಿನ ಕಲಾಮಂದಿರದಲ್ಲಿ ನಾಳೆ(ಆ.6) ಮೈಸೂರು ಜಿಲ್ಲೆಯ ಅಸಂಘಟಿತ ವರ್ಗಗಳ ಕಾರ್ಮಿಕರಿಗೆ 'ಸ್ಮಾರ್ಟ್ ಕಾರ್ಡ್' ವಿತರಣೆ ಹಾಗೂ ವಿವಿಧ ಯೋಜನೆಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಕಾರ್ಮಿಕ ಸಚಿವ ಸಂತೋಷ್ ಎಸ್.ಲಾಡ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಹುಣಸೂರು ನಗರಸಭೆ ಸಾಮಾನ್ಯ ಸಭೆ

ಸಮರ್ಪಕವಾಗಿ ಹೆದ್ದಾರಿ ಅಗಲೀಕರಣ ಕಾಮಗಾರಿ ನಡೆಸಿ

ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚನೆ



ಸಾಮಾನ್ಯ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು. ನಗರಸಭೆ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಇತರರಿದ್ದರು.

ಹುಣಸೂರು, ಆ.5– ಜನಪ್ರತಿನಿಧಿಗಳ ಗಮನಕ್ಕೆ ತರದೆ ಹೆದ್ದಾರಿ ಅಗಲೀಕರಣ (ಬೈಪಾಸ್ ರಸ್ತೆ) ಕಾಮಗಾರಿ ಆರಂಭಿಸಿದ್ದೀರಾ. ಬೈಪಾಸ್ ರಸ್ತೆ ಒತ್ತುವರಿ ತೆರವುಗೊಳಿಸಿ, ರಸ್ತೆ ಅಗಲೀಕರಣ ಜೊತೆಗೆ ಜಂಕ್ಷನ್‌ಗಳಲ್ಲಿ ಸುಗಮ ಸಂಚಾರ ಹಾಗೂ ನೀರು ಸರಾಗವಾಗಿ ಹರಿದು ಹೋಗಲು ಅವಕಾಶ ಕಲ್ಪಿಸಬೇಕು. ಬೇಕಾಬಿಟ್ಟಿ ಕಾಮಗಾರಿ ನಡೆಸಲು ಬಿಡುವುದಿಲ್ಲ. ಹೀಗಾಗಿ ಸಮರ್ಪಕ ಕಾಮಗಾರಿ ನಡೆಸುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರಸಭಾಧ್ಯಕ್ಷ ಗಣೇಶ್ ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಸದಸ್ಯರಿಂದ ಹೆದ್ದಾರಿ ಅಗಲೀಕರಣ ವೇಳೆ ಆಗಬೇಕಿರುವ ಕಾಮಗಾರಿಗಳ ಕುರಿತು ಮಾಹಿತಿ ಪಡೆದು ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿ ವತಿಯಿಂದ ಅರಸು ಮತ್ಥಳಿಯಿಂದ ಹಾಳಗೆರೆ ಜಂಕ್ಷನ್‌ವರೆಗಿನ ಹೆದ್ದಾರಿ (ಬೈಪಾಸ್ ರಸ್ತೆ) 5.1ಕಿಮೀವರೆಗಿನ ಜೋಡಿರಸ್ತೆ ಕಾಮಗಾರಿಯನ್ನು ಶಾಸಕರು, ಸಂಸದರ ಗಮನಕ್ಕೆ ತರದೆ ಆರಂಭಿಸಿದ್ದೀರಾ, ಹಾಳಗೆರೆ ಬಳಿ ಚರಂಡಿ ನಿರ್ಮಿಸಿದ್ದೀರಾ, ನಗರದೊಳಗೆ ಕಾಮಗಾರಿ ನಡೆಸುವ ವೇಳೆ ನೀರು ಹರಿದು ಶಾಸ್ತ್ರೀ ಶಾಲೆ ಪಕ್ಕದ ಬಡಾವಣೆಗೆ ಹೋಗುತ್ತದೆ ಎಂದು ಸದಸ್ಯರು ಹೇಳುತ್ತಿದ್ದಾರೆ. ನೀರು ಸರಾಗವಾಗಿ ಹರಿದು ಹೋಗಲು ಕೈಗೊಂಡಿರುವ ಮುನ್ನೆಚ್ಚರಿಕೆ ಬಗ್ಗೆ ಪ್ರಶ್ನಿಸಿದ ವೇಳೆ ಹೆದ್ದಾರಿ ವಿಭಾಗದ ಇಂಜಿನಿಯರ್ ರೂಪಾ, ಎ.ಇ.ತಬ್ಸಮ್ ತಬ್ಬಿಬ್ಬಾಗಿ ಯೋಜನೆಯಲ್ಲಿ ರಸ್ತೆ ಅಗಲೀಕರಣ, 2 ಸೇತುವೆ, ಸರ್ವೀಸ್ ರಸ್ತೆ, ತಾಲೂಕು ಕಚೇರಿ ಎದುರು ಅಂಡರ್ ಪಾಸ್, ಒಂದು ಕಡೆ ಸ್ಕೈ ವಾಕ್ ಸೇರಿದಂತೆ 57 ಕೋಟಿಗೆ ಟೆಂಡರ್ ಆಗಿದೆ ಎಂದು ಉತ್ತರಿಸಿದರು. ಇದು 83.5 ಕೋಟಿ ಯೋಜನೆಯಲ್ಲವೇ ಸಭೆಗೆ ನಿಖರ ಮಾಹಿತಿ ನೀಡುವಂತೆ ಸದಸ್ಯರಾದ ರಮೇಶ್, ಸೈಯದ್ ಯೂನಸ್, ಮಾಲಿಕ್ ಪಾಷಾ, ವಿವೇಕ್, ಕೃಷ್ಣರಾಜಗುಪ್ತ, ದೇವರಾಜ್, ರಾಧ ಮತ್ತಿತರರು ಸ್ಪಷ್ಟನೆ ಬಯಸಿದರು.

ಎಇಇ ರೂಪಾ ಮಾತನಾಡಿ, ಇದು 57 ಕೋಟಿ ವೆಚ್ಚದ ಕಾಮಗಾರಿಯಾಗಿದ್ದು, 15ಮೀ ಅಗಲದ ದ್ವಿಪಥ ರಸ್ತೆ, ಸರ್ವೀಸ್ ರಸ್ತೆ, ಚರಂಡಿ, 5 ಕಡೆ ಜಂಕ್ಷನ್, ಲಕ್ಷ್ಮಣ ತೀರ್ಥ ನದಿ ಹೊಸ ಸೇತುವೆ ಪಕ್ಕದಲ್ಲಿ ಮತ್ತೊಂದು ಸೇತುವೆ ನಿರ್ಮಾಣ, ನಂತರ ಹಳೇ ಸೇತುವೆ ಕೆಡವಿ ಅದೇ ಜಾಗದಲ್ಲಿ ಸೇತುವೆ ನಿರ್ಮಾಣವಾಗಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಅನೇಕ ಸದಸ್ಯರು ನಗರದ ವಿವಿಧೆಡೆಯಿಂದ ಬರುವ ಮಳೆ ನೀರು ಹರಿದು ಹೋಗಲು ವ್ಯವಸ್ಥಿತ ಚರಂಡಿ, ಸ್ಕೈವಾಕ್ ನಿರ್ಮಿಸಬೇಕು. ಜಂಕ್ಷನ್‌ಗಳಲ್ಲಿ ಸಿಗ್ನಲ್, ರಸ್ತೆ ಮಧ್ಯ ದೀಪ ಅಳವಡಿಕೆ, ನೀರು ಸರಾಗವಾಗಿ ಹರಿದು ಹೋಗಲು ಅಗತ್ಯ ಕ್ರಮವಹಿಸಬೇಕು. ಇಲ್ಲದಿದ್ದರೇ ಕಾಮಗಾರಿ ನಡೆಸಲು ಬಿಡಲ್ಲ ಎಂದರು.

ಶಾಸಕರು ಮಧ್ಯ ಪ್ರವೇಶಿಸಿ ಸದಸ್ಯರ ಸಲಹೆ ಪರಿಗಣಿಸಿ ಕಾಮಗಾರಿ ನಡೆಸಬೇಕು. ಹೆದ್ದಾರಿ, ನಗರಸಭೆ, ಒಳಚರಂಡಿ ಮಂಡಳಿಯವರೊಂದಿಗೆ ಪರಿಶೀಲಿಸಿ ಆಗಬೇಕಿರುವ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ನಾನು ಈಗಾಗಲೇ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಮೂಲಕ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮೂಕನಹಳ್ಳಿಯಿಂದ ಅರಸು ಮತ್ಥಳಿವರೆಗೆ ಜೋಡಿ ರಸ್ತೆ ವಿಸ್ತರಿಸುವಂತೆ ಮನವಿ ಮಾಡಿದ್ದೇನೆ. ಇಂಜಿನಿಯರ್‌ಗಳು ಹಿರಿಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿ ನಡೆಸಬೇಕು ಎಂದರು.

ಗೊಂದಲ ನಿವಾರಿಸಿ: ಸದಸ್ಯರಾದ ಕೃಷ್ಣರಾಜಗುಪ್ತ, ಶರವಣ, ಸ್ವಾಮಿಗೌಡ, ರಮೇಶ್, ಮಾಲಿಕ್ ಪಾಷಾ, ಸೈಯದ್ ಯೂನಸ್ ಮತ್ತಿತರರು ನಗರದ ರಸ್ತೆಗಳೆಲ್ಲಾ ಗುಂಡಿ ಬಿದ್ದು ತಿರುಗಾಡಲಾಗದ ಪರಿಸ್ಥಿತಿ ಎದುರಾಗಿ, ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ. ಪ್ರಮುಖ ರಸ್ತೆಗಳ ಗುಂಡಿ ಮುಚ್ಚಲು ಲೋಕೋಪ ಯೋಗಿ– ನಗರಸಭೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ನಮ್ಮ ವ್ಯಾಪ್ತಿಗೆ ಬರಲ್ಲವೆಂದು ಸಬೂಬು ಹೇಳುತ್ತಿದ್ದಾರೆ. ನಮಗೆ ಗೊಂದಲ ಉಂಟಾಗಿದ್ದು, ಯಾವ ರಸ್ತೆಗಳು ಯಾವ್ಯಾವ ವ್ಯಾಪ್ತಿಗೆ ಬರಲಿದೆ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

8.70 ಕಿಮೀ ಲೋಕೋಪಯೋಗಿ ವ್ಯಾಪ್ತಿ: ನಗರದೊಳಗಿನ ರಸ್ತೆಗಳ ಬಗ್ಗೆ ಮಾಹಿತಿ ನೀಡಿದ ಲೋಕೋಪಯೋಗಿ ಇಲಾಖೆ ಎಇಇ ಯತೀಶ್, 2014ರಲ್ಲಿ ನಗರಸಭೆ, ಪುರಸಭೆ, ಪಪಂಗಳಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆಗಳೇ ನಿರ್ವಹಿಸಬೇಕೆಂದು ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಇಲಾಖೆ ವ್ಯಾಪ್ತಿಯಲ್ಲಿದ್ದರೂ ಗುಂಡಿ ಮುಚ್ಚಲು ಅನುದಾನ ಬರಲ್ಲ. ಆದರೆ ಮರು ಡಾಂಬರೀಕರಣಕ್ಕೆ ಅವಕಾಶವಿದೆ ಎಂದು ಹೇಳಿ, ಇಲಾಖೆಗೆ ನಗರದೊಳಗಿನ ರಸ್ತೆಗಳ ಪೈಕಿ ಶಿಕ್ಷಕರ ಭವನ– ಕಾಫಿವರ್ಕ್ಸ್ ರಸ್ತೆ, ಕಲ್ಪತರು ವೃತ್ತದಿಂದ– ಟಿಎಪಿಸಿಎಂಎಸ್ ರಸ್ತೆ–ರತ್ನಪುರಿ ರಸ್ತೆ ಜಂಕ್ಷನ್, ಅರಸು ಮತ್ಥಳಿಯಿಂದ ಹಳೆ ಸೇತುವೆ–ಹಾಳಗೆರೆ ಜಂಕ್ಷನ್, ಹುಣಸೂರು –ಪಿರಿಯಾಪಟ್ಟಣ ರಸ್ತೆಯಿಂದ ನಿಲುವಾಗಿಲು ರಸ್ತೆ, ಸೇತುವೆಯ ನಾಗರಾ ಜಶೆಟ್ಟಿ ಅಂಗಡಿಯಿಂದ ಕಲ್ಕುಣಿಕೆ ಊರೊಳಗಿಂದ ಶನಿದೇವರ ದೇವಸ್ಥಾನದ ವರೆಗಿನ ರಸ್ತೆ, ಸಂವಿಧಾನ ಸರ್ಕಲ್‌ನಿಂದ ಚಿಕ್ಕಹುಣಸೂರು ರಸ್ತೆ ಸೇರಿದಂತೆ ಒಟ್ಟು 8.70ಕಿ.ಮೀ. ರಸ್ತೆ ವ್ಯಾಪ್ತಿಗೆ ಬರಲಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಜಿ.ಡಿ. ಹರೀಶ್‌ಗೌಡ ಈ ಬಗ್ಗೆ ಲೋಕೋಪಯೋಗಿ ಸಚಿವರೊಂದಿಗೆ ಚರ್ಚಿಸಿ ಅನುದಾನ ತರುವೆ. ಸಾಲದಿದ್ದಲ್ಲಿ ನಗರಸಭೆ ಹಾಗೂ ಶಾಸಕರ ನಿಧಿಯ ಅನುದಾನ ನೀಡುವೆ. ಆ.11ರೊಳಗೆ ಬೇಕಾಗುವ ಅನುದಾನದ ಬಗ್ಗೆ ಅಂದಾಜು ಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಗೆ ಸೂಚಿಸಿದರು.

ಇದೇ ವೇಳೆ ಮಳೆನಿಂತ ನಂತರ ನಗರಸಭೆ ವತಿಯಿಂದಲೇ ಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗುವುದು ಎಂದು ಅಧ್ಯಕ್ಷ ಗಣೇಶ್‌ಕುಮಾರಸ್ವಾಮಿ, ಪೌರಾಯುಕ್ತೆ ಎಂ.ಮಾನಸ ಪ್ರಕಟಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಆಶಾ, ಸ್ಥಾಯಿ ಸಮಿತಿ ಅಧ್ಯಕ್ಷ ಹರೀಶ್‌ಕುಮಾರ್, ಪೌರಾಯುಕ್ತೆ ಮಾನಸ, ಸದಸ್ಯರು, ಎಇಇಗಳಾದ ಶರ್ಮಿಳ, ಸೌಮ್ಯ, ಸೇರಿದಂತೆ ಹೆದ್ದಾರಿ ಇಂಜಿನಿಯರ್ ತಬ್ಸಮ್, ಇಂಜಿನಿಯರ್ ಪ್ರಭಾಕರ್ ಮತ್ತಿತರರಿದ್ದರು.

ಅಭಿವೃದ್ಧಿ ಕಾಮಗಾರಿಗೆ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ ನೀಡಿದರು.

ನಂಜನಗೂಡು/ಮಲ್ಕುಂಡಿ, ಆ.5– ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮೂಲ ಸೌಕರ್ಯ ಒದಗಿಸುವ ಸಲುವಾಗಿ 1.80 ಕೋಟಿ ವೆಚ್ಚದ ಸಿಸಿ ರಸ್ತೆ, ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ದೇವಿರಮ್ಮನಹಳ್ಳಿ ಪಾಳ್ಯ, ದೇವಿರಮ್ಮನಹಳ್ಳಿಹುಂಡಿ, ಸೂರಹಳ್ಳಿ, ಬ್ಯಾಳಾರುಹುಂಡಿ, ಮಾಕನಪುರ, ಮಾಡ್ರಹಳ್ಳಿ, ಗೊಣತಕಾಲ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯನವರು 5 ಗ್ಯಾರಂಟಿಗಳನ್ನು ಜಾರಿಗೊಳಿಸಿ ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ಕ್ಷೇತ್ರಕ್ಕೆ ಪ್ರತಿ ವರ್ಷ 150 ಕೋಟಿ ರೂ. ಗ್ಯಾರಂಟಿ ಯೋಜನೆಗಳಿಗೆ ಬರುತ್ತಿದೆ. ಗ್ಯಾರಂಟಿ ಯೋಜನೆ ಅನುಷ್ಠಾನದ ಜೊತೆಗೆ 2 ವರ್ಷಗಳಲ್ಲಿ ನಂಜನಗೂಡು ಕ್ಷೇತ್ರಕ್ಕೆ 450 ಕೋಟಿಗಿಂತಲೂ ಅಧಿಕ ಅನುದಾನ ಕೊಡುವ ಮೂಲಕ ಕ್ಷೇತ್ರದ ಗ್ರಾಮಗಳ ಅಭಿವೃದ್ಧಿಗೂ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ತಾಲೂಕಿನ ಪಾಳ್ಯದಲ್ಲಿ ಎಸ್‌ಸಿಪಿ ಯೋಜನೆಯಡಿ 25 ಲಕ್ಷ, ಮಾಕನಪುರದಲ್ಲಿ 40 ಲಕ್ಷ, ದೇವಿರಮ್ಮನಹಳ್ಳಿ ಹುಂಡಿಯಲ್ಲಿ 20 ಲಕ್ಷ ವೆಚ್ಚದಲ್ಲಿ ಸಾಮಾನ್ಯ ವರ್ಗದ ಬೀದಿ ಸಿಸಿ ರಸ್ತೆ ಮತ್ತು ಚರಂಡಿ, ವಳಗೆರೆಯಲ್ಲಿ 15 ಲಕ್ಷ, ಬ್ಯಾಳಾರು ಹುಂಡಿಯಲ್ಲಿ 30 ಲಕ್ಷ, ಮಾಡ್ರಹಳ್ಳಿಯಲ್ಲಿ 25 ಲಕ್ಷ, ಗೊಣತಗಾಲದಲ್ಲಿ 10 ಲಕ್ಷ ಸೇರಿದಂತೆ 1.80 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಶ್ರೀಕಂಠ ನಾಯಕ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಕರಳಪುರ ನಾಗರಾಜು, ಕಾಂಗ್ರೆಸ್ ಎಸ್‌ಸಿ ಬ್ಲಾಕ್ ಅಧ್ಯಕ್ಷ ಉಪ್ಪಿನಹಳ್ಳಿ ಶಿವಣ್ಣ, ಮುಖಂಡರಾದ ದೊರೆಸ್ವಾಮಿ ನಾಯಕ, ಕಳಲೆ ರಾಜೇಶ್, ರಂಗಸ್ವಾಮಿ, ತಗಡೂರು ನಾಯಕ, ಕೂಡ್ಲಾಪುರ ರಾಜು, ರಮೇಶ, ಸೋಮಣ್ಣ, ಬೀರೇಶ, ಶಿವಪ್ಪದೇವರು ನವಿಲೂರು ಗ್ರಾಪಂ ಅಧ್ಯಕ್ಷ ಮಹದೇವಯ್ಯ, ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ಮುಖಂಡರಾದ ರೇವಣ್ಣ, ಶಿವಕುಮಾರ್, ಕಾಂಗ್ರೆಸ್ ಯುವ ಘಟಕ ತಾಲೂಕು ತಾಲೂಕು ಅಧ್ಯಕ್ಷ ವಿಜಯಕುಮಾರ್, ಗ್ರಾಮಾಂತರ ಜಿಲ್ಲಾ ಯೂತ್ ಅಧ್ಯಕ್ಷ ಚಂದನ್‌ಗೌಡ, ಇಂಜಿನಿಯರ್ ಯಶವಂತ್, ನಾಗರಾಜ್ ಸೇರಿದಂತೆ ಹಲವರಿದ್ದರು.

ತೆರಿಗೆ ವಂಚನೆ ಪ್ರಕರಣ ಸಿಐಡಿಗೆ ವಹಿಸುವಂತೆ ಪ್ರತಿಭಟನೆ

ತಿ.ನರಸೀಪುರ, ಆ.5– ಪಟ್ಟಣದ ಪುರಸಭೆಯಲ್ಲಿ ನಡೆದಿರುವ ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಟಿ.ಎಂ.ನಂಜುಂಡಸ್ವಾಮಿ ಹಾಗೂ ಅವರ ಕುಟುಂಬದವರ ಹೆಸರಿನಲ್ಲಿರುವ ಆಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ನೇತೃತ್ವದಲ್ಲಿ ಸಮಿತಿ ಮುಖಂಡರು, ಕಾರ್ಯಕರ್ತರು ಹಾಗೂ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಪಟ್ಟಣದ ತಾಲೂಕು ಆಡಳಿತಸೌಧದ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

ಸಮಿತಿ ರಾಜ್ಯ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್ ಮಾತನಾಡಿ, ಕೆನರಾ ಬ್ಯಾಂಕ್ ಸೀಲ್ ಅನ್ನು ನಕಲು ಮಾಡಿ ಪಟ್ಟಣದ ಪುರಸಭೆಗೆ ತೆರಿಗೆ ವಂಚನೆ ಮಾಡಿರುವ ಸಂಬಂಧ ಪುರಸಭೆ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಮತ್ತು ತೆರಿಗೆದಾರರ ಮೇಲೆ ಮುಖ್ಯಾಧಿಕಾರಿ ದೂರು ನೀಡಿದ್ದಾರೆ. ಇ–ಆಸ್ತಿ ಮಾಡುವಾಗ ದಾಖಲಾತಿ ಸ್ವೀಕೃತ ವಿಭಾಗದಿಂದ ಕೇಸ್ ವರ್ಕರ್ ಹಾಗೂ ಕಂದಾಯಾಧಿಕಾರಿ ಸೇರಿದಂತೆ ಎಲ್ಲರೂ ಪ್ರತಿಯೊಂದು ದಾಖಲೆಗಳನ್ನು ಪರಿಶೀಲಿಸಿ ಎಲ್ಲಾ ದಾಖಲಾತಿಗಳು ಕ್ರಮಬದ್ಧವಾಗಿದ್ದಲ್ಲಿ ಹಂತ ಹಂತವಾಗಿ ಸಂಬಂಧಿಸಿದವರ ಬಳಿ ಇ–ಆಸ್ತಿ ಕಡತಗಳು ಟಿಪ್ಪಣಿ ವರದಿಯಾಗಿ ಅಂತಿಮವಾಗಿ ಮುಖ್ಯಾಧಿಕಾರಿ ಸಹಿಗಾಗಿ ಹೋಗಬೇಕಿದೆ. ಆದರೆ ಇದ್ಯಾವುದನ್ನು ಪರಿಶೀಲಿಸದೆ ಸಾವಿರಾರು ಇ–ಆಸ್ತಿ ಖಾತೆ ಆಗಿದೆ ಎಂದು ಮುಖ್ಯಾಧಿಕಾರಿಗಳು ತಿಳಿಸಿರುವ ಬಗ್ಗೆ ಸೂಕ್ತ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ಮುಖ್ಯಾಧಿಕಾರಿಗಳು ಸರ್ಕಾರದ ಬೊಕ್ಕಸಕ್ಕೆ 3,45,626 ರೂ. ನಷ್ಟವಾಗಿದೆ ಎಂದು ದೂರು ನೀಡಿದ್ದು, ವ್ಯಕ್ತಿಯೊಬ್ಬರ ಜೊತೆ ಮೊಬೈಲ್‌ನಲ್ಲಿ ಮಾತನಾಡುವಾಗ ಟಿ.ಎಂ.ನಂಜುಂಡಸ್ವಾಮಿ ಅವರು 40 ಕೋಟಿ ರೂ. ವಂಚನೆ ಮಾಡಿದ್ದಾರೆ ಎಂದು ತಿಳಿಸಿದ್ದು, ಈ ಆಡಿಯೋ ವೈರಲ್ ಆಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾದ ಮುಖ್ಯಾಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳ ರಕ್ಷಣೆಗೆ ನಿಂತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ. ಆದ್ದರಿಂದ ಸಂಬಂಧಿಸಿದ ಅಧೀನ ಅಧಿಕಾರಿಗಳ ವಿರುದ್ಧವು ಸಮಗ್ರ ತನಿಖೆ ನಡೆಸಿ ಕರ್ತವ್ಯ ಲೋಪವೆಸಗಿರುವ ತಪ್ಪಿತಸ್ಥ ಅಧಿಕಾರಿಗಳನ್ನು ಕರ್ತವ್ಯದಿಂದ ವಜಾ ಮಾಡಬೇಕೆಂದು ಸಮಿತಿ ಒತ್ತಾಯಿಸುತ್ತದೆ ಎಂದರು.

ರೈತ ಮುಖಂಡ ಕಳ್ಳೀಪುರ ಮಹದೇವಸ್ವಾಮಿ ಹಾಗೂ ಆಲಗೂಡು ಮಹದೇವ್ ಮಾತನಾಡಿ, ಪ್ರಕರಣವನ್ನು ಸಿಐಡಿ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದರು.



ದಲಿತ ಸಂಘರ್ಷ ಸಮಿತಿ, ರೈತ ಸಂಘ ಮತ್ತು ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ರಾಜು, ಮರಿಸ್ವಾಮಿ, ಪ್ರಭಾಕರ್, ಮನೋಜ್ ಕುಮಾರ್, ಗೋವಿಂದ ರಾಜು, ರಾಚಪ್ಪ, ಕುಮಾರ್, ಶಿವಕುಮಾರ್, ಗವಿಸಿದ್ದಯ್ಯ, ಪರಶುರಾಮ್, ಶಿವಕುಮಾರ್, ಜಯಣ್ಣ, ಮಹೇಶ್, ಸ್ವಾಮಿ, ಎಂ.ಕೆ.ಮಲ್ಲೇಶ್, ಕೃಷ್ಣ, ರವಿಕಾಂತ್, ಶಿವು, ಅರ್ಜುನ್, ಚಿನ್ನಸ್ವಾಮಿ, ಮಹಾದೇವಸ್ವಾಮಿ, ರೈತ ಮುಖಂಡರಾದ ರಾಮಕೃಷ್ಣ, ಚೆಲುವರಾಜು, ಶಿವನಂಜು, ರಾಜು, ಶಾಂತನಾಗರಾಜು, ಶಂಕರೇಗೌಡ, ಸೋಮಣ್ಣ, ಜಗದೀಶ್, ವೆಂಕಟೇಶ್ ಇತರರಿದ್ದರು.

ವೆಂಕಟರಮಣಶೆಟ್ಟಿ ನಿಧನ

ಭೇರ್ಯ, ಆ.5– ಸಾಲಿಗ್ರಾಮ ತಾಲೂಕಿನ ಬಟಿಗನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ವೆಂಕಟರಮಣಶೆಟ್ಟಿ (85) ಸೋಮವಾರ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಐದನೇ ಪುಟದಿಂದ

ಬಸ್ ಸಂಚಾರ ಆರಂಭ

ಸಂಚರಿಸಿದವು, ಇದರೊಂದಿಗೆ ಸರ್ಕಾರ ಹಲವೆಡೆ ಖಾಸಗಿ ಬಸ್‌ಗಳ ಸಹಕಾರ ಪಡೆದುಕೊಂಡಿದ್ದರಿಂದ ಇಂತಹ ಪ್ರದೇಶಗಳಲ್ಲಿ ಮುಷ್ಕರದ ಬಿಸಿ ತಟ್ಟಲಿಲ್ಲ. ಕೆಲವು ಬಸ್‌ಗಳು ರಸ್ತೆಗಿಳಿದ ಬಗ್ಗೆ ತನ್ನದೇ ಧಾಟಿಯಲ್ಲಿ ಸಮರ್ಥಿಸಿಕೊಂಡಿರುವ ಒಕ್ಕೂಟ, ಇಂದು ಒಂದು ದಿನದ ಮಟ್ಟಿಗೆ ಬಸ್ ಸಂಚಾರಕ್ಕೆ ಅನುವು ಮಾಡುವಂತೆ ಆದೇಶಿಸಿತ್ತು. ಸಾರಿಗೆ ಬಸ್ ಮುಷ್ಕರದ ಹಿನ್ನೆಲೆಯಲ್ಲಿ ಕೆಲವು ಪರೀಕ್ಷೆಗಳನ್ನು ಮುಂದೂಡಬೇಕಾಯಿತು, ರಾಜ್ಯದ ಹಲವೆಡೆ ಸಾರಿಗೆ ಮುಷ್ಕರ ಇದೆಯೋ, ಇಲ್ಲವೋ ಎಂಬ ಬಗ್ಗೆ ಗೊಂದಲವೂ ಸೃಷ್ಟಿಯಾಗಿತ್ತು. ಉತ್ತರ ಕರ್ನಾಟಕದ ಬಹಳಷ್ಟು ಕಡೆಗಳಲ್ಲಿ ಮುಷ್ಕರದ ಬಿಸಿ ತಟ್ಟಿತ್ತು. ಮನೆಯಿಂದ ಹೊರಟ ವಿದ್ಯಾರ್ಥಿಗಳು ಬಸ್‌ಗಳಿಲ್ಲದೆ ಹಿಂತಿರುಗಿದ ದೃಶ್ಯಗಳೂ ಕೆಲವೆಡೆ ಕಂಡುಬಂದಿತು. ದೂರದ ಊರುಗಳಿಂದ ಬರುವ ಬಸ್‌ಗಳಿಗೆ ಮುಷ್ಕರ ನಿರತರು ತೊಂದರೆ ಮಾಡದಂತೆ ಪೊಲೀಸ್ ಭದ್ರತೆಯಲ್ಲಿ ನಿಲ್ದಾಣದವರೆಗೂ ಬೆಂಗಾವಲಿನಲ್ಲಿ ಕರೆತಂದು ಪ್ರಯಾಣಿಕರು ಮನೆಗಳಿಗೆ ತೆರಳುವ ವ್ಯವಸ್ಥೆ ಮಾಡಲಾಯಿತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಹುತೇಕ ಸಹಜ ಸ್ಥಿತಿಗೆ ಬಸ್ ಸಂಚಾರ

ಜೊತೆಗೆ ಬಸ್‌ನಲ್ಲಿ ತುಂಬ ರಶ್ ಇತ್ತು ಎಂದು ಹೇಳಿದರು. ಬಳಿಕ ನಿಲ್ದಾಣದಲ್ಲಿ ಆಗಷ್ಟೇ ಕರ್ತವ್ಯಕ್ಕೆ ಹಾಜರಾಗಿದ್ದ ಚಾಲಕರು ಹಾಗೂ ನಿರ್ವಾಹಕರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಈಗ ಗರಿಷ್ಠ ಪ್ರಮಾಣದಲ್ಲಿ ನೈಟ್ ಹಾಲ್ಟ್ ಬಸ್‌ಗಳ ಸಂಚಾರಕ್ಕೆ ಚಾಲನೆ ದೊರೆತಿದೆ. ಸೆಕೆಂಡ್ ಶಿಫ್ಟ್ ಬಸ್‌ಗಳ ಸಂಚಾರ ಬೆರಳೆಣಿಕೆಯಷ್ಟು ಇದೆ. ಇದರ ಹೊರತಾಗಿ ಜನರಲ್ ಶಿಫ್ಟ್ ಬಸ್‌ಗಳ ಸಂಚಾರ ಸದ್ಯ ಇಲ್ಲ ಎಂದು ತಿಳಿಸಿದರು.

ಇದೇ ಬಸ್ ನಿಲ್ದಾಣ ಬಳಿಯ ಆಟೋ ರಿಕ್ಷಾ ನಿಲ್ದಾಣದ ಚಾಲಕರು 'ಮಿತ್ರ'ನೊಂದಿಗೆ ಮಾತನಾಡಿ, ಖಾಸಗಿ ಬಸ್‌ಗಳನ್ನು ನಿಯೋಜಿಸಿದ್ದ ಹಿನ್ನೆಲೆಯಲ್ಲಿ ನಮ್ಮ ಆಟೋಗಳಿಗೆ ಅಂತಹ ಬೇಡಿಕೆ ಯೇನು ಪ್ರಯಾಣಿಕರಿಂದ ದೊರೆಯು ಲಿಲ್ಲ. ಖಾಸಗಿ ಬಸ್‌ಗಳು ಇಲ್ಲವಾಗಿದ್ದರೆ ಪ್ರಯಾಣಿಕರು ಆಟೋಗಳನ್ನು ಅವಲಂಬಿಸುತ್ತಿದ್ದರು ಎಂದು ಬೇಸರ ವ್ಯಕ್ತಪಡಿಸಿದರು.

ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಿರ್ವಾಹಕರು ಹಾಗೂ ಸಿಬ್ಬಂದಿ 'ಮಿತ್ರ'ನೊಂದಿಗೆ ಮಾತನಾಡಿ, ಮುಷ್ಕರ ಮುಂದೂಡಿಕೆ ಸುದ್ದಿ ಬರುತ್ತಿದ್ದಂತೆ ಕರ್ತವ್ಯಕ್ಕೆ ಮರಳಿದ್ದೇವೆ. ಸಂಜೆ 5.30ರ ವೇಳೆಗೆ ಕಾರ್ಯಾಚರಣೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಸಾಕಷ್ಟು ನೌಕರರು ಕರ್ತವ್ಯಕ್ಕೆ ಇನ್ನು ಮರಳಿಲ್ಲ. ನಾಳೆ ಪೂರ್ಣ ಪ್ರಮಾಣದಲ್ಲಿ ಬಸ್ ಸಂಚಾರ ವ್ಯವಸ್ಥೆ ಸಹಜಸ್ಥಿತಿಗೆ ಬರಲಿದೆ ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ಈ ಸಂಘಟನೆಯ ಮೈಸೂರು ಘಟಕದ ಗೌರವಾಧ್ಯಕ್ಷ ಎಂ.ವಿಜಯ್ ಕುಮಾರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮುಷ್ಕರ ಮುಂದೂಡಲಾಗಿದೆ. ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿಯೂ ನೌಕರರು ಕರ್ತವ್ಯಕ್ಕೆ ಮರಳಿದ್ದಾರೆ. ಹೀಗಾಗಿ ಮಂಗಳ ವಾರ ಸಂಜೆ ವೇಳೆಗೆ ಸಾರಿಗೆ ಬಸ್ ಸಂಚಾರದ ಕಾರ್ಯಾಚರಣೆ ಆರಂಭವಾಗಿ ಬಹುತೇಕ ಸಹಜ ಸ್ಥಿತಿಗೆ ಬಂದಿದೆ. ಚಾಲಕರು, ನಿರ್ವಾಹಕರು, ಮ್ಯಾಕಾನಿಕ್ ಗಳು, ಚಾಲಕ ಕಂ ನಿರ್ವಾಹಕರು ಮತ್ತು ಇತರೆ ಸಿಬ್ಬಂದಿ ಸೇರಿದಂತೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸುಮಾರು 2,600 ನೌಕರರು ಇದ್ದು, ಬಹುತೇಕ ಎಲ್ಲರೂ ಮುಷ್ಕರದಲ್ಲಿ ಭಾಗವಹಿಸಿದ್ದರು ಎಂದು ಹೇಳಿದರು.

ಕಣ್ತುಂಬಿಕೊಳ್ಳುತ್ತಿರುವ ಮೈಸೂರು ಜನ

ಮಧ್ಯೆ ಶಾಂತ ರೀತಿ ಆನೆಗಳು ಹೆಜ್ಜೆ ಹಾಕಿರುವುದನ್ನು ಗಮನಿಸಿದರೆ, ಅವು ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಸಜ್ಜಾಗಿರುವುದು ದೃಢಪಡುತ್ತದೆ ಎಂದರು. ಆ.10ರಂದು ಸಂಜೆ ಗಜಪಡೆ ಅರಮನೆ ಪ್ರವೇಶಿಸಲಿವೆ. ಅಲ್ಲಿಯವರೆಗೂ ಅರಣ್ಯ ಭವನದಲ್ಲಿಯೇ ಬೀಡು ಬಿಟ್ಟಿರುತ್ತವೆ. ಇಲಾಖೆ ವತಿಯಿಂದ ಎಲ್ಲಾ ಆನೆಗಳಿಗೂ ಹಸಿ ಮತ್ತು ಒಣ ಹುಲ್ಲು, ಕುಸುರೆ, ಭತ್ತ ಸೇರಿದಂತೆ ವಿಶೇಷ ಆಹಾರ ಪೂರೈಸಲಾಗುತ್ತದೆ. ಆನೆಗಳ ಮಾವುತರು, ಕಾವಾಡಿಗಳ ಕುಟುಂಬದ ಸದಸ್ಯರಿಗೂ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಅರಮನೆಗೆ ಪ್ರವೇಶ ಪಡೆದ ನಂತರ ಎಲ್ಲಾ ಆನೆಗಳಿಗೂ ಪೌಷ್ಟಿಕ ಆಹಾರ ನೀಡಲಾಗುತ್ತದೆ ಎಂದು ತಿಳಿಸಿದರು.

ಆರೋಗ್ಯ ತಪಾಸಣೆ ಮಾಡಿಯೇ ಕರೆತರಲಾಗಿದೆ: ದಸರಾ ಗಜಪಡೆ ಆಯ್ಕೆ ಪ್ರಕ್ರಿಯೆ ವೇಳೆ ಎಲ್ಲಾ ಆನೆಗಳಿಗೂ ಆರೋಗ್ಯ ತಪಾಸಣೆ ನಡೆಸಿ ಆರೋಗ್ಯವಾಗಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಆನೆಗಳ ಹೃದಯ, ಕಿಡ್ನಿ ಸೇರಿದಂತೆ ದೇಹದ ಎಲ್ಲಾ ಅಂಗಾಂಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಪಶುವೈದ್ಯರು ದೃಢಪಡಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಆರ್‌ಎಫ್‌ಓ ನದೀಮ್, ಪಶುವೈದ್ಯ ಆದರ್ಶ್ ಇದ್ದರು.

ಜಲಪ್ರಳಯಕ್ಕೆ ಕೊಚ್ಚಿ ಹೋದ ಗ್ರಾಮ

ಹಾನಿಯಾಗಿರುವ ಮಾಹಿತಿ ಇದೆ. ಸ್ಥಳದಲ್ಲಿ ರಕ್ಷಣಾ ಕಾರ್ಯ ನಡೆಯುತ್ತಿದೆ ಎಂದು ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

ಉತ್ತರಾಖಂಡದಲ್ಲಿ ವಿಪತ್ತು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳಿಗೆ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ಗಳ ಬಳಸಿಕೊಳ್ಳಲಾಗಿದೆ. ಈ ಹೆಲಿಕಾಪ್ಟರ್‌ಗಳು ಚಂಡೀಗಢ, ಬರೇಲಿ ಮತ್ತು ಸರ್ಸಾವಾ ವಾಯುನೆಲೆಗಳಲ್ಲಿ ಸನ್ನದ್ಧವಾಗಿವೆ.

ರಾಜ್ಯ ಸರ್ಕಾರದ ಮೇಲ್ವಿಚಾರಣೆಯಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ. ಖೀರ್ ಗಂಗಾ ನದಿಯ ಜಲಾನಯನ ಪ್ರದೇಶದಲ್ಲಿ ಮೇಘಸ್ಫೋಟದಿಂದ ಉಂಟಾದ ಪ್ರವಾಹವು ಧರಾಲಿಯನ್ನು ಆವರಿಸಿ, ಮನೆಗಳಿಗೆ ಹಾನಿಯನ್ನುಂಟುಮಾಡಿದೆ. ಇದರಿಂದ ಹಲವಾರು ಮನೆಗಳು, ಹೋಟೆಲ್‌ಗಳು ಕೊಚ್ಚಿಹೋದವು. ಗಂಗೋತ್ರಿಗೆ ಹೋಗುವ ಯಾತ್ರಾರ್ಥಿಗಳಿಗೆ ಧರಾಲಿ ಒಂದು ಪ್ರಮುಖ ನಿಲುಗಡೆ ತಾಣವಾಗಿದ್ದು, ಹಲವಾರು ಹೋಟೆಲ್‌ಗಳು, ಹೋಂಸ್ಟೇಗಳು ಮತ್ತು ರೆಸ್ಟೋರೆಂಟ್‌ಗಳನ್ನು ಹೊಂದಿದೆ.

ಪ್ರಧಾನಿ ಸಂತಾಪ: ಪ್ರಧಾನಿ ನರೇಂದ್ರ ಮೋದಿ ಅವರು ಸಂತ್ರಸ್ತರಿಗೆ ಸಂತಾಪ ಸೂಚಿಸಿದ್ದು, ಪರಿಸ್ಥಿತಿಯ ಕುರಿತು ಮಾಹಿತಿ ಪಡೆಯಲು ಮುಖ್ಯಮಂತ್ರಿ ಧಾಮಿ ಅವರೊಂದಿಗೆ ಮಾತನಾಡಿದ್ದಾರೆ. ಈ ಬಗ್ಗೆ ಹಿಂದಿಯಲ್ಲಿ ಪೋಸ್ಟ್ ಮಾಡಿದ ಪ್ರಧಾನಿ ಮೋದಿ, "ಉತ್ತರಕಾಶಿಯ ಧರಾಲಿಯಲ್ಲಿ ಸಂಭವಿಸಿದ ದುರಂತದಿಂದ ಹಾನಿಗೊಳಗಾದವರಿಗೆ ನಾನು ಸಂತಾಪ ಸೂಚಿಸುತ್ತೇನೆ. ಅವಶೇಷಗಳಡಿ ಸಿಲುಕಿದವರು ಸುರಕ್ಷಿತವಾಗಿರಲಿ ಎಂದು ನಾನು ಬಯಸುತ್ತೇನೆ. ನಾನು ಮುಖ್ಯಮಂತ್ರಿ ಪುಷ್ಕರ್ ಧಾಮಿ ಅವರೊಂದಿಗೆ ಮಾತನಾಡಿದ್ದೇನೆ ಮತ್ತು ಪರಿಸ್ಥಿತಿಯನ್ನು ಅವಲೋಕಿಸಿದ್ದೇನೆ. ರಾಜ್ಯ ಸರ್ಕಾರದ ಮೇಲ್ವಿಚಾರಣೆಯಲ್ಲಿ ಪರಿಹಾರ ಮತ್ತು ರಕ್ಷಣಾ ತಂಡಗಳು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿವೆ. ಜನರಿಗೆ ಸಹಾಯ ತಲುಪಲು ಎಲ್ಲ ಪ್ರಯತ್ನವನ್ನು ಮಾಡಲಾಗುತ್ತಿದೆ" ಎಂದಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ "ಉತ್ತರಕಾಶಿಯಲ್ಲಿ (ಉತ್ತರಾಖಂಡ) ಉಂಟಾದ ದಿಢೀರ್ ಪ್ರವಾಹದಿಂದ ಉಂಟಾದ ವಿನಾಶದ ದೃಶ್ಯಗಳನ್ನು ನೋಡುತ್ತಿದ್ದೇನೆ. ದುರಂತದಿಂದ ಹಾನಿಗೊಳಗಾದ ಜನರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಒಟ್ಟಾಗಿ ಕಾರ್ಯನಿರ್ವಹಿಸುತ್ತಿವೆ, ಅಮೂಲ್ಯ ಜೀವಗಳನ್ನು ಉಳಿಸಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ" ಎಂದು ಪೋಸ್ಟ್ ಮಾಡಿದ್ದಾರೆ.

ಉತ್ತರಕಾಶಿಯ ಪ್ರವಾಹ ಘಟನೆಯ ಬಗ್ಗೆ ಉತ್ತರಾಖಂಡ ಮುಖ್ಯಮಂತ್ರಿ ಧಾಮಿ ಅವರೊಂದಿಗೆ ಮಾತನಾಡಿದ್ದೇನೆ ಎಂದು ಕೇಂದ್ರಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.


ಕೃತಕ ಗರ್ಭಧಾರಣೆ ಸೌಲಭ್ಯ

ಭರಿಸುವುದು ಕಷ್ಟವಾಗುತ್ತಿದೆ. ಐವಿಎಫ್ ತಂತ್ರಜ್ಞಾನದ ಮೂಲಕ ಮಕ್ಕಳನ್ನು ಪಡೆಯುವ ಮಧ್ಯಮ ವರ್ಗದ ದಂಪತಿಗೆ ಅನುಕೂಲ ಮಾಡಿಕೊಡುವುದು ರಾಜ್ಯ ಸರ್ಕಾರದ ಉದ್ದೇಶ. ಸದ್ಯದ ಪರಿಸ್ಥಿತಿಯಲ್ಲಿ ಕೃತಕ ಗರ್ಭಧಾರಣೆ ಮೂಲಕ ಮಕ್ಕಳನ್ನು ಪಡೆಯಲು ಖಾಸಗಿ ಆಸ್ಪತ್ರೆಗಳಲ್ಲಿ ಮೂರರಿಂದ ಐದು ಲಕ್ಷ ರೂ.ಗಳಷ್ಟು ವೆಚ್ಚ ಭರಿಸಬೇಕಿದೆ. ಸರ್ಕಾರವೇ ಐವಿಎಫ್ ಕೇಂದ್ರಗಳ ಸೌಲಭ್ಯ ಒದಗಿಸಿದರೆ ವೆಚ್ಚ ಬಹಳಷ್ಟು ಕಡಿಮೆಯಾಗಲಿದ್ದು, ಈ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ಐವಿಎಫ್ ಕೇಂದ್ರಗಳ ಸ್ಥಾಪನೆಗೆ ಸಿದ್ಧತೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಡ ರೈತರ ಭೂಮಿ ದಾಖಲೆ ತಿದ್ದುವ, ಲಪಟಾಯಿಸುವ ದುಷ್ಕೃತ್ಯಕ್ಕೆ ಶಾಶ್ವತ ಪರಿಹಾರ 'ಭೂ ಸುರಕ್ಷಾ'

- ಕಂದಾಯ ಸಚಿವ ಕೃಷ್ಣ ಬೈರೇಗೌಡರಿಂದ ಭೂ ದಾಖಲೆ ಸ್ಕ್ಯಾನಿಂಗ್ ಮೂಲಕ ಡಿಜಿಟಲೀಕರಣ ಅಭಿಯಾನಕ್ಕೆ ಚಾಲನೆ
- ಇನ್ನು ಮುಂದೆ ರೈತರ ವಂಚಿಸಲಾಗದು; ಅಗತ್ಯ ದಾಖಲೆ ಅವರಿಗೆ ತಕ್ಷಣ ಲಭ್ಯ
- ತಹಸೀಲ್ದಾರ್, ಎಸಿ ಕಚೇರಿ ಹಂತದಲ್ಲಿ ಭೂ ದಾಖಲೆ ಸ್ಕ್ಯಾನ್ ಮಾಡಿ ಸಂರಕ್ಷಣೆ

ಬೆಂಗಳೂರು, ಆ. 5(ಕೆಎಂಶಿ)– ರೈತರ ಶೋಷಣೆಗೆ ಶಾಶ್ವತ ಪರಿಹಾರ ಹಾಗೂ ಬೆರಳತುದಿಯಲ್ಲಿ ದಾಖಲೆ ಕೊಠಡಿಗೆ ತಲುಪಿಸುವುದೇ ಭೂ ಸುರಕ್ಷಾ ಅಭಿಯಾನದ ಮೂಲ ಧ್ಯೇಯ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಇಂದಿಲ್ಲಿ ತಿಳಿಸಿದ್ದಾರೆ.



ಕೃಷ್ಣ ಬೈರೇಗೌಡ

ನಗರ ಜಿಲ್ಲಾಡಳಿತ ಕಚೇರಿಯಲ್ಲಿನ ರೆಕಾರ್ಡ್ ರೂಂ ದಾಖಲೆಗಳನ್ನು "ಭೂ ಸುರಕ್ಷಾ" ಯೋಜನೆಯಡಿ ಸ್ಕ್ಯಾನಿಂಗ್ ಮಾಡಿ ಡಿಜಿಟಲೀಕರಣ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭೂ ಮಂಜೂರಾತಿಗೆ ಸಂಬಂಧಿಸಿದ ಮೂಲ ದಾಖಲೆ ಬಚ್ಚಿಡುವ ಹಾಗೂ ತಿದ್ದುವ ಮೂಲಕ ಬಡ ರೈತರನ್ನು ಶೋಷಿಸುವ ಕೆಲಸ ದಶಕಗಳಿಂದ ನಡೆಯುತ್ತಿದೆ. ಸರ್ಕಾರಿ ಕಚೇರಿ ಹಾಗೂ ಕೋರ್ಟ್ ಮೊಕದ್ದಮೆಗಳಿಗೆ ಅಲೆಯುವುದೇ ರೈತರ ಕೆಲಸವಾಗಿ ಹೋಗಿದೆ.

ಮತ್ತೊಂದೆಡೆ ಮಧ್ಯವರ್ತಿಗಳು ರೈತರನ್ನು ಶೋಷಿಸುತ್ತಿದ್ದಾರೆ. ಈ ಎಲ್ಲಾ ಶೋಷಣೆಗಳಿಂದ ಅನ್ನದಾತರಿಗೆ ನೆಮ್ಮದಿ ನೀಡಬೇಕು. ರೆಕಾರ್ಡ್ ರೂಂ ಅನ್ನು ಜನರ ಬೆರಳ ತುದಿಗೆ ತರಬೇಕು. ಸೌಲಭ್ಯ ಸರಳ ಹಾಗೂ ಸುಲಲಿತವಾಗಿ ಲಭ್ಯವಾಗುವಂತಿರಬೇಕು. ಅದಕ್ಕಾಗಿಯೇ ಭೂ ಸುರಕ್ಷಾ ಅಭಿಯಾನ ಎಂದರು.

ಎಲ್ಲಾ ತಹಶೀಲ್ದಾರ್ ಕಚೇರಿಗಳಲ್ಲಿ ಭೂ ದಾಖಲೆಗೆ ಸಂಬಂಧಿಸಿ 100 ಕೋಟಿಗೂ ಅಧಿಕ ಭೂದಾಖಲೆಗಳಿವೆ, ಈ ಪೈಕಿ 35.36 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ, ಇನ್ನೂ 35 ಕೋಟಿ ಪುಟಗಳು ಸ್ಕ್ಯಾನ್‌ಗೆ ಬಾಕಿ ಇವೆ.

ತಹಶೀಲ್ದಾರ್ ಕಚೇರಿಗಷ್ಟೇ ಈ ಕೆಲಸ ಸೀಮಿತವಾಗದೆ ಎಸಿ, ಡಿಸಿ ಕಚೇರಿಯಲ್ಲಿರುವ ದಾಖಲೆಗಳನ್ನೂ ಸ್ಕ್ಯಾನ್ ಮಾಡಲು ನಿರ್ಧರಿಸಲಾಗಿದೆ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ಮೂಲ ದಾಖಲೆಗಳ ಸ್ಕ್ಯಾನ್ ಮೂಲಕ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ ಎಂದರು.

ಎಲ್ಲಾ ತಹಶೀಲ್ದಾರ್ ಕಚೇರಿಗಳಲ್ಲಿ ಪ್ರತಿದಿನ ಸರಾಸರಿಯಾಗಿ 10 ಸಾವಿರ ಪುಟಗಳನ್ನು ಸ್ಕ್ಯಾನ್ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಕೆಲಸ ಮತ್ತಷ್ಟು ವೇಗ ಪಡೆಯಲಿದ್ದು, ಡಿಸೆಂಬರ್ ಒಳಗೆ ತಹಶೀಲ್ದಾರ್ ಕಚೇರಿಯ ಎಲ್ಲಾ ಮೂಲ ದಾಖಲೆ ಗಳನ್ನು ಸ್ಕ್ಯಾನ್ ಮಾಡಲಾಗುವುದು. 2026 ಮಾರ್ಚ್ ವೇಳೆಗೆ ಎಸಿ (ಉಪ ವಿಭಾಗಾಧಿಕಾರಿ) ಕಚೇರಿ ರೆಕಾರ್ಡ್ ರೂಂಗಳ ದಾಖಲೆಗಳ ಸ್ಕ್ಯಾನಿಂಗ್ ಮುಗಿಸಲಾಗುವುದು ಎಂದರು.

ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಿದ ದಾಖಲೆಗಳನ್ನು ರೈತರು ಸರ್ಕಾರಿ ಕಚೇರಿಗಳಿಗೆ ಅಲೆಯದೆ ಮನೆಯಿಂದಲೇ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ಪಡೆಯಬಹುದಾಗಿದೆ. ರೈತರು ನಾಡ ಕಚೇರಿಗೆ ತೆರಳಿ ಆನ್ಲೈನ್ ಮೂಲಕ ಅಧಿಕಾರಿಗಳ ಸಹಾಯದಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಕೆಗೆ ಅವಕಾಶ: ಸ್ಥಳೀಯ ಜನರಿಗೆ ಸಹಾಯವಾಗಬೇಕು ಎಂಬ ಕಾರಣಕ್ಕೆ ನಾಡ ಕಚೇರಿಯಲ್ಲಿ ಅರ್ಜಿ ಸಲ್ಲಿಕೆಗೆ ಇಂದಿನಿಂದ ಅವಕಾಶ ನೀಡಲಾಗಿದೆ, ಈವರೆಗೆ ರಾಜ್ಯಾದ್ಯಂತ 4 ಲಕ್ಷ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಜನರಿಗೆ ನೀಡಿದ್ದೇವೆ. ಜನ ಯಾವ ದಾಖಲೆಗೆ ಅರ್ಜಿ ಸಲ್ಲಿಸುವರೋ ಆ ದಾಖಲೆಯನ್ನೇ ಮೊದಲು ಸ್ಕ್ಯಾನ್ ಮಾಡುತ್ತೇವೆ ಎಂದರು.

ಬೆಂಗಳೂರು ಸುತ್ತಮುತ್ತ ಅನೇಕ ದಾಖಲೆಗಳಲ್ಲಿ ನಕಲಿ ದಾಖಲಾತಿಗಳನ್ನು ಮಾಡಲಾಗಿದೆ, ಈ ಕೃತ್ಯದಲ್ಲಿ ಕೆಲವು ಅಧಿಕಾರಿಗಳ ಕೈವಾಡವೂ ಇದೆ. ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟಾಗಿದೆ, ಅಲ್ಲದೆ, ನಕಲಿ ದಾಖಲೆಗಳ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸರ್ಕಾರಕ್ಕೂ ಸತತ ಸೋಲಾಗುತ್ತಿದೆ.

ಕೆಲವು ಅಧಿಕಾರಿಗಳ ಕುಕೃತ್ಯದಿಂದ ಸಾರ್ವಜನಿಕ ಆಸ್ತಿ ವ್ಯವಸ್ಥಿತವಾಗಿ ಭೂಮಿ ದೋಚುವವರ ಪಾಲಾಗಿದೆ. ಇನು ಇಂತಹ ಅನಾಹುತ ಆಗದಂತೆ ತಡೆಯಬೇಕಿದೆ, ದಂಧೆಗೆ ಭೂ ಸುರಕ್ಷಾ ಯೋಜನೆ ಮೂಲಕ ಕಡಿವಾಣ ಹಾಕುತ್ತಿದ್ದೇವೆ.

ದಾಖಲೆಗಳು ನಕಲಿ ಎಂಬುದು ಕಂಡುಬಂದರೆ, ಫೋರೆನ್ಸಿಕ್ ವಿಭಾಗದಿಂದ ತನಿಖೆ ನಡೆಸಿ ಸತ್ಯ ಸಾಬೀತು ಮಾಡಬೇಕು, ಎಫ್‌ಎಸ್‌ಎಲ್ ತಂಡ ಅಧ್ಯಯನ ನಡೆಸುವುದಕ್ಕೆ ಸಹಾಯವಾಗಲು ಪ್ರಾಯೋಗಿಕ ಕೊಠಡಿಗೆ (ಲ್ಯಾಬ್) ಅಗತ್ಯ ಹಣ ಸಹಾಯ ನೀಡಲೂ ಸಿದ್ದರಿದ್ದೇವೆ ಸೋಲನ್ನು ಒಪ್ಪುವ ಪ್ರಶ್ನೆಯೇ ಇಲ್ಲ, ನಕಲಿ ದಾಖಲೆ ಎಂಬುದು ಗೊತ್ತಾದರೆ ಸುಪ್ರೀಂ ಕೋರ್ಟ್‌ವರೆಗೂ ಹೋರಾಟ ನಡೆಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಆಯುಷ್ ಇಲಾಖೆ ಅಡಿಯಲ್ಲಿರುವ ಎಲ್ಲಾ ಔಷಧಿಗಳು ಎಫ್‌ಡಿಎ ವ್ಯಾಪ್ತಿಗೆ

ಬೆಂಗಳೂರು: ಆಯುರ್ವೇದ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ ವಿಭಾಗಗಳನ್ನು ಒಳಗೊಂಡಂತೆ ಆಯುಷ್ ಇಲಾಖೆಯ ಅಡಿಯಲ್ಲಿರುವ ಎಲ್ಲಾ ಔಷಧಿಗಳನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ (ಎಫ್‌ಡಿಎ)ದ ಔಷಧ ನಿಯಂತ್ರಣ ವಿಭಾಗದ ಅಡಿಯಲ್ಲಿ ತರಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೋಮವಾರ ಹೇಳಿದರು.

ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಅವರು, ಔಷಧಿಗಳ ಗುಣಮಟ್ಟವನ್ನು ಸುಧಾರಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕಡಿಮೆ ಗುಣಮಟ್ಟದ ಔಷಧಿಗಳನ್ನು ಮಾರುಕಟ್ಟೆಯಿಂದ ಕೇವಲ ಎರಡು ದಿನಗಳಲ್ಲಿ ಹಿಂಪಡೆಯುವ ವ್ಯವಸ್ಥೆ ಜಾರಿ ಮಾಡಲಾಗಿದೆ. ಈ ಹಿಂದೆ, ಒಂದು ಔಷಧವನ್ನು ಗುಣಮಟ್ಟವಲ್ಲ ಎಂದು ಗುರುತಿಸಿದರೆ, ಅದನ್ನು ಔಷಧಾಲಯಗಳು ಮತ್ತು ವಿತರಕರಿಂದ ಹಿಂತಿರುಗಿಸಲು 30 ದಿನಗಳವರೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈಗ, ಆ ಸಮಯವನ್ನು ಕೇವಲ ಎರಡು ದಿನಗಳವರೆಗೆ ಕಡಿತಗೊಳಿಸಲಾಗಿದೆ. ಸುಮಾರು 40,48,436 ರೂ.ಗಳ ಮೌಲ್ಯದ ಗುಣಮಟ್ಟವಲ್ಲದ ಔಷಧಗಳನ್ನು ಮಾರುಕಟ್ಟೆಯಿಂದ ಹಿಂಪಡೆದು ಜಪ್ತಿ ಮಾಡಲಾಗಿದೆ ಎಂದು ತಿಳಿಸಿದರು.

ಜೂನ್ 24 ಮತ್ತು 25ರಂದು ಔಷಧ ಆಡಳಿತದ ಅಮಲು ಜಾರಿ ಅಧಿಕಾರಿಗಳು ಮಾದಕ ವಸ್ತುಗಳ ದುರ್ಬಳಕೆಯನ್ನು ತಡೆಗಟ್ಟಲು 279 ವಿಶೇಷ ಪರಿವೀಕ್ಷಣೆಯನ್ನು ಕೈಗೊಂಡು, ಉಲ್ಲಂಘನೆ ಕಂಡು ಬಂದ 231 ಪ್ರಕರಣಗಳಲ್ಲಿ ಶೋಕಾಸ್ ನೋಟೀಸ್ ನೀಡಿದ್ದಾರೆ. ಹಾಗೆಯೇ 15 ಔಷಧ ಮಳಿಗೆಗಳಿಗೆ ಆಜ್ಞಾಪಾಲನೆ (ಕಂಪ್ಲೈನ್ಸ್) ಪತ್ರವನ್ನು ನೀಡಿದ್ದಾರೆ. ಇನ್ನು ಔಷಧ ಮತ್ತು ಕಾಂತಿವರ್ಧಕ ಅಧಿನಿಯಮ ಉಲ್ಲಂಘನೆ ಮಾಡಿದ 29 ಸಂಸ್ಥೆಗಳ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ದಾಖಲಿಸಲಾಗಿದೆ.

ಆಹಾರ ಮಾದರಿ ಸಂಗ್ರಹ: ಜುಲೈ ತಿಂಗಳಲ್ಲಿ 3,489 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಿದ್ದು, ಅವುಗಳಲ್ಲಿ 17 ಅಸುರಕ್ಷಿತ ಮಾದರಿಗಳಾಗಿದ್ದು, 18 ಕೆಳದರ್ಜೆಯ ಮಾದರಿಗಳಾಗಿವೆ. ಬೆಂಗಳೂರು ನಗರದ ಎಂಪೈರ್ ಹೋಟೆಲ್‌ಗಳಲ್ಲಿ 6 ಕಬಾಬ್ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೊಳಪಡಿಸಿದ್ದು, ಎಲ್ಲ ಮಾದರಿಗಳೂ ಕೃತಕ ಬಣ್ಣಗಳನ್ನು ಹೊಂದಿದ್ದರಿಂದ ಅಸುರಕ್ಷಿತ ಎಂದು ವರದಿಯಾಗಿದೆ. ಈ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ದಾಖಲಿಸುವುದಾಗಿ ಉದ್ದಿಮೆದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯಾದ್ಯಂತ 1,557 ಬೀದಿ ಬದಿ ವ್ಯಾಪಾರ ಘಟಕಗಳಿಗೆ ಭೇಟಿ ನೀಡಿದ್ದು, ಲೋಪಗಳು ಕಂಡು ಬಂದಿರುವ 406 ಘಟಕಗಳಿಗೆ ನೋಟಿಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ. ಸ್ಥಳದಲ್ಲೇ 44,500 ರೂ.ಗಳ ದಂಡವನ್ನು ವಿಧಿಸಲಾಗಿದೆ. 1,240 ಬೀದಿ ಬದಿ ಆಹಾರ ವ್ಯಾಪಾರಿಗಳಿಗೆ ನೈರ್ಮಲ್ಯತೆ ಮತ್ತು ಗುಣಮಟ್ಟದ ತರಬೇತಿಯನ್ನು ನೀಡಲಾಗಿದೆ. ಹಾಗೆಯೇ 866 ಬೀದಿ ಬದಿಯ ವ್ಯಾಪಾರ ಘಟಕಗಳಿಗೆ ಉಚಿತ ನೋಂದಣಿಯನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ಇನ್ನು 186 ಬಸ್ ನಿಲ್ದಾಣಗಳಲ್ಲಿನ 889 ಆಹಾರ ಮಳಿಗೆಗಳಿಗೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿದ್ದು, ಲೋಪಗಳು ಕಂಡು ಬಂದಿರುವ 206 ಘಟಕಗಳಿಗೆ ನೋಟಿಸ್‌ಗಳನ್ನು ಜಾರಿ ಮಾಡಿದ್ದಾರೆ. ಸ್ಥಳದಲ್ಲೇ 55,000 ರೂ.ಗಳ ದಂಡವನ್ನು ವಿಧಿಸಲಾಗಿದೆ. 99 ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ಸಲ್ಲಿಸಲಾಗಿದ್ದು, ವಿಶ್ಲೇಷಣಾ ಕಾರ್ಯವು ಪ್ರಗತಿಯಲ್ಲಿದೆ ಎಂದು ಅವರು ವಿವರಿಸಿದರು.

ಮೈಸೂರು ಪ್ರಾದೇಶಿಕ ಪ್ರಭಾರ ಜಂಟಿ ನಿರ್ದೇಶಕರಾಗಿ ಡಾ.ಪ್ರತಿಮಾ ನೇಮಕ



ಮೈಸೂರು, ಆ.5(ಎಸ್‌ಪಿಎನ್)– ಬೆಂಗಳೂರು ಚಾಮರಾಜಪೇಟೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಹಾಗೂ ಪ್ರಭಾರ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ.ಡಿ. ಎಸ್.ಪ್ರತಿಮಾ ಅವರನ್ನು ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಹುದ್ದೆಗೆ ಪ್ರಭಾರ ವಹಿಸಿ ಕಾಲೇಜು ಶಿಕ್ಷಣ ಇಲಾಖೆ ನೇಮಕ ಮಾಡಿ ಆದೇಶಿಸಿದೆ.

ಅವರನ್ನು ಮಾತೃ ಕಾಲೇಜಿನಲ್ಲಿಯೇ ಲೀನ್ ಉಳಿಸಿ, ಜೊತೆಗೆ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರ ಪ್ರಭಾರ ವಹಿಸಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರು ಆದೇಶಿಸಿದ್ದಾರೆ.

ಬೆಂಗಳೂರು ಪ್ರಾದೇಶಿಕ ಪ್ರಭಾರ ಜಂಟಿ ನಿರ್ದೇಶಕ ಡಾ.ಕೆ.ರಾಮ ಕೃಷ್ಣ ರೆಡ್ಡಿ ಅವರಿಗೆ ಮೈಸೂರು ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕರ ಹುದ್ದೆ ಹೆಚ್ಚುವರಿಯಾಗಿ ವಹಿಸಲಾಗಿತ್ತು. ಈ ನೇಮಕಾತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ ಎಂದು ಆಯುಕ್ತರು ಆದೇಶದಲ್ಲಿ ತಿಳಿಸಿದ್ದಾರೆ. ಆ.6ರಂದು ಮೈಸೂರು ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕರಾಗಿ ಡಾ.ಡಿ. ಎಸ್.ಪ್ರತಿಮಾ ಅಧಿಕಾರ ಸ್ವೀಕರಿಸಲಿದ್ದಾರೆ

ಇಂದು ಒಕ್ಕಲಿಗ ಹಿತಚಿಂತಕರ ಸಭೆ

ಮೈಸೂರು, ಆ.5– ಒಕ್ಕಲಿಗ ಸಮುದಾಯವನ್ನು ಅವಹೇಳನ ಮಾಡುವ ಪ್ರವೃತ್ತಿ ಮುಂದುವರೆಯದಂತೆ ಎಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಬುಧವಾರ(ಆ.6) ಸಂಜೆ 5.30ಕ್ಕೆ ಒಕ್ಕಲಿಗ ಹಿತಚಿಂತಕರ ಸಭೆ ಕರೆಯಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಎನ್.ಗಂಗರಾಜು ತಿಳಿಸಿದ್ದಾರೆ. ಜಯನಗರದ ಹೊಸ ನ್ಯಾಯಾಲಯದ ಎದುರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್‌ನ ಕಿರು ಸಭಾಂಗಣದಲ್ಲಿ ಸಭೆ ನಡೆಯಲಿದ್ದು, ಸಮುದಾಯದ ಬಂಧುಗಳು ಭಾಗವಹಿಸಿ ಸಲಹೆ–ಸೂಚನೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಇತ್ತೀಚೆಗೆ ನಮ್ಮ ಸಮಾಜದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಜಿ.ವಿ. ಸೀತಾರಾಮ್ ವಿರುದ್ಧ ನಾನು ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಆ ಸಂಬಂಧ ಎಫ್‌ಐಆರ್ ಆಗಿದೆ. ಆದರೆ ಒಕ್ಕಲಿಗ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡುವ ಪ್ರವೃತ್ತಿಗೆ ತಡೆ ಬೀಳದಿರುವುದು ವಿಷಾದನೀಯ. ಈ ರೀತಿಯ ಬೆಳವಣಿಗೆ ಮರುಕಳಿಸದಂತೆ ಎಚ್ಚರಿಕೆ ವಹಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಇಂತಹ ಘಟನೆಗಳಾದಾಗ ತಕ್ಷಣ ಸ್ಪಂದಿಸುವ, ಪ್ರತಿಕ್ರಿಯಿಸುವ ನಿಟ್ಟಿನಲ್ಲಿ ಸೂಕ್ತ ವ್ಯವಸ್ಥೆ ರೂಪಿಸಿಕೊಳ್ಳಲು ನಿಮ್ಮೆಲ್ಲರ ಸಹಕಾರ ಅತ್ಯಗತ್ಯವಾಗಿದೆ ಎಂದು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಪದ್ಮಶ್ರೀ ದೊರಕಿದ್ದು ನನಗಲ್ಲ, ಆದಿವಾಸಿಗಳ ಪರ ನನ್ನ ಹೋರಾಟಕ್ಕೆ

ಮೊತ್ತ ಹಾಡಿ ನಿವಾಸಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸೋಮಣ್ಣ ಅವರಿಗೆ ಅಭಿನಂದನೆ



ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಆದಿವಾಸಿ ಹೋರಾಟಗಾರ ಸೋಮಣ್ಣ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.5(ಎಸ್‌ಪಿಎನ್)– ಪದ್ಮಶ್ರೀ ದೊರಕಿದ್ದು, ನನಗಲ್ಲ. ಬದಲಾಗಿ ಆದಿವಾಸಿಗಳ ಪರ ನಿಂತು ಹೋರಾಟ ರೂಪಿಸಿದ್ದಕ್ಕೆ ದೊರಕಿದೆ ಎಂದು ಎಚ್.ಡಿ. ಕೋಟೆ ತಾಲೂಕಿನ ಮೊತ್ತ ಹಾಡಿ ನಿವಾಸಿ, ಪದ್ಮಶ್ರೀ ಪುರಸ್ಕೃತ ಸೋಮಣ್ಣ ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾ ಭವನದಲ್ಲಿ ಜನಚೈತನ್ಯ ಫೌಂಡೇಷನ್ ವತಿಯಿಂದ 'ಓ ನನ್ನ ಚೇತನ ಆಗು ನೀ ಅನಿಕೇತನ' ಶೀರ್ಷಿಕೆಯಡಿ ಏರ್ಪಡಿಸಲಾಗಿದ್ದ ಭಾವಗೀತೆ ಮತ್ತು ಜನಪದ ಗೀತೆಗಳ ಸಮ್ಮಿಲನ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ನನ್ನಂತೆ ಅದೆಷ್ಟು ಜನ ಆದಿವಾಸಿಗಳು, ಕಾರ್ಮಿಕರು ಮತ್ತು ರೈತರ ಪರವಾಗಿ ಹೋರಾಟ ಮಾಡುತ್ತಿದ್ದಾರೆ. ಅವರೆಲ್ಲರಿಗೂ ಕೇಂದ್ರದ ಪ್ರಶಸ್ತಿ, ಪುರಸ್ಕಾರಗಳು ಸಿಗಬೇಕು. ಸತ್ಯದ ಹೋರಾಟಕ್ಕೆ ಎಂದಿಗೂ ಜಯವಿದೆ ಎಂಬುದಕ್ಕೆ ನಾನೇ ಸಾಕ್ಷಿ. ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಸಂವಿಧಾನದಿಂದಾಗಿ ನಮಗೆ ಹಕ್ಕುಗಳು ದೊರಕಿದ್ದು, ಇದರಿಂದ ನಮ್ಮ ಬದುಕು ಹಸನಾಗಿದೆ ಎಂದರು.

ಆದಿವಾಸಿಗಳು ಯಾವುದೇ ಸೌಲಭ್ಯಗಳಿಲ್ಲದೇ ಕಾಡಂಚಿನಲ್ಲಿ ವಾಸಿಸುತ್ತಿದ್ದಾರೆ. ನಾವು ಈ ಹಿಂದೆ ಎಚ್.ಡಿ. ಕೋಟೆಯ ಕಾಡಿನ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಅವುಗಳನ್ನು ಮಾರಾಟ ಮಾಡಿ, ಜೀವನ ಸಾಗಿಸಬೇಕಿತ್ತು. ನನ್ನ ತಾಯಿಯ ಕಷ್ಟವನ್ನು ನೋಡಲಾಗದೇ ನಾನೂ ಸಹ ಶಾಲೆ ಬಿಟ್ಟು ಕೆಲಸಕ್ಕೆ ಸೇರಿದ್ದ ದಿನಗಳನ್ನು ನೆನಪು ಮಾಡಿಕೊಂಡರು. ಕೊನೆಗೊಂದು ದಿನ ಎಲ್ಲದಕ್ಕೂ ಮುಕ್ತಿ ಹೊಂದಿ ಸ್ವತಂತ್ರದ ಬದುಕು ರೂಪಿಸಿಕೊಂಡಿದ್ದೇನೆ. ಇದು ಸಾಧ್ಯವಾಗಿದ್ದು, ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಡಿ.ದೇವರಾಜ ಅರಸು ಅವರು ಜಾರಿಗೆ ತಂದ ಜೀತಮುಕ್ತ ಕಾಯ್ದೆಯಿಂದ. ಇದರಿಂದ ನನಗೆ ಪುನರ್ಜನ್ಮ ದೊರಕಿತು ಎಂದರು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿ, ಮೈಸೂರಿನ ಎಲ್ಲಾ ಪ್ರಕಾರದ ಸಂಗೀತಕ್ಕೂ ಜನರ ಪ್ರೋತ್ಸಾಹವಿದೆ. ಜನಚೈತನ್ಯ ಫೌಂಡೇಷನ್‌ನ ಆರ್.ಲಕ್ಷ್ಮಣ್ ಸಾರಥ್ಯದಲ್ಲಿ ಹಲವು ವರ್ಷಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ, ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದಿದ್ದಾರೆ. ಇದೇ ವೇದಿಕೆಯಲ್ಲಿ ಆದಿವಾಸಿ ಹೋರಾಟಗಾರ ಸೋಮಣ್ಣ ಅವರ ಸನ್ಮಾನಿಸಿರುವುದು ಸಂತೋಷದ ಸಂಗತಿ ಹಾಗೂ ಇತ್ತೀಚೆಗೆ ನಿಧನರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಹಿರಿಯ ಸಾಹಿತಿ ಪ್ರೊ. ಎಚ್.ಎಸ್. ವೆಂಕಟೇಶ್ ಮೂರ್ತಿ ಅವರ ಸಂಸ್ಮರಣೆ ಅರ್ಥಪೂರ್ಣವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಆದಿವಾಸಿ ಹೋರಾಟಗಾರ ಸೋಮಣ್ಣ ಅವರನ್ನು ಸನ್ಮಾನಿಸಲಾಯಿತು. ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ನೇತೃತ್ವದಲ್ಲಿ ಜನಪ್ರಿಯ ಜಾನಪದ ಗಾಯಕರಾದ ಅಮ್ಮ ರಾಮಚಂದ್ರ, ಆರ್. ಲಕ್ಷ್ಮಣ್, ಜಾಯ್ಸ್ ವೈಶಾಕ್, ಪುಷ್ಪಲತಾ ಶಿವಕುಮಾರ್, ವೈ.ಎಂ. ನಾಗೇಂದ್ರ, ರವಿರಾಜ್, ಸೌಮ್ಯ ಪ್ರಕಾಶ್, ಶೇಷಾದ್ರಿ, ಡಾ. ತಿರುಮಲೇಶ್, ಶ್ರದ್ಧಾ ರವಿರಾಜ್ ಮತ್ತಿತರರು ಗಾಯನ ಪ್ರಸ್ತುತಪಡಿಸಿದರು.

'ಓ ನನ್ನ ಚೇತನ ಆಗು ನೀ ಅನಿಕೇತನ' ಶೀರ್ಷಿಕೆಯಡಿ ಏರ್ಪಡಿಸಿದ್ದ ಸಮಾರಂಭದಲ್ಲಿ ಇತ್ತೀಚೆಗೆ ನಿಧನರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಹಾಗೂ ಹಿರಿಯ ಸಾಹಿತಿ ಪ್ರೊ.ಎಚ್. ಎಸ್. ವೆಂಕಟೇಶ್‌ಮೂರ್ತಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಒಂದು ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜು ವಿ. ಭೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಹಕಾರ ಇಲಾಖೆ ಜಂಟಿ ನಿಬಂಧಕ ಬೀರೇಂದ್ರ, ಪ್ರತಿಮಾ ಅರುಣ್, ಎನ್.ಶ್ರೀನಿವಾಸಲು, ಬಿ.ಎಸ್. ವಿಜಯ್, ಆನಂದ್, ಕೆ. ನರಸಿಂಹಮೂರ್ತಿ ಮತ್ತಿತರರು ಇದ್ದರು.

ಸಹೋದರನ ಮನೆಗೇ ಸಹೋದರನಿಂದಲೇ ಕನ್ನ

* ಒಂಭತ್ತು ಲಕ್ಷ ಮೌಲ್ಯದ ಚಿನ್ನಾಭರಣ; 5.15 ಲಕ್ಷ ನಗದು ಕಳವು * ತನಿಖೆ ವೇಳೆ ಬಾಯ್ಬಿಟ್ಟ ರಾಜೇಂದ್ರ ಜೈಲುಪಾಲು



ಮೈಸೂರು, ಆ.5– ಸಹೋದರನ ಮನೆಯ ಚಾವಣಿ ಮುರಿದು ಲಕ್ಷಾಂತರ ರೂ. ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದ ವ್ಯಕ್ತಿ, ಪೊಲೀಸರ ವಿಚಾರಣೆ ವೇಳೆ ಸಿಕ್ಕಿ ಬಿದ್ದಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ನಂಜನಗೂಡು ತಾಲೂಕು ಹುಲ್ಲಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮಡಿಕೆ ಹುಂಡಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಸಹೋದರ ಕೃಷ್ಣನಾಯಕ ಅವರ ಮನೆಗೆ ಕನ್ನಹಾಕಿದ್ದ ರಾಜೇಂದ್ರ ಜೈಲು ಸೇರಿದ್ದಾನೆ.

ಪ್ರಕರಣದ ವಿವರ: ಕೃಷ್ಣನಾಯಕ ಕುಟುಂಬದವರು ಎಂದಿನಂತೆ ಜು.7ರಂದು ಬೆಳಗ್ಗೆ ಮನೆಗೆ ಬೀಗ ಹಾಕಿಕೊಂಡು ಜಮೀನಿನ ಕೆಲಸಕ್ಕೆ ಹೋಗಿ, ವಾಪಸ್ ಬರುವಷ್ಟರಲ್ಲಿ ಮನೆಯ ಚಾವಣಿ ತೆರೆದಿತ್ತು. ಗಾಬರಿಯಿಂದ ಮನೆಯಲ್ಲಿ ಪರಿಶೀಲಿಸಿದಾಗ ಸುಮಾರು 9 ಲಕ್ಷ ಮೌಲ್ಯದ 90 ಗ್ರಾಂ ಚಿನ್ನಾಭರಣ ಹಾಗೂ 5.15 ಲಕ್ಷ ನಗದು ಕಳುವಾಗಿತ್ತು. ಈ ಬಗ್ಗೆ ಕೃಷ್ಣನಾಯಕ ಅವರ ಪತ್ನಿ ಸಣ್ಣತಾಯಮ್ಮ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಮನೆಗಳ್ಳತನ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ವಿಚಾರಣೆ ನಡೆಸುವ ವೇಳೆ ಕೃಷ್ಣನಾಯಕ ಸಹೋದರ ರಾಜೇಂದ್ರ ಅನುಮಾನಾಸ್ಪದವಾಗಿ ವರ್ತಿಸುವುದನ್ನು ಗಮನಿಸಿದ್ದರು.

ಬಳಿಕ ಅವನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ತಾನೇ, ಸಹೋದರನ ಮನೆಯಲ್ಲಿ ಕಳ್ಳತನ ಮಾಡಿದ್ದಾಗಿ ತಿಳಿಸಿದ್ದಾನೆ. ಕೂಡಲೇ ಅವನನ್ನು ಬಂಧಿಸಿ, ಆತನಿಂದ ಚಿನ್ನಾಭರಣ ಹಾಗೂ ನಗದನ್ನು ವಶಪಡಿಸಿಕೊಂಡಿದ್ದಾರೆ. ಬಳಿಕ ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಧೀಶರ ಆದೇಶದಂತೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ, ಎಎಸ್‌ಪಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ್ ಮಾರ್ಗದರ್ಶನ, ನಂಜನಗೂಡು ಉಪವಿಭಾಗದ ಡಿವೈಎಸ್‌ಪಿ ಜಿ. ಎಸ್.ರಘು ನೇತೃತ್ವದಲ್ಲಿ ಸಿಪಿಐ ಚಂದ್ರಶೇಖರ್, ಪಿಎಸ್‌ಐ ರಸೂಲ್ ಪಾಗಾವಾಲೆ, ಎಎಸ್‌ಐ ಸತೀಶ್, ಅಬ್ದುಲ್ ಲತೀಫ್, ಭಾಸ್ಕರ, ಅಶೋಕ, ಸಿಬ್ಬಂದಿ ಶಿವಕುಮಾರ, ರಾಜಶೇಖರ್, ಸುಮಂತ್, ಲೋಕೇಶ್, ಆಶಾ ಕಾರ್ಯಾಚರಣೆ ನಡೆಸಿ, ಪ್ರಕರಣವನ್ನು ಭೇದಿಸಿದ್ದಾರೆ.

ಗೋಕುಲಂ ಅಂಚೆ ಕಚೇರಿಗೆ ಶೀಘ್ರವೇ ಸ್ವಂತ ಕಟ್ಟಡ ಭಾಗ್ಯ

ಸಂಸದ ಯದುವೀರ್ ಭರವಸೆ



ಮೈಸೂರಿನ ವಾರ್ಡ್ ನಂ.6 ಗೋಕುಲಂ–ಬೃಂದಾವನ ಬಡಾವಣೆ ವಾರ್ಡ್ ಸಮಿತಿ ಬಳಗದ ಪ್ರಥಮ ವಾರ್ಷಿಕೋತ್ಸವವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಮೈಸೂರು, ಆ.5– ಮೈಸೂರಿನ ಗೋಕುಲಂ ಅಂಚೆ ಕಚೇರಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಶೀಘ್ರದಲ್ಲೇ ಶಿಲಾನ್ಯಾಸ ನೆರವೇರಿಸುವುದಾಗಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ.

ಗೋಕುಲಂ ಮೂರನೇ ಹಂತದ ಸಾಂಸ್ಕೃತಿಕ ಭವನದಲ್ಲಿ ಏರ್ಪಡಿಸಿದ್ದ ವಾರ್ಡ್ ನಂ.6 ಗೋಕುಲಂ–ಬೃಂದಾವನ ಬಡಾವಣೆ ವಾರ್ಡ್ ಸಮಿತಿ ಬಳಗದ ಪ್ರಥಮ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಚೆ ಕಚೇರಿಗೆ ಸ್ವಂತ ಕಟ್ಟಡ ನಿರ್ಮಾಣ ಸಂಬಂಧ ಬಹುತೇಕ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ನಿಗದಿತ ಸ್ಥಳದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಪಾಲಿಕೆ ಕೌನ್ಸಿಲ್ ಚುನಾವಣೆಯಾದರೆ ವಾರ್ಡ್ ಸಮಿತಿಗಳಿಗೆ ಹೆಚ್ಚು ಬಲ ಸಿಗಲಿದೆ. ಆದಾಗ್ಯೂ ಯೋಗ, ಕಲೆ, ಸಂಸ್ಕೃತಿ ಮೂಲಕ ವಿಶ್ವಕ್ಕೆ ತಿಳಿದಿರುವ ಗೋಕುಲಂನಲ್ಲಿ ವಾರ್ಡ್ ಸಮಿತಿ ಸಾರ್ವಜನಿಕ ಹಿತದೃಷ್ಟಿಯಿಂದ ಸಕ್ರಿಯವಾಗಿರುವುದು ಅನುಕರಣೀಯ ಎಂದು ಪ್ರಶಂಸಿಸಿದರು.

ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಸಂಸ್ಥಾಪಕರಾದ ಭಾಮಿ ವಿ.ಶೆಣೈ ಮಾತನಾಡಿ, ವಾರ್ಡ್ ಸಮಿತಿ ಸಭೆಯಲ್ಲಿ ಸದಸ್ಯರು ಮಾತ್ರವಲ್ಲದೆ ಹೆಚ್ಚಿನ ಸಂಖ್ಯೆಯ ನಿವಾಸಿಗಳು ಪಾಲ್ಗೊಳ್ಳುವುದು ಬಹಳ ಮುಖ್ಯ. ಅದರಲ್ಲೂ ವಾರ್ಡ್ ನಿರ್ವಹಣೆ, ಅಭಿವೃದ್ಧಿ ಬಗ್ಗೆ ಯುವ ಜನತೆಗೆ ಅರಿವು ಮೂಡಿಸಿ, ಪ್ರತಿಯೊಬ್ಬರ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡಬೇಕು ಎಂದು ಸಲಹೆ ನೀಡಿದರು.

ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಶಿಪ್ ಅಂಡ್ ಡೆಮಾಕ್ರಸಿ ರಾಜ್ಯ ಕಾರ್ಯಕ್ರಮದ ಸೀನಿಯರ್ ಅಸೋಸಿಯೇಟ್ ಮಂಜುನಾಥ್ ಮೊಕಾಶಿ ಮಾತನಾಡಿ, ವಾರ್ಡ್ ಸಮಿತಿಗಳು ಮಂಗಳೂರು ನಗರದಲ್ಲಿ ಹೆಚ್ಚು ಕ್ರಿಯಾಶೀಲವಾಗಿವೆ. ಮೈಸೂರಿನಲ್ಲೂ ಸಾರ್ವಜನಿಕರು ತಮ್ಮ ವಾರ್ಡ್ ಅಭಿವೃದ್ಧಿಗೆ ಸಹಕರಿಸಬೇಕು. ಜನಾಂದೋಲನದ ಮೂಲಕ ಸರ್ಕಾರದಿಂದ ಪರಿಹಾರಗಳನ್ನು ನಿರೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ವಾರ್ಡ್ ಸಮಿತಿ ಬಳಗದ ಮುಖ್ಯಸ್ಥ ಡಿ.ವಿ.ದಯಾನಂದ ಸಾಗರ್, ವಾರ್ಡ್ ಸಮಿತಿಯ ಧ್ಯೇಯೋದ್ದೇಶ ಹಾಗೂ ವಾರ್ಷಿಕ ಚಟುವಟಿಕೆ ಬಗ್ಗೆ ಮಾಹಿತಿ ನೀಡಿದರು. ಶ್ರೀಮತಿ ಮಾಲವಿಕಾ ಗುಬ್ಬಿವಾಣಿ ಅವರು ಪೌರಕಾರ್ಮಿಕರ ಕೆಲಸವನ್ನು ಶ್ಲಾಘಿಸಿ, ವಾರ್ಡ್ ಸಮಿತಿ ಪ್ರಾಮುಖ್ಯತೆ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕಿ ಜಿ.ರಾಜಲಕ್ಷ್ಮೀ ಶ್ರೀಧರ್, ಬಳಗದ ಸದಸ್ಯ ರವಿಚಂದ್ರ, ಶ್ರೀದೇವಿ, ಮೋಹನ್ ಕುಮಾರ್, ಯಮುನಾ, ಭಾರತಿ ಮತ್ತಿತರರು ಉಪಸ್ಥಿತರಿದ್ದರು.


ಸ್ವಾಭಿಮಾನಿ ಚಕ್ರವರ್ತಿ
ಮೈಸೂರಿನ ಅಶೋಕ, ಚಾಮರಾಜನಗರದ ಭೀಮ
ಹಿರಿಯ ರಾಜಕೀಯ ಮುತ್ಸದ್ದಿ
ವಿ.ಶ್ರೀನಿವಾಸ ಪ್ರಸಾದ್ ಅವರ
78ನೇ ಜನ್ಮದಿನಾಚರಣೆ
ಸ್ವಾಭಿಮಾನಿ ಸಂಪದ-78
ದಿವ್ಯ ಸಾನಿಧ್ಯ
ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಶ್ರೀಕ್ಷೇತ್ರ ಸುತ್ತೂರು ಮಠ
ಅಧ್ಯಕ್ಷತೆ
ಪಿ.ಜಿ. ಆರ್. ಸಿಂಧ್ಯಾ
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಭಾಷಣಕಾರರು
ಪ್ರೊ. ಕಾಳೇಗೌಡ ನಾಗವಾರ
ಹಿರಿಯ ಸಾಹಿತಿಗಳು
ಘನ ಉಪಸ್ಥಿತಿ
ಬಿ. ಶ್ರೀರಾಮುಲು
ಮಾಜಿ ಸಚಿವರು ಕರ್ನಾಟಕ ಸರ್ಕಾರ
ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್
ಅಧ್ಯಕ್ಷರು, ಡಾ.ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ & ಕಲ್ಚರಲ್ ಟ್ರಸ್ಟ್(ರಿ) ಮೈಸೂರು.
ಮಾ. ವೆಂಕಟರಾಮು
ಅಧ್ಯಕ್ಷರು ಸೇವಾಭಾರತಿ ಚಾಮರಾಜನಗರ, ಆರೆಸ್ಸೆಸ್ ಹಿರಿಯ ಮುಖಂಡರು.
ದಿನಾಂಕ : 06-08-2025ನೇ ಬುಧವಾರ
ಸಮಯ ಮಧ್ಯಾಹ್ನ: 12:30ಕ್ಕೆ
ಸ್ಥಳ: ಜೆಎಸ್ಎಸ್ ಮಂಗಳ ಮಂಟಪ, ನಂಜನಗೂಡು.
ಬಿ.ಹರ್ಷವರ್ಧನ್
ಮಾಜಿ ಶಾಸಕರು ನಂಜನಗೂಡು ಕ್ಷೇತ್ರ.
ಸರ್ವರಿಗೂ ಸುಸ್ವಾಗತ
ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿಗಳು, ಹಿತೈಷಿಗಳು, ನಂಜನಗೂಡು


ನಂಜನಗೂಡು ಪಟ್ಟಣ ಬ್ಲಾಕ್ ಕಾಂಗ್ರೆಸ್
ಅಧ್ಯಕ್ಷರು ಹಾಗೂ ಮಾಜಿ ಪುರಸಭಾ ಅಧ್ಯಕ್ಷರಾದ
ಶ್ರೀ ಸಿ.ಎಂ. ಶಂಕರ್ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ಸಿ.ಎಂ.ಶಂಕರ್‌ರವರ ಸ್ನೇಹ ಬಳಗ